# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮೇ, ೨೦೧೪ ಸಂಪುಟ: ೩ ಸಂಚಿಕೆ ೧೦

**ಸಂಪಾದಕ : ಡಿ.ಎಸ್.ನಾಗಭೂಷಣ**

**ಚಂದಾ :** ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/-

**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಚುನಾವಣೆಗಳು ಮುಗಿದಿವೆ. ಕರ್ನಾಟಕದ ಮಟ್ಟಿಗಾದರೂ. ದೇಶದ ಬೇರೆ ಭಾಗಗಳಲ್ಲಿ ಇನ್ನೊಂದೆರಡು ಸುತ್ತು ಮತದಾನ ಮುಗಿದ ಮೇಲೆ ಇದೇ ೧೬ರಂದು ಫಲಿತಾಂಶಗಳು ಹೊರಬರಲಿವೆ. ಮುಂದಿನ ಸರ್ಕಾರದ ಸ್ವರೂಪವೇನು ಎಂಬುದು ಗೊತ್ತಾಗಲಿದೆ. ಮಾಧ್ಯಮ ಸಮೀಕ್ಷೆಗಳ ಹಿನ್ನೆಲೆಯಲ್ಲಿ ಮೋದಿ ಈಗಾಗಲೇ ಪ್ರಧಾನಿಯಾಗಿಬಿಟ್ಟಿದ್ದಾರೆ ಎಂಬ ಉಮೇದಿನಲ್ಲೇ ಪ್ರಚಾರ ಕೈಗೊಂಡಿರುವ ಬಿಜೆಪಿ ಮತ್ತು ಹಿಂದಿನ ಎಲ್ಲ ಸಮೀಕ್ಷೆಗಳು ಸುಳ್ಳಾಗಿವೆ ಎಂಬ ಆಶಾಕಿರಣದೊಂದಿಗೆ ಪ್ರಚಾರ ಮಾಡುತ್ತಿರುವ ಕಾಂಗ್ರೆಸ್ ಅಂದು ನಿಜವನ್ನು ಎದುರಿಸಲಿವೆ. ಕೊನೆ ಕೊನೆಯ ದಿನಗಳಲ್ಲಿ ಕಾಂಗ್ರೆಸ್‌ನ ಸ್ಥಿತಿ ಸ್ವಲ್ಪ ಸುಧಾರಿಸಿದಂತಿದೆ ಎಂಬ ಭಾವನೆ ಇದ್ದರೂ, ಅದರ ಅಧಿಕಾರದ ಕೊನೆಯ ಐದು ವರ್ಷಗಳ ಪಾಪದ ಭಾರ ಅದನ್ನು ದಡ ಮುಟ್ಟಿಸಲಾರದೆಂದೇ ಬಹುಜನರ ಭಾವನೆಯಾಗಿದೆ.

ಕಾಂಗ್ರೆಸ್ಸಿನ ದುರಾಡಳಿತದ ಈ ಪಾಪದ ಭಾರ ಎಷ್ಟು ದೊಡ್ಡದೆಂದರೆ, ಮೋದಿ ಎಂಬ ಅರಿಭಯಂಕರನ ಆಗಮನದ ಭಯ ಕೂಡ ವಿವೇಕವಿದ್ದ ಯಾರಲ್ಲೂ ಕಾಂಗ್ರೆಸ್ಸನ್ನು ನೇರವಾಗಿ ಬೆಂಬಲಿಸುವ ಧೈರ್ಯ ಮೂಡಿಸಲಿಲ್ಲ. ರಾಷ್ಟ್ರದ ಬುದ್ಧಿಜೀವಿಗಳು, ಲೇಖಕರು, ಸಾಮಾಜಿಕ ಕಾರ್ಯಕರ್ತರು ಮತ್ತು ಕಲಾವಿದರು ಜಂಟಿಯಾಗಿ ನೀಡಿದ ಹೇಳಿಕೆ ಕೂಡ ಜನತೆಗೆ ಧರ್ಮ ನಿರಪೇಕ್ಷ ಪಕ್ಷಗಳಿಗೆ ಮತ ಹಾಕಿ ಎಂದು ಕೇಳಿಕೊಂಡಿತಷ್ಟೆ. ಪ್ರಗತಿಪರರೆನಿಸಿಕೊಂಡ ಮಿಕ್ಕವರು ಆಂ ಆದ್ಮಿ ಪಕ್ಷದ ಬೆಂಬಲಿಗರೋ ಅಥವಾ ನೇರವಾಗಿ ಅಭ್ಯರ್ಥಿಗಳಾಗಿಯೋ ನಿಲ್ಲುವ ಧೈರ್ಯ ಮತ್ತು ಕರ್ತೃತ್ವ ಶಕ್ತಿ ತೋರಿದರು. ಆದರೆ ಕರ್ನಾಟಕದ ಕೆಲವು ಬುದ್ಧಿಜೀವಿ-ಲೇಖಕರೆನಿಸಿಕೊಂಡವರು ನೇರವಾಗಿ ಕಾಂಗ್ರೆಸ್ಸಿಗೆ ಬೆಂಬಲ ಘೋಷಿಸಿದರು! ಅದಕ್ಕೆ ಕಾರಣ ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನು ಕುರಿತ ಅವರ ವೈಯುಕ್ತಿಕ ದಾಕ್ಷಿಣ್ಯವೇ ಇರಬಹುದು.

ಈ ದಾಕ್ಷಿಣ್ಯಕ್ಕೆ ಕಾರಣಗಳೇನೇ ಇರಲಿ, ಮೋದಿ ಮುಖದ ಬಿಜೆಪಿ ಇಷ್ಟು 'ಜನಪ್ರಿಯತೆ'ಯ ಹಾಹಾಕಾರದೊಂದಿಗೆ ಬೆಳೆಯಲು ಕಾಂಗ್ರೆಸ್ ಪಕ್ಷದ ಸ್ವರೂಪ ಮತ್ತು ಅದು ಸರ್ಕಾರದ ಮೇಲೆ ಉಂಟು ಮಾಡುತ್ತಿರುವ ದುಷ್ಪರಿಣಾಮಗಳೇ ಕಾರಣ ಎಂದು ಅರಿಯಬಲ್ಲ ಯಾರೂ ಅದನ್ನು ಇಷ್ಟು ನೇರವಾಗಿ ಮತ್ತು ಬೇಷರತ್ತಾಗಿ ಬೆಂಬಲಿಸಲಾರರು. ಕಾಂಗ್ರೆಸ್ ಬುಡಮೇಲಾಗಿ ಬೇರೊಂದು ರೂಪದಲ್ಲಿ ಮರುಹುಟ್ಟು ಪಡೆಯದವರೆಗೆ, ಮೋದಿ ತರಹದ ರಾಜಕೀಯ ವ್ಯಕ್ತಿತ್ವಗಳು ಹುಟ್ಟುತ್ತಲೇ ಇರುತ್ತವೆ ಮತ್ತು ಸಹಜವಾಗಿ ಜನರ ಗಮನ ಸೆಳೆಯುತ್ತಲೇ ಹೋಗುತ್ತವೆ ಎಂಬುದೇಕೆ ಇವರಿಗೆ ಹೊಳೆಯುವುದಿಲ್ಲವೆಂದು ಆಶ್ಚರ್ಯವಾಗುತ್ತದೆ. ಹೋಗಲಿ, ಕಾಂಗ್ರೆಸ್ಸನ್ನು ಚುನಾವಣೆಯ ಸಂದರ್ಭದಲ್ಲಿ ಬೆಂಬಲಿಸುವ ಇವರು ಅದು ದಾರಿ ತಪ್ಪಿದಾಗ, ಅದರ ದುರಾಡಳಿತದ ಸಮಯದಲ್ಲಿ ಒಂದು ಎಚ್ಚರಿಕೆಯ ಮಾತನ್ನಾದರೂ ಆಡಿದರೆ?

ವಿಷಾದದ ಸಂಗತಿ ಎಂದರೆ, ಅನಂತಮೂರ್ತಿಯವರು ಕಿರಣ್ ಮಜುಂದಾರ್, ನಾರಾಯಣ ಮೂರ್ತಿಯವರೂ ಚುನಾವಣೆಗೆ ನಿಲ್ಲಬೇಕು ಎಂದು ತಮ್ಮ ಜಾತಿ ಬಂಧು ನಿಲೇಕಣಿಗೆ ಬೆಂಬಲ ಸೂಚಿಸುವುದರ ಭಾಗವಾಗಿ ಹೇಳುವ ಗಿರೀಶ್ ಕಾರ್ನಾಡರ ಜೊತೆಗೇ ಕೂತು ಕಾಂಗ್ರೆಸ್ಸಿಗೆ ಬೆಂಬಲ ಘೋಷಿಸುತ್ತಾರೆ. ಇವರೊಂದಿಗೆ ಕೂತ ಇನ್ನೊಬ್ಬ ಮಹನೀಯನೆಂದರೆ, ಮೊನ್ನೆ ತಾನೇ ಅಧಿಕಾರ ಉಳಿಸಿಕೊಳ್ಳಲು ಬಿಜೆಪಿಗೆ ರಾಜೀನಾಮೆ ನೀಡಿದ ನಕಲಿಶಾಮ ಮುಖ್ಯಮಂತ್ರಿ ಚಂದ್ರು! ನಮ್ಮ ಈ ಇಬ್ಬರು ಹೆಮ್ಮೆಯ ಲೇಖಕರು ಕಾಂಗ್ರೆಸ್ಸಿಗೆ ಬೆಂಬಲ ಸೂಚಿಸಲು ನೀಡಿರುವ ಕಾರಣಗಳೆಂದರೆ ಮೋದಿಯ ನಿರಂಕುಶತೆ ಮತ್ತು ನರಹತ್ಯೆಯ ಚರಿತ್ರೆ. ಆಯಿತು. ಆದರೆ ಈ ಮೋದಿ ೨೦೦೨ರಲ್ಲಿ ಗುಜರಾತ್‌ನಲ್ಲಿ ನರಹತ್ಯೆ ನಡೆಸುತ್ತಿದ್ದಾಗ ಈ ಇಬ್ಬರು ಮಹನೀಯರು ಎಲ್ಲಿದ್ದರು, ಯಾವ ಸರ್ಕಾರದ ಕೃಪೆಯಡಿಯಲ್ಲಿ ಯಾವ ಪದವಿಗಳನ್ನು ಅಲಂಕರಿಸಿದ್ದರು ಮತ್ತು ಏನು ಮಾತನಾಡಿದರು ಎಂದು ಕೇಳಬಹುದೇ?

ಇನ್ನು ನಮ್ಮ ದೇವನೂರ ಮಹದೇವರನ್ನು ನೋಡಿ. ಅವರು ಏಳು ಕ್ಷೇತ್ರಗಳಲ್ಲಿ ಆಪ್‌ಗೂ, ಉಳಿದವುಗಳಲ್ಲಿ ಕಾಂಗ್ರೆಸ್ಸಿಗೂ ಬೆಂಬಲ ಘೋಷಿಸಿದ್ದಾರೆ. ಈ ವಿಂಗಡಣೆ ಯಾವ ಆಧಾರದ ಮೇಲೋ? ಈ ಏಳು ಕ್ಷೇತ್ರಗಳಲ್ಲಿ ಆಪ್ ಅಭ್ಯರ್ಥಿಗಳು ಬಿಜೆಪಿಯನ್ನು ಸೋಲಿಸಲು ಕಾಂಗ್ರೆಸ್ ಅಭ್ಯರ್ಥಿಗಳಿಗಿಂತ ಹೆಚ್ಚು ಸಮರ್ಥರಾಗಿದ್ದಾರೆ ಎಂದೋ ಅಥವಾ ಅವರೆಲ್ಲ ವೈಯುಕ್ತಿಕ ಗೆಳೆಯರೋ ಅಥವಾ ಪರಿಚಿತರೋ ಆಗಿದ್ದಾರೆ ಎಂದೋ? ಮಹಾದೇವ ಚುನಾವಣಾ ಸಂದರ್ಭದಲ್ಲಿ ಮಾತ್ರ ಕಾಣಿಸಿಕೊಳ್ಳುವ ತಮ್ಮ ಹೆಮ್ಮೆಯ ಸರ್ವೋದಯ ಕರ್ನಾಟಕ ಪಕ್ಷವನ್ನು ಗಂಭೀರವಾಗಿ ಕಟ್ಟುವಲ್ಲಿ ಕೇಜ್ರಿವಾಲ್ ಮತ್ತು ಅವರ ಗೆಳೆಯರು ಪ್ರದರ್ಶಿಸುತ್ತಿರುವ ಕ್ರಿಯಾಶೀಲತೆಯನ್ನು ತೋರಿದ್ದಲ್ಲಿ ರಾಜ್ಯದ ಜನತೆಯ ಮುಂದೆ ಈ ಹಾಸ್ಯಾಸ್ಪದ ಜಾಣತನವನ್ನು ತೋರುವ ಅಗತ್ಯ ಬೀಳುತ್ತಿರಲಿಲ್ಲ.

### ಆಂ ಆದ್ಮಿ ಪಕ್ಷ: ಒಂದು ಚುನಾವಣೋತ್ತರ ನೋಟ:

ಇರಲಿ. ಇವೆಲ್ಲ ಕರ್ನಾಟಕದ ಸಂದರ್ಭದ ನನ್ನ ತತ್ಕಾಲೀನ ಟಿಪ್ಪಣಿಗಳಾದರೆ, ಈ ಸಲದ ನನ್ನ ಮುಖ್ಯ ಟಿಪ್ಪಣಿಗಳು, ಪಕ್ಷ ಸ್ಥಾಪನೆಯಾದ ದಿನದಿಂದಲೂ ಈ ಪತ್ರಿಕೆ ಸಕಾರಣವಾಗಿಯೂ, ಸಾರಾಸಗಟಾಗಿಯೂ ಬೆಂಬಲಿಸುತ್ತಿರುವ ಆಂ ಆದ್ಮಿ ಪಕ್ಷದ ಬಗೆಗಿವೆ. ನಮ್ಮ ಹಲವು ಓದುಗರ ಆಕ್ಷೇಪಣೆ, ಟೀಕೆ, ಪರಿಹಾಸ್ಯಗಳ ನಡುವೆಯೂ ಪತ್ರಿಕೆ ಆಪ್‌ನ್ನು ಬೆಂಬಲಿಸಿದ್ದರೆ ಅದಕ್ಕೆ ಕಾರಣಗಳನ್ನು ನಾನು ಈಗಾಗಲೇ ಸಾಕಷ್ಟು ವಿವರವಾಗಿ ಹಿಂದಿನ ಸಂಚಿಕೆಗಳಲ್ಲಿ ಹೇಳಿರುವೆ. ಈ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲೂ ಪತ್ರಿಕೆಯ ಬೆಂಬಲ ಅದಕ್ಕಿತ್ತು.

ಹಾಗಾಗಿಯೇ ನಾನು ನಮ್ಮ ಶಿವಮೊಗ್ಗ ಲೋಕಸಭಾ ಅಭ್ಯರ್ಥಿಯ ಪರವಾಗಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದೆ. ಅವರ ಪಕ್ಷ ವ್ಯಕ್ತಿಗತವಾಗಿ ನಿಗದಿ ಮಾಡಿದ್ದ ಗರಿಷ್ಠ ಮಿತಿಯನ್ನೂ ಮೀರಿ ಅವರಿಗೆ ದೇಣಿಗೆ ನೀಡಿದೆ. ಗೆಳೆಯರಿಂದ ಕೊಡಿಸಿದೆ. ನನ್ನ ಪತ್ನಿ ಈ ಅಭ್ಯರ್ಥಿಯ ಪರವಾಗಿ ಹಳ್ಳಿಯ ಕಡೆ ಒಂದು ಸುತ್ತು ಮನೆ ಮನೆ ಪ್ರಚಾರಕ್ಕೂ ಹೋಗಿ ಬಂದಳು. ಇವರ ರಾಷ್ಟ್ರೀಯ ನಾಯಕ ಯೋಗೇಂದ್ರ ಯಾದವ್ ಶಿವಮೊಗ್ಗದಲ್ಲಿ ನಡೆಸಿದ 'ರೋಡ್ ಷೋ'ನಲ್ಲಿ ಮೆರವಣಿಗೆ ಮುಂದೆ ಭಿತ್ತಿ ಹಿಡಿದು ಭಾಗವಹಿಸಿದಳು. ಮೊನ್ನೆ ನಾನು ಕೇಜ್ರಿವಾಲ್‌ರ ವಾರಾಣಾಸಿ ಸ್ಪರ್ಧೆಗೆಂದೇ ಪ್ರತ್ಯೇಕ ದೇಣಿಗೆ ಕಳಿಸಿದೆ.



ಈ ಎಲ್ಲ ಪ್ರವರಗಳನ್ನು ನಾನು ನಿಮ್ಮ ಮುಂದಿಡುತ್ತಿರುವುದು ಮುಂದಿನ ನನ್ನ ಟಿಪ್ಪಣಿಗಳನ್ನು ನೀವು ಅಪಾರ್ಥ ಮಾಡಿಕೊಳ್ಳಬಾರದೆಂಬ ಕಾರಣದಿಂದಷ್ಟೇ. ಏಕೆಂದರೆ ಈ ಪಕ್ಷ, ಅದರ ಹಿಂದಿನ ವಿಚಾರ–ಹೋರಾಟ ಎಲ್ಲವೂ ನನ್ನದೇ ಎಂಬ ಭಾವನೆಯಿಂದ, ಇದರ ಪಕ್ಷ ರೂಪ ಮತ್ತು ರಾಜಕಾರಣ ಸ್ಪಷ್ಟವಾಗಿ ಮೂಡುವ ಮುಂಚಿನಿಂದಲೂ ನಾನದನ್ನು ಬೆಂಬಲಿಸುತ್ತಿದ್ದೇನೆ. ಆದರೆ ಈಗ ಚುನಾವಣೆ ಮುಗಿದಿದೆ. ಈ ಪಕ್ಷವನ್ನು ಅದು ಎದುರಿಸುತ್ತಿರುವ ಈ ಎರಡನೇ ಚುನಾವಣೆಯ ಪರಿಪ್ರೇಕ್ಷ್ಯದಲ್ಲಿ ಸ್ವಲ್ಪ ಹತ್ತಿರದಿಂದ ನೋಡಿ ಈಗ ಅದರ ಬಗ್ಗೆ ಕೆಲ ಮಾತುಗಳನ್ನು ಆಡಲೇಬೇಕಿದೆ. ಅದೂ ಈ ಮಾತುಗಳಲ್ಲಿ ಕೆಲವನ್ನು ಮೊನ್ನೆ ನನ್ನ ಮನೆಗೆ ಬಂದಿದ್ದ ಗೆಳೆಯ ಯೋಗೇಂದ್ರ ಯಾದವ್‌ರ ಬಳಿ ಆಡಲು ಯತ್ನಿಸಿ ಎದುರಿಸಿದ ಮುಜುಗರದ ನಂತರ ಇದರ ತಹತಹ ನನ್ನಲ್ಲಿ ಹೆಚ್ಚಿದೆ.

## ಜನ ಬೆಂಬಲ ತಲೆ ತಿರುಗಿಸಿತೆ?

ಈ ಪಕ್ಷದ ಜನಬೆಂಬಲ ಅದರ ನಾಯಕರೇ ಒಪ್ಪಿಕೊಳ್ಳುತ್ತಿರುವಂತೆ ಈಗ ಗಣನೀಯವಾಗಿ ಕಡಿಮೆಯಾಗಲು ಕಾರಣವಾಗಿರುವ ದೆಹಲಿ ಗದ್ದುಗೆಗೆ ರಾಜೀನಾಮೆ ನೀಡುವ ನಿರ್ಧಾರಕ್ಕೆ ಏಕೆ ಬರಲಾಯಿತು? ತಮ್ಮ ಮುಖ್ಯ ಕಾರ್ಯಕ್ರಮವಾದ ಜನಲೋಕಪಾಲ್ ಮಸೂದೆಗೆ ಬೆಂಬಲ ಸಿಗಲಿಲ್ಲ ಎಂಬ ಕಾರಣದಿಂದ ರಾಜೀನಾಮೆ ನೀಡಬೇಕಾಯಿತೆಂದು ಹೇಳುವ ಇವರು ಕಾಂಗ್ರೆಸ್ ಬೆಂಬಲ ಪಡೆಯುವಾಗ ಅದರಿಂದ ಆ ವಾಗ್ದಾನ ಪಡೆದಿದ್ದರೇ? ಹಾಗಿದ್ದರೆ ಅದನ್ನೇಕೆ ಹೇಳುತ್ತಿಲ್ಲ? ಅಥವಾ ಜನ ಲೋಕಪಾಲ್ ಮಸೂದೆಯ ಹೊರತಾಗಿ ತಾನು ಜನತೆಗೆ ನೀಡಿದ್ದ ವಚನಗಳನ್ನು ಜಾರಿ ಮಾಡುವ ಮೂಲಕ ಜನರ ಮನಸ್ಸನ್ನು ಇನ್ನಷ್ಟು ಗೆದ್ದು ಆನಂತರ ಜನಲೋಕಪಾಲ್ ಮಸೂದೆ ಜಾರಿಗೆ ಯತ್ನಿಸಿದ್ದರೆ ವಿರೋಧ ಪಕ್ಷಗಳ ಮೇಲೂ ಒತ್ತಡ ಹೆಚ್ಚುತ್ತಿತ್ತು ಮತ್ತು ಆಗ ಸೋತಿದ್ದರೆ ಜನರ ಸಹಾನುಭೂತಿ ತಮ್ಮ ಪಾಲಾಗುತ್ತಿತ್ತಲ್ಲವೇ? ಈ ಸಾಮಾನ್ಯ ಪರಿಜ್ಞಾನವೂ ಇದರ ನಾಯಕರಿಗೇಕೆ ಇಲ್ಲವಾಯಿತು? ಹಾಗೇ, ಸರ್ಕಾರ ರಚಿಸಲು ಜನಾಭಿಪ್ರಾಯ ಕೇಳಲು ಮುಂದಾದ ಇವರಿಗೆ ಅದನ್ನು ತ್ಯಜಿಸಲೂ ಜನರ ಅಭಿಪ್ರಾಯ ಕೇಳಬೇಕೆಂಬ ಪರಿವೆ ಏಕೆ ಇರದೇ ಹೋಯಿತು? ಒಮ್ಮೆಗೇ ಕೇಂದ್ರ ಸರ್ಕಾರದ ಮೇಲೆ ಕಣ್ಣು ಬಿದ್ದಿತು? ಲೋಕಸಭಾ ಚುನಾವಣೆಗಳಿಗೆ ದೊಡ್ಡ ರೀತಿಯಲ್ಲಿ ಸ್ಪರ್ಧಿಸುವ ದುರಾಸೆಯೇಕೆ ಮೊಳೆತಿತು?

ಇದಕ್ಕೊಂದೇ ಉತ್ತರ: ದೆಹಲಿ ಚುನಾವಣೆಯಲ್ಲಿ ಕಂಡ ಅನಿರೀಕ್ಷಿತ ಬೆಂಬಲ ಇವರ ತಲೆ ತಿರುಗಿಸಿತ್ತು. ಬಂಗಲೆ ಕಾರುಗಳ ವಿಷಯದಲ್ಲಿ ಇವರು ನಡೆದುಕೊಂಡ ರೀತಿ ನನ್ನಲ್ಲಿ ಅಚ್ಚರಿ, ವಿಷಾದಗಳೆರಡನ್ನೂ ಹುಟ್ಟಿಸಿತ್ತು. ನಾನು ಯಾದವ್‌ರಿಗೆ ಆಗಲೇ ಈ ಬಗ್ಗೆ ನನ್ನ ಆತಂಕ ವ್ಯಕ್ತಪಡಿಸಿ ಒಂದು ತುರ್ತು ಸಂದೇಶ ಕಳಿಸಿದ್ದೆ. ಈಗಲೂ ಯಾವುದಾವುದೋ ವಿವರಣೆಗಳನ್ನು ನೀಡುತ್ತಾ ಕೇಜ್ರಿವಾಲ್‌ರು ಮಾಸಿಕ ಎಂಭತ್ತೈದು ಸಾವಿರ ರೂಪಾಯಿಗಳ ಬಾಡಿಗೆಯ 'ಬಂಗ್ಲೆ'ಯಲ್ಲೇ ವಾಸವಾಗಿರುವುದನ್ನು ನಾನಂತೂ ಒಪ್ಪಲಾರೆ. ಆರಂಭಿಕ ಹಂತದಲ್ಲೇ ಇವರಿಗೆ ಇಂತಹ ಅನಾಹುತಕಾರಿ ತಪ್ಪು ಮಾಡುವಷ್ಟು, ಮೈ ಮರೆಯುವಷ್ಟು ತಲೆ ತಿರುಗಿದರೆ ಗತಿಯೇನು?

## ಆರ್ಥಿಕ ನೀತಿಯ ಸ್ಪಷ್ಟನೆಗೆ ಹಿಂಜರಿಕೆ ಏಕೆ?

ಮುಖ್ಯವಾಗಿ, ರಾಜಕೀಯ ಪಕ್ಷವೊಂದು ಹುಟ್ಟುವಾಗಲೇ ತನ್ನ ತತ್ವ ಪ್ರಣಾಲಿಯನ್ನು ಘೋಷಿಸಿಕೊಳ್ಳಬೇಕೆಂಬ ವಿಷಯ. ಹಾಗೆ ಘೋಷಿಸಿಕೊಳ್ಳದಿದ್ದರೆ, ಪಕ್ಷದ ಸ್ವರೂಪ ಜನಕ್ಕೆ ಗೊತ್ತಾಗುವುದಾರೂ ಹೇಗೆ? ಇವರ ಭ್ರಷ್ಟಾಚಾರ ವಿರೋಧಿ ಕಾರ್ಯಕ್ರಮವೊಂದೇ ದೇಶದ ಸಮಸ್ಯೆಗಳನ್ನೆಲ್ಲ ಪರಿಹರಿಸಬಲ್ಲುದೆ? ಹಾಗೆ ಇವರು ನಂಬಿದ್ದರೆ ಇವರದ್ದು ಕೇವಲ ಮೇಲ್ಸ್ತರ ರಾಜಕೀಯ ತಿಳುವಳಿಕೆಯಷ್ಟೆ ಎಂದು ಹೇಳಬೇಕಿದೆ. ಇವರ 'ಸ್ವರಾಜ್' ತತ್ವ ಪ್ರಣಾಳಿಯು ಒಂದು ರಾಜಕೀಯ ದಿಕ್ಕನ್ನು ನಿರ್ದೇಶಿಸುವುದಾದರೂ, ಅದು ಪರಿಣಾಮಕಾರಿಯಾಗಿ ಜಾರಿಯಾಗಲು ಅದಕ್ಕೆ ಬೆನ್ನೆಲುಬಾಗಿ ಕೆಲಸ ಮಾಡಬೇಕಾದ ಆರ್ಥಿಕ ತತ್ವ ಪ್ರಣಾಲಿ ಸ್ಪಷ್ಟವಾಗದೇ ಹೋದರೆ, ಇವರು ಈ ದೇಶದ ಸಮಸ್ಯೆಗಳ ಚರಿತ್ರೆಯನ್ನು ಹೇಗೆ ವಿಶ್ಲೇಷಿಸುವರು ಹಾಗೂ ಅವನ್ನು ಹೇಗೆ ಪರಿಹರಿಸುವರು ಎಂಬುದರ ಹೊಳಹಾದರೂ ಜನಕ್ಕೆ ಹೇಗೆ ದೊರಕೀತು? ಇಂತಹ ತತ್ವ ಪ್ರಣಾಲಿಯ ಬಗ್ಗೆ ಕೇಜ್ರಿವಾಲ್ ಉಡಾಫೆಯ ಮಾತುಗಳನ್ನೇ ಆಡುತ್ತಾ ಹೋದರು. ನಾವು ಸಮಸ್ಯೆ ಎದುರಾದಂತೆ ಅವುಗಳ ಸ್ವರೂಪ ನೋಡಿ ಬಗೆಹರಿಸುತ್ತಾ ಹೋಗುತ್ತೇವೆ ಎಂದರು. ಅವುಗಳ ಸ್ವರೂಪವನ್ನು ನೀವು ನೋಡಲು ಬಳಸುವ ಪರಿಕರಗಳಾದರೂ ಯಾವುವು? ಅವನ್ನಾದರೂ ನೀವು ಹೇಳಬೇಕಲ್ಲವೇ? ಮೊದಲಾಗಿ ದೇಶದ ಇಂದಿನ ಸಮಸ್ಯೆಗಳನ್ನು ಬಿಡಿಬಿಡಿಯಾಗಿ ನೋಡಬಹುದು ಎಂಬ ಮಾತೇ ಅಪ್ರಬುದ್ಧವಾದದ್ದು. ವಿವಿಧ ಆರ್ಥಿಕ ತಾತ್ವಿಕತೆಯ ಹಿನ್ನೆಲೆಗಳುಳ್ಳ–ಮೀರಾ ಸನ್ಯಾಲ್‌ರಿಂದ ಮೇಧಾ ಪಾಟ್ಕರ್‌ವರೆಗೆ,–ಜನವಿರಬಹುದಾದ ಸರ್ಕಾರದಲ್ಲಿ ಇದು ಸೃಷ್ಟಿಸುವ ಗೊಂದಲದ ಅರಿವಾದರೂ ಇವರಿಗಿದೆಯೇ?

## ಮುಕ್ತ ಬಂಡವಾಳಶಾಹಿ ಮತ್ತು ಭ್ರಷ್ಟಾಚಾರ

ಮತ್ತೂ ಮುಖ್ಯವಾಗಿ, ಭ್ರಷ್ಟಾಚಾರ ಒಂದು ಮುಖ್ಯ ಚುನಾವಣಾ ವಿಷಯವಾಗುವಷ್ಟು ಬೃಹದಾಕಾರವಾಗಿ ಬೆಳೆಯಲು ಕಾರಣವೇನು ಎಂಬುದನ್ನು ಇವರು ಅರಿಯದವರೇನಲ್ಲ. ಭ್ರಷ್ಟಾಚಾರದ ಬೀಜಗಳು ನಾವು ಒಪ್ಪಿಕೊಂಡಿರುವ ರಾಷ್ಟ್ರ ವ್ಯವಸ್ಥೆಯಲ್ಲೇ ಅಂತರ್ಗತವಾಗಿವೆ. ಈ ವ್ಯವಸ್ಥೆಯ ಏಕಾತ್ಮಕ ರಾಷ್ಟ್ರ ಸಂವಿಧಾನದಲ್ಲೇ ಅವಿವೆ. ಆದರೆ ಹಿಂದೆ ಸಣ್ಣ ಪುಟ್ಟ ಗಿಡಗಳಾಗಿ ಅಲ್ಲಲ್ಲಿ ಕಾಣುತ್ತಿದ್ದ ಭ್ರಷ್ಟಾಚಾರದ ಈ ಬೀಜಗಳು ಬೃಹದಾಕಾರವಾಗಿ ಬೆಳೆಯಲು ಮತ್ತು ಆ ಮೂಲಕ ನಮಗೆ ಗೊತ್ತಾಗುವ ಮೊದಲೇ ನಮ್ಮ ಸಾಂಸ್ಕೃತಿಕ ನೆಲಗಟ್ಟನ್ನೇ ಬುಡಮೇಲುಗೊಳಿಸಿ ನಮ್ಮನ್ನು ನಮ್ಮ ಅಸ್ಮಿತೆಯ ದ್ವಂದ್ವಕ್ಕೆ ದೂಡಲು ಅನುಕೂಲ ಮಾಡಿಕೊಟ್ಟದ್ದು ಮುಕ್ತ ಮಾರುಕಟ್ಟೆ ಆರ್ಥಿಕ ನೀತಿ. ಅದು ತನ್ನ ಈ ಮುಕ್ತ ನೀತಿಗನುಸಾರವಾಗಿ 'ಅಭಿವೃದ್ಧಿ'ಯ ಹೆಸರಿನಲ್ಲಿ ಹೊರಗಿಂದ ಎಗ್ಗಿಲ್ಲದೆ ತಂದು ಸುರಿಯತೊಡಗಿದ ರಾಶಿ ರಾಶಿ ಹಣ.

ಮೊನ್ನೆ ಅರ್ಥಶಾಸ್ತ್ರಜ್ಞ ಶಂಕರ ಅಯ್ಯರ್ ಟಿವಿ ಕಾರ್ಯಕ್ರಮವೊಂದರಲ್ಲಿ ನೀಡಿದ ಅಂಕಿ ಅಂಶದ ಪ್ರಕಾರ ಮನಮೋಹನ ಸಿಂಗ್ ಎರಡನೇ ಬಾರಿಗೆ ಅಧಿಕಾರ ಸ್ವೀಕಾರ ಮಾಡಿದಾಗ ರಾಷ್ಟ್ರ ದಿನಕ್ಕೆ ೨೨ ಕೋಟಿ ರೂಪಾಯಿಗಳ ಸಾಲ ಮಾಡುತ್ತಿತ್ತು. ಅದೀಗ ತಾಸಿಗೆ ೬೩ ಕೋಟಿ ರೂಪಾಯಿಗಳನ್ನು ತಲುಪಿದೆಯಂತೆ! ಇದು ನಮ್ಮ ರಾಷ್ಟ್ರದಲ್ಲಿ ಆಗುತ್ತಿರುವ ಬೃಹತ್ ಅಭಿವೃದ್ಧಿಯ ಮಾದರಿ! ಮೋದಿ ಬಂದರೆ ಈ 'ಅಭಿವೃದ್ಧಿ' ಇನ್ನಷ್ಟು ತೀವ್ರಗೊಳ್ಳಲಿದೆಯಷ್ಟೆ. ಅದರ ಜೊತೆಗೆ ಇನ್ನಷ್ಟು ದ್ವಂದ್ವಗಳು! ಈ ಬೃಹತ್ ಪ್ರಮಾಣದ ಹಣದ ವಹಿವಾಟು ನಡೆಯುತ್ತಿರುವಾಗ ಈ ವಹಿವಾಟಿನ ಕಾಡಿನಲ್ಲಿ ಮತ್ತು ಇದರೊಂದಿಗೆ ಬೆಸೆದುಕೊಂಡ ನಮ್ಮ ಕಾನೂನುಗಳ ದಟ್ಟಡವಿಯಲ್ಲಿ ಯಾರು, ಹೇಗೆ ಎಷ್ಟು ದೋಚುವರೋ ಅದನ್ನು ಪತ್ತೆ ಮಾಡುವುದು ಅಷ್ಟು ಸುಲಭದ ಕೆಲಸವಾಗಲಾರದು. ಹಾಗಾಗಿಯೇ ಇಂತಹ (ಮುಕ್ತ ಬಂಡವಾಳಶಾಹಿಯ ಬೃಹತ್ ಹಣ ವ್ಯವಹಾರದ ಕೇಂದ್ರೀಯ ರಾಷ್ಟ್ರ) ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಸಹಜ, ಸ್ವೀಕಾರಾರ್ಹ ಅಥವಾ ಕ್ಷಮ್ಯ ಎಂಬ ಅರ್ಥಶಾಸ್ತ್ರೀಯ ಪಾಠವನ್ನು ಬಹುಶಃ ಬಂಡವಾಳಶಾಹಿ ಅರ್ಥಶಾಸ್ತ್ರದ ಒಂದು ಉಪ ಪ್ರಮೇಯವಾಗಿ ಕಲಿತಿದ್ದರಿಂದಲೇ 'ಶುದ್ಧ' ವ್ಯಕ್ತಿತ್ವದ ಮನಮೋಹನ ಸಿಂಗ್ ಅದರ

ಬಗ್ಗೆ ಅಷ್ಟು ಗಮನ ಕೊಡಲಿಲ್ಲವೆಂದು ಕಾಣುತ್ತದೆ. ಮೋದಿ ಬಂದರೂ ಬಂಡವಾಳಶಾಹಿಯ ಈ ಆನುಷಂಗಿಕ ತರ್ಕ ಬದಲಾಗುವುದಿಲ್ಲ. ಹೆಚ್ಚೆಂದರೆ ಮೋದಿ ಇದನ್ನು ತಮ್ಮ ಬಲಿಷ್ಠ ಆಡಳಿತ ಶೈಲಿಯನ್ನು ಬಳಸಿ ಮುಚ್ಚಿಹಾಕಿಯಾರು. ಅದೇನೇ ಇರಲಿ, ಈ ಬಗ್ಗೆಯೂ ನಾನು ಆಂ ಆದ್ಮಿ ಪಕ್ಷಕ್ಕೆ ಬರೆದೆ, ತುರ್ತು ಸಂದೇಶಗಳನ್ನು ಕಳಿಸಿದೆ. ಪ್ರಯೋಜನವಾಗಲಿಲ್ಲ.

## ಕೆಟ್ಟ ಜಾಣತನ–ಸಿನಿಕ ಮಾತು

ಆದರೆ ಕೇಜ್ರಿವಾಲ್‌ರಿಗಾಗಲೀ ಅಥವಾ ಅವರ ಸಹಚರರಿಗಾಗಲೀ ಇದೆಲ್ಲ ಅರ್ಥವಾಗಿಲ್ಲ ಎಂದು ಹೇಳಲಾಗದು. ಅವರೊಂದಿಗೆ, ಯೋಗೇಂದ್ರರಿಂದ ಹಿಡಿದು ದೇಶದ ಪ್ರಜ್ವಲ ಬುದ್ಧಿಮತ್ತೆಯ ಒಂದು ದೊಡ್ಡ ಸೈನ್ಯವೇ ಇದೆ! ಆದರೂ ಅವರೇಕೆ ತಮ್ಮ ಆರ್ಥಿಕ ನೀತಿಯನ್ನು ಸ್ಪಷ್ಟಪಡಿಸುತ್ತಿಲ್ಲ ಎಂದು ಯೋಚಿಸಿದಾಗ ನನ್ನ ಕಣ್ಮುಂದೆ ಬಂದದ್ದು ಅದೇ ಕಾರಣ: ರಾಷ್ಟ್ರ ರಾಜಕಾರಣದಲ್ಲಿ ಪಾತ್ರ ವಹಿಸುವ ಮಹತ್ವಾಕಾಂಕ್ಷೆ ಸೃಷ್ಟಿಸಿದ ಕುರುಡು. ಭ್ರಷ್ಟಾಚಾರ ವಿರುದ್ಧದ ಕೂಗಿನಿಂದ ತಮ್ಮ ಹಿಂದೆ ಯಾರೆಲ್ಲ ಬಂದಿದ್ದಾರೋ, ಅವರಲ್ಲಿ ಯಾರೊಬ್ಬರ ಬೆಂಬಲವನ್ನೂ ಸದ್ಯಕ್ಕೆ ಕಳೆದುಕೊಳ್ಳಬಾರದೆಂಬ ಹುಂಬ ನಿಲುವಿದು. 'ಸ್ವರಾಜ್'(ಸಂಪೂರ್ಣ ರಾಜಕೀಯ ಮತ್ತು ಆಡಳಿತ ವಿಕೇಂದ್ರೀಕರಣ) ನೀತಿ ಜಾರಿಗೆ ಸಹಜ ಅಗತ್ಯವಾದ ಆರ್ಥಿಕ ನೀತಿಯನ್ನು–ಮುಖ್ಯವಾಗಿ ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಯ ವಿರೋಧವನ್ನು–ಘೋಷಿಸಿದರೆ ಇವರಲ್ಲಿ ಅರ್ಧ ಜನ ತಮ್ಮನ್ನು ಬಿಟ್ಟುಹೋಗುವರೆಂಬ ಭಯದ ಪರಿಣಾಮ ಇದು. ಇದು ಕೆಟ್ಟ ಜಾಣತನವಲ್ಲದೆ ಮತ್ತೇನಲ್ಲ. ಹಾಗಾಗಿ, ಮುಂದೊಂದು ದಿನ ಅಧಿಕಾರ ವಹಿಸಿಕೊಳ್ಳಬಯಸುವ ಜನ ಪಕ್ಷವನ್ನು ಕಟ್ಟುವ ರೀತಿ ಇದಲ್ಲ ಎಂದು ಹೇಳಲೇಬೇಕಿದೆ.

ಇದನ್ನು ನಾನು ಯೋಗೇಂದ್ರ ಯಾದವ್ ಮೊನ್ನೆ ನಮ್ಮ ಮನೆಗೆ ಬಂದಿದ್ದಾಗ ನೇರವಾಗಿ ಹೇಳಿದೆ. ನನ್ನಿಂದ ಈ ನೇರ ಮಾತನ್ನು ನಿರೀಕ್ಷಿಸದಿದ್ದ ಅವರು ಸ್ವಲ್ಪ ವ್ಯಗ್ರರಾಗಿಯೇ, ನಿಮ್ಮಂತಹ ಓದು ಬರಹಗಳ ಮತ್ತು ಪತ್ರಿಕೆ ಮಾಡುವ ವ್ಯಕ್ತಿ ನಮ್ಮ ಪ್ರಣಾಳಿಕೆಯನ್ನು ನೋಡದೆ ಇಷ್ಟು ಬೇಜವಾಬ್ದಾರಿಯಿಂದ ಮಾತಾಡಬಾರದು ಎಂದರು. ಅವರ ಚುನಾವಣಾ ಪ್ರಣಾಳಿಕೆಯ ಬಗ್ಗೆ ಪತ್ರಿಕೆಯಲ್ಲಿ ಓದಿ ಅದರಲ್ಲಿ ಅವರ ಆರ್ಥಿಕ ನೀತಿಯ ಪ್ರಸ್ತಾಪವಿಲ್ಲದಿದ್ದುದನ್ನೂ ಗಮನಿಸಿದ್ದ ನಾನು ಇವರ ಮಾತಿನಿಂದ ಸ್ವಲ್ಪ ವಿಚಲಿತನಾಗಿಯೇ 'ಅಲ್ಲೇನೂ ಆ ತರದ್ದು ಕಾಣಲಿಲ್ಲ' ಎಂದೆ. ಅದಕ್ಕವರು, ನೀವು ಅಂತರ್ಜಾಲ ತೆರೆದು ನಮ್ಮ ಪ್ರಣಾಳಿಕೆ ನೋಡಿ, ನಮ್ಮ ಆರ್ಥಿಕ ನೀತಿ ಅದರಲ್ಲಿದೆ ಎನ್ನುತ್ತಾ ಆರ್ಥಿಕ ನೀತಿ ಇದೆಲ್ಲ ನಮ್ಮ ಬುದ್ಧಿಜೀವಿಗಳು ಕೇಳುವ ಪ್ರಶ್ನೆಯಷ್ಟೆ ಎಂದು ಗೊಣಗಿದರು. ಇಂತಹ ಸಿನಿಕ ಮಾತನ್ನು ಯೋಗೇಂದ್ರರಿಂದ ನಿರೀಕ್ಷಿಸದಿದ್ದ ನಾನು, "ನೀವೂ ಬಿಜೆಪಿಯವರಂತೆಯೇ ಬುದ್ಧಿಜೀವಿಗಳನ್ನು ವ್ಯಂಗ್ಯ ಮಾಡಹೊರಟಿರಾ! ನೀವು ಯಾವ ಬುದ್ಧಿಜೀವಿಗಳ ಬಗ್ಗೆ ಮಾತಾಡುತ್ತಿದ್ದೀರೋ ತಿಳಿಯದು. ಆದರೆ ನಿಮಗೆ ಗೊತ್ತಿರಬೇಕು, ನಿಜವಾದ ಬುದ್ಧಿಜೀವಿ ಜನಸಾಮಾನ್ಯರ ಪರವಾಗಿ ಪ್ರಶ್ನೆ ಎತ್ತುತ್ತಿರುತ್ತಾನೆ. ನೀವು ಅಂತರ್ಜಾಲದ ಪಕ್ಷವಾಗಿ ಹೋದಿರಾ!!" ಎಂದೆ. ಯಾದವ್‌ಗೆ ಇದರಿಂದ ಕಸಿವಿಸಿಯಾದಂತಾಗಿ, 'ನಿಮ್ಮ ಮನಸ್ಸು ಇಂದು ಏಕೋ ಸರಿಯಾಗಿದ್ದಂತಿಲ್ಲ. ಈಗ ಮಾತು ಮುಂದುವರೆಸುವುದು ಬೇಡ. ದಯವಿಟ್ಟು ನಿಮ್ಮ ಬೆಂಬಲ ಸದಾ ನಮಗಿರಲಿ' ಎಂದು ವಂದಿಸಿ ಹೊರಟರು.

ನಾನು ಕೂಡಲೇ ನನ್ನ ಗಣಕದಲ್ಲಿ ಅಂತರ್ಜಾಲ ತೆರೆದು ಆಂ ಆದ್ಮಿ ಪಕ್ಷದ ಪ್ರಣಾಳಿಕೆ ನೋಡಿದೆ. ಆರ್ಥಿಕ ನೀತಿಗಾಗಿ ಹುಡುಕಿದೆ. ನಿಜ, ಅದರ ಪ್ರಣಾಳಿಕೆಯಲ್ಲಿ ಆರ್ಥಿಕತೆ ಕುರಿತ ಪ್ರತ್ಯೇಕ ಅಧ್ಯಾಯವಿದೆ. ಆದರೆ ತನ್ನದೆನ್ನುವ ಆರ್ಥಿಕ ನೀತಿ ಎಂಬುದು ನಿರ್ದಿಷ್ಟವಾಗಿ ಅಲ್ಲಿ ನಿರೂಪಿತವಾಗಿಲ್ಲ. ಎಲ್ಲ ಪಕ್ಷಗಳಂತೆ ಇದೂ ಎಲ್ಲರ ಸಮಾನ ಆರ್ಥಿಕ ಪಾಲಿನ, ಪರಿಸರ ಸಮತೋಲನದ ಸುಸ್ಥಿರ ಅಭಿವೃದ್ಧಿಯ ಬಗ್ಗೆ ದುಂಡು ದುಂಡಾಗಿ ಮಾತನಾಡುತ್ತದೆ. ಇತರ ಪಕ್ಷಗಳಿಗೆ ಒಂದು ಆರ್ಥಿಕ ನೀತಿಯಿಲ್ಲ ಎಂದು ಇಲ್ಲಿ ಜರಿಯುವ ಈ ಪಕ್ಷ ತನ್ನ ಆರ್ಥಿಕ ನೀತಿಯನ್ನು ಮಾತ್ರ ಮುಂದೆ ಅನುಭವಗಳ ಆಧಾರದ ಮೇಲೆ ಕಲಿತು ರೂಪಿಸಿಕೊಳ್ಳುವುದಾಗಿ ಹೇಳುತ್ತದೆ! ಭ್ರಷ್ಟಾಚಾರವೂ ಸೇರಿದಂತೆ ಇಂದಿನ ಎಲ್ಲ ರಾಜಕೀಯ ಮತ್ತು ಸಾಮಾಜಿಕ ಅನೈತಿಕತೆಗಳ ಮೂಲದಲ್ಲಿರುವ ಪ್ರಚಲಿತ ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಯ ಬಗ್ಗೆ ಇಲ್ಲಿ ಒಂದು ಮಾತಿಲ್ಲ! ತಾನು ಇತರ ಪಕ್ಷಗಳಂತೆ ಎಡ ಅಥವಾ ಬಲದ ಪಕ್ಷ ಎಂದು ಕರೆದುಕೊಳ್ಳ ಬಯಸುವುದಿಲ್ಲ ಎಂದು ಇಲ್ಲಿ ಹೇಳುವ ಈ ಪಕ್ಷವನ್ನು ಯಾರೂ ತನ್ನನ್ನು ಹಾಗೆ ವರ್ಗೀಕರಿಸಿಕೊಳ್ಳಬೇಕೆಂದು ಕೇಳುತ್ತಿಲ್ಲ; ಬದಲಾಗಿ ಚರಿತ್ರೆಯ ನಿನ್ನ ಓದು ಏನು? ಆ ಆಧಾರದ ಮೇಲೆ ನೀನು ನಡೆಯಬೇಕಾದ ದಿಕ್ಕು ಯಾವುದೆಂದು ಯೋಚಿಸಿದ್ದೀಯೆ ಎಂಬ ಪ್ರಶ್ನೆ ಇದು. ಇದಕ್ಕೆ ಇಲ್ಲಿ ಉತ್ತರವಿಲ್ಲ. ಇತರೆ ಪಕ್ಷಗಳಂತೆಯೇ ಹಲವು ಜನ ಕೋಟ್ಯಾಧಿಪತಿಗಳಿಗೆ ಟಿಕೆಟ್ ನೀಡಿರುವ ಪಕ್ಷ ಎದುರಿಸಬೇಕಾದ ಕೆಟ್ಟ ಸಂದಿಗ್ಧವಿದು.!

## ಶ್ರೀಮಂತ ಭೋಜನ ಕೂಟ: 'ಆಂ ಆದ್ಮಿ'ಯ ಅರ್ಥ ಪಲ್ಲಟ!

ಈ ಪಕ್ಷ ಓರ್ವ ದೊಡ್ಡ ಕೋಟ್ಯಾಧಿಪತಿಗೆ ಬೆಂಗಳೂರಿನಲ್ಲಿ ಟಿಕೆಟ್ ನೀಡಿದ ಒಂದು ಪರಿಣಾಮವನ್ನು ನೀವು ಗಮನಿಸಿರಬೇಕು. ಕೇಜ್ರಿವಾಲರು ಬೆಂಗಳೂರಿಗೆ ಬಂದಾಗ ಪಕ್ಷದ ದೇಣಿಗೆ ಸಂಗ್ರಹಿಸಲು ವೈಭವೋಪೇತ ಹೋಟೆಲ್‌ವೊಂದರಲ್ಲಿ ಅವರೊಂದಿಗೆ ಊಟವೊಂದಕ್ಕೆ ತಲಾ ಇಪ್ಪತ್ತು ಸಾವಿರ ರೂಪಾಯಿಗಳ ದರದ ಭೋಜನಕೂಟವೊಂದರ ಕಲ್ಪನೆಯನ್ನು ಅವರು ನೀಡಿದರು! ಗುರಿಯ ನೈತಿಕತೆ ಮಾರ್ಗದ ನೈತಿಕತೆಯ ವಿಸ್ತರಣೆ ಮಾತ್ರ ಎಂದರಿಯದ ರೂಕ್ಷ ಮನಸ್ಸು ಮಾತ್ರ ಇಂತಹ ರೀತಿಯ ಪಕ್ಷ ಸಂಘಟನೆಯನ್ನು ಒಪ್ಪಿಕೊಳ್ಳಬಲ್ಲುದು. ಈ ಭೋಜನಕೂಟಕ್ಕೆ ಕಾಶ್ಮೀರದಿಂದ, ಮುಂಬೈ–ಪುಣೆ–ಊಟಿಗಳಿಂದ ಜನ ಬಂದಿದ್ದರಂತೆ! ಈ ಭೋಜನ ಕೂಟವನ್ನು ಏರ್ಪಡಿಸಿದ್ದ ಸರ್ಜನ್‌ರೆಂದು ಟಿವಿಯಲ್ಲಿ ಪರಿಚಯಿಸಿಕೊಂಡ ಓರ್ವ ಮಹನೀಯರು ಇದನ್ನು ಎಂತಹ ನೈತಿಕ ಪರಿಶುದ್ಧತೆಯ ದುರಹಂಕಾರದ ಮಾತುಗಳಿಂದ ಸಮರ್ಥಿಸಿಕೊಂಡರೆಂದರೆ, ಅವರ ಮಾತುಗಳಲ್ಲಿ ಬೇಡವೆಂದರೂ ಮೋದಿ ಇಣುಕಿ ನೋಡುತ್ತಿದ್ದರು. ಇವರು ಆಂ ಆದ್ಮಿ ಎಂಬ ಶಬ್ದಕ್ಕೆ ಹೊಸ ವ್ಯಾಖ್ಯಾನವನ್ನೇ ನೀಡಿದರು–ಈ ವ್ಯವಸ್ಥೆಯ ಭ್ರಷ್ಟಾಚಾರದಿಂದ ಯಾರ್‍ಯಾರು ತೊಂದರೆಗೊಳಗಾಗಿದ್ದಾರೋ ಅವರೆಲ್ಲ ಆಂ ಆದ್ಮಿಗಳೇ!

ಅಂದರೆ ಇವರು ಮತ್ತು ಇವರ ಗೆಣೆಕಾರರು ಸದರಿ ಅಭಿವೃದ್ಧಿ ಮಾದರಿಯಲ್ಲಿ ತಮ್ಮ ಚಟುವಟಿಕೆಗಳ ಮೂಲಕ ಕೋಟಿ ಕೋಟಿ ಸಂಪಾದಿಸಲು ಭ್ರಷ್ಟಾಚಾರ ಮುಕ್ತ ವ್ಯವಸ್ಥೆಯೊಂದನ್ನು ಆಂ ಆದ್ಮಿ ಪಕ್ಷ ನಿರ್ಮಿಸಿಕೊಡಬೇಕು! ಇವರ ಪ್ರಕಾರ ಕೋಟಿ ಕೋಟಿ ಸಂಪಾದಿಸಿ ಕೂಡಿಟ್ಟುಕೊಳ್ಳುವುದು ಭ್ರಷ್ಟಾಚಾರವಲ್ಲ! ಇದು ಇಂದು ಇವರು ಭ್ರಷ್ಟಾಚಾರಕ್ಕೆ ಒದಗಿಸಿರುವ ಅರ್ಥ! ಕಾನೂನು ಪಾಲಿಸಿ ಎಷ್ಟಾದರೂ ಸಂಪಾದಿಸಬಹುದು ಎಂಬ ಮಾತಿನಲ್ಲೇ ನಮ್ಮ ಕಾನೂನುಗಳು ಮತ್ತು ಅವು ಕೂಡಿ ಕಟ್ಟಿರುವ ನಮ್ಮ ಪ್ರಭುತ್ವ ಎಂಬುದು ಎಷ್ಟು ಅನೈತಿಕವೂ, ದುಷ್ಟವೂ ಆಗಿದೆ ಎಂಬ ಸತ್ಯ ಅಡಗಿದೆ. ಈ ಮಾತಿನ ವಿಲೋಮ ನೋಡಿ: ಈ ಕಾನೂನುಗಳ ಕೃಪೆಯಡಿ ನಮ್ಮ ಬಹುಸಂಖ್ಯಾತ ಜನರು ವರ್ಷಾನುಗಟ್ಟಲೆ ದುಡಿದರೂ ಕಡುಬಡವರಾಗಿಯೇ ಉಳಿದು ಪ್ರಭುತ್ವದ ಅನ್ನ ಭಿಕ್ಷೆ, ಉದ್ಯೋಗ ಭಿಕ್ಷೆ, ಸಾಲ ಭಿಕ್ಷೆ, ಶಾದಿ ಭಿಕ್ಷೆ ಇತ್ಯಾದಿ ದಾನ ಧರ್ಮಗಳ ಕಕ್ಷೆಯಲ್ಲಿಯೇ ಬದುಕುವ ಅವಕಾಶವನ್ನೂ ಕಲ್ಪಿಸಿಕೊಡಲಾಗಿದೆ!

ಕೆಲವರ ಕೋಟಿ ಕೋಟಿ ಸಂಪಾದನೆಗೂ, ಹಲವರ ಇಂದಿನ ಈ ಭಿಕ್ಷಾಂದೇಹಿ ಸ್ಥಿತಿಗೂ ನೇರ ಸಂಬಂಧವಿದೆ. ಈ ಸಂಬಂಧವನ್ನು ಕಲ್ಪಿಸಿರುವುದು ನಮ್ಮ ಕಾನೂನುಗಳು ಮತ್ತು ಅದರ ಹಿಂದಿನ ರಾಜಕೀಯ ಮನಸ್ಸು ಕಟ್ಟಿರುವ ವ್ಯವಸ್ಥೆಯೇ ಆಗಿದೆ. ಈ ಗುಟ್ಟನ್ನು ಯಾವ ರಾಜಕೀಯ ಪಕ್ಷವೂ ಭೇದಿಸುವುದಿರಲಿ, ಬಿಟ್ಟುಕೊಡುತ್ತಲೂ ಇಲ್ಲ. ಒಬ್ಬನಿಗೆ ಒಂದು ಬಹುರಾಷ್ಟ್ರೀಯ ಸಂಸ್ಥೆ ವರ್ಷಕ್ಕೆ ೧೧೨ ಕೋಟಿ ರೂಪಾಯಿಗಳ ಸಂಬಳ ಕೊಡುತ್ತದೆ ಎಂಬ ಸುದ್ದಿ ಆ ಸಂಬಳ ಪಡೆಯುವವನು ಒಬ್ಬ ಭಾರತೀಯ ಎಂಬುದರಿಂದಾಗಿ ಬಹುಜನರಲ್ಲಿ ರೋಮಾಂಚನ ಉಂಟಾಗುವಂತಹ ವಿಕ್ಷಿಪ್ತ ಮನಸ್ಸಿನ ದೇಶವನ್ನು ಇಂದು ಕಟ್ಟಲಾಗಿದೆ. ಯಾವನೇ ಎಷ್ಟೇ ಬುದ್ಧಿವಂತನಾದರೂ, ಎಷ್ಟೇ ಕಷ್ಟಪಟ್ಟರೂ ಇಷ್ಟು ಪ್ರತಿಫಲ ಅವನಿಗೆ ದಕ್ಕುವುದು ಎಷ್ಟು ಸಾಧು, ನ್ಯಾಯ; ಇದರ ಪರಿಣಾಮಗಳೇನು ಮತ್ತು ಇಂತಹ ಅನ್ಯಾಯವನ್ನು ಸೃಷ್ಟಿಸಿ ಅದನ್ನು ಜಿಗುಪ್ಸೆಯ ಬದಲಾಗಿ ರೋಮಾಂಚನದ ಸಂಗತಿಯನ್ನಾಗಿ ಮಾಡಿರುವ ನಮ್ಮ ಆರ್ಥಿಕ ವ್ಯವಸ್ಥೆ ಮೂಲತಃ ಒಟ್ಟಿಗೇ ಎಷ್ಟು ವಿಕ್ಷಿಪ್ತವಾಗಿ ಹೋಗಿದೆ ಎಂಬ

ಆಲೋಚನೆಯೂ ಜನಸಾಮಾನ್ಯನ ಹತ್ತಿರ ಸುಳಿಯದಂತಹ ಆಸೆಬುರುಕ ಸಮಾಜವನ್ನು ಈ ಪ್ರಭುತ್ವ ಸೃಷ್ಟಿಸಿದೆ. ಆದರೆ ಈ ದೇಶದ ದುರಂತವೆಂದರೆ ಇಂದು ಸ್ವತಃ ಆ 'ಜನಸಾಮಾನ್ಯ'ನ ಹೆಸರಿನಲ್ಲಿ ಸ್ಥಾಪಿತವಾದ ಪಕ್ಷವೇ ನಿಧಾನವಾಗಿ ಆ ಶಬ್ದದ ಅರ್ಥವನ್ನೇ ಪಲ್ಲಟಗೊಳಿಸ ಹೊರಟಿರುವುದು.

## ದೆಹಲಿಯ ಬೀದಿಗಳಲ್ಲಿ ಕಂಡಿದ್ದ ಲೋಹಿಯಾ

ಕೇಜ್ರಿವಾಲರನ್ನು ಅಣ್ಣಾ ಆಂದೋಲನದ ಆರಂಭದ ದಿನಗಳಿಂದಲೂ ಅವರ ಮಾತು-ವಿಚಾರ-ವರ್ತನೆಗಳ ನೆಲೆಯಲ್ಲಿ ಸೂಕ್ಷ್ಮವಾಗಿ ಗಮನಿಸುತ್ತಾ ಬಂದಿದ್ದೇನೆ. ಅವರು ದೆಹಲಿಯ ಮುಖ್ಯಮಂತ್ರಿಯಾಗಿ ದೆಹಲಿ ಪೋಲೀಸರ ಸಮಸ್ಯೆ ಸಂಬಂಧವಾಗಿ ದೆಹಲಿ ಜನರೊಂದಿಗೆ ಬೀದಿಗಿಳಿದು ಅಹೋರಾತ್ರಿ ಉಪವಾಸ ಕೂತಾಗ ಅವರಲ್ಲಿ ನಾನು ನನ್ನ ಪ್ರಿಯ ನಾಯಕ ಲೋಹಿಯಾರನ್ನು ಕಂಡಿದ್ದೆ. ಅವರ ಮಾತು, ವರ್ತನೆಗಳಲ್ಲಿ ಲೋಹಿಯಾ ಅನುರಣಿಸುತ್ತಿದ್ದರು. ಆಗ ಅವರಿಗೆ 'ಲೋಹಿಯಾ ಜೀವಂತವಾಗಿದ್ದಾರೆ; ದೆಹಲಿಯ ಬೀದಿಗಳಲ್ಲಿ ಅವರು ಮಿಡುಕುತ್ತಿದ್ದಾರೆ' ಎಂದು ಸಂದೇಶ ಕಳಿಸಿದ್ದೆ. ಆದರೀಗ ಅತಿ ಉತ್ಸಾಹದಲ್ಲಿ ದಾರಿ ತಪ್ಪಿರುವ ಅವರು ಸಲ್ಲದ ಅವಸರದಲ್ಲಿ ತಪ್ಪು ನಿರ್ಧಾರಗಳನ್ನೂ ತೆಗೆದುಕೊಳ್ಳತೊಡಗಿದ್ದಾರೆ. ತಪ್ಪು ಮಾತುಗಳನ್ನು ಆಡತೊಡಗಿದ್ದಾರೆ. ಮೂರೇ ತಿಂಗಳುಗಳಲ್ಲಿ ಆಂ ಆದ್ಮಿ ಪಕ್ಷ ಸ್ಥಾಪನೆಯ ಎಲ್ಲ ಉದ್ದೇಶಗಳನ್ನೂ ಸಾಕ್ಷಾತ್ಕರಿಸಿಕೊಂಡು ಬಿಡಬೇಕೆಂಬ ಹುಂಬ ಹಂಬಲವಿದು. ಸ್ವಲ್ಪ ಕಟುವಾಗಿಯೇ ಹೇಳಬೇಕಾದರೆ ಇದು ಮಹಾ ಅವಿವೇಕ.

ಇಲ್ಲದಿದ್ದರೆ ಇವರು ಈ ಲೋಕಸಭಾ ಚುನಾವಣೆಗಳಿಗಾಗಿ ರಾಷ್ಟ್ರಾದ್ಯಂತ ನಾಲ್ಕು ನೂರಕ್ಕೂ ಹೆಚ್ಚು ಉಮೇದುವಾರರನ್ನು ನಿಲ್ಲಿಸುವುದೆಂದರೇನು? ಹಾಗೆ ನಿಲ್ಲಿಸುವ ಅವಸರದಲ್ಲಿ ತಮ್ಮ ಪಕ್ಷದ ಮೂಲ ಬದ್ಧತೆ ಮತ್ತು ತತ್ವಗಳನ್ನೇ ನಿರ್ಲಕ್ಷಿಸಿ ಯಾರೆಂದರವರಿಗೆ ಟಿಕೆಟ್ ನೀಡುವುದೆಂದರೇನು? ಹೀಗೆ ಮಾಡಿ, ಹಣದ ಕೊರತೆ ಉಂಟಾಗಿದೆ; ದೇಣಿಗೆ ಬೇಕು ಎಂದು ಕರೆ ಕೊಡುವುದೆಂದರೇನು? ಇವರು ಪ್ರತಿಪಾದಿಸುವ ಸುಸ್ಥಿರ ಅಭಿವೃದ್ಧಿಗೆ ಒಂದು ಸುಸ್ಥಿರ ರಾಜಕಾರಣವೂ ಅಗತ್ಯವಲ್ಲವೇ? ಅದಕ್ಕೊಂದು ಸುಸ್ಥಿರ ಪಕ್ಷ ಸಂಘಟನೆಯೂ ಅಗತ್ಯವಲ್ಲವೇ?

## ಕರ್ನಾಟಕದ ಅವಾಂತರಗಳು

ಕರ್ನಾಟಕದಲ್ಲಿನ ಈ ಪಕ್ಷದ ಸಂಘಟನೆಯ ಬಗ್ಗೆ ಎಷ್ಟು ಜನಕ್ಕೆ ಗೊತ್ತು? ಇಲ್ಲಿ ಇದರ ನಾಯಕರೆಂದೂ, ರಾಷ್ಟ್ರೀಯ ವಕ್ತಾರರೆಂದೂ ಘೋಷಿಸಲಾಗಿರುವವರ ಹಿನ್ನೆಲೆ, ಪರಿಚಯ ಈ ರಾಜ್ಯದಲ್ಲಿರುವ ನನ್ನಂತಹ ಆಂ ಆದ್ಮಿ ಪಕ್ಷದ ಬೆಂಬಲಿಗರಲ್ಲಿ ಎಷ್ಟು ಜನರಿಗೆ ತಿಳಿದಿದೆ? ದೆಹಲಿ ಕೇಂದ್ರದಿಂದ ಬೆಂಗಳೂರು ಕೇಂದ್ರಕ್ಕೆ ವಿಸ್ತರಿಸಲ್ಪಟ್ಟ ಈ ಪಕ್ಷದ ಅಧಿಕಾರ ಹಸ್ತವಷ್ಟೇ ರಾಜ್ಯದಲ್ಲಿ ಈ ಪಕ್ಷವನ್ನು ಸೃಷ್ಟಿಸಿದಂತಿದೆ. ಜನರಲ್ಲ. ಹಾಗಾಗಿ ಒಂದು ವಿಚಾರವಾಗಿ ಆಂ ಆದ್ಮಿ ಪಕ್ಷ ಈ ರಾಜ್ಯದ ಆಂ ಆದ್ಮಿಗಳಿಗೆ ಎಷ್ಟು ಸುಪರಿಚಿತವೋ ಅಷ್ಟೇ ಅಪರಿಚಿತವಾಗಿದೆ ಈ ಪಕ್ಷ ಮತ್ತು ಅದರ ನಾಯಕರು. ಯಾದವ್ ಆರ್ಥಿಕ ನೀತಿಯ ಬಗ್ಗೆ ನನಗೆ ಹೇಳಿದಂತೆ ಇವರ ಪರಿಚಯಕ್ಕಾಗಿ ನಮ್ಮಂತಹವರು ಅಂತರ್ಜಾಲದ ಫೇಸ್ ಬುಕ್ ಪುಟಗಳಲ್ಲಿ ತಡಕಾಡಬೇಕೆಂದು ಕಾಣುತ್ತದೆ! ಹೇಗೂ ಇವರೀಗ ಆಂ ಆದ್ಮಿ ಎಂಬುದರ ಅರ್ಥವನ್ನೇ ಬದಲಾಯಿಸಿ ವ್ಯಾಖ್ಯಾನ ಮಾಡಿರುವರಲ್ಲ?

ಇದು ನನಗೆ ಆಘಾತಕಾರಿಯಾಗಿ ಅನುಭವಕ್ಕೆ ಬಂದದ್ದು, ಶಿವಮೊಗ್ಗ ಕ್ಷೇತ್ರದ ಅಭ್ಯರ್ಥಿಯನ್ನು ಆಯ್ಕೆ ಮಾಡಿದ ರೀತಿ ನೀತಿಗಳನ್ನು ಗಮನಿಸಿದಾಗ. ಎರಡು ತಿಂಗಳುಗಳ ಹಿಂದೆ ಸಾಗರ ಮತ್ತು ತೀರ್ಥಹಳ್ಳಿಗಳಲ್ಲಿ ನಾಲ್ಕಾರು ಜನ ಟೋಪಿವಾಲಾಗಳನ್ನು ನೋಡಿದ್ದನ್ನು ಬಿಟ್ಟರೆ ಆಂ ಆದ್ಮಿ ಪಕ್ಷದ ಸಂಘಟನೆಯ ಸುಳಿವೇ ಇಲ್ಲದ ಶಿವಮೊಗ್ಗ ಜಿಲ್ಲೆಯಲ್ಲಿ ಅಭ್ಯರ್ಥಿಯನ್ನು ಹಾಕುವ ಪ್ರಸ್ತಾಪವನ್ನು ಬೆಂಗಳೂರಿನ ನಾಯಕರೊಬ್ಬರು ನನ್ನೊಂದಿಗೆ ದೂರವಾಣಿಯಲ್ಲಿ ಪ್ರಸ್ತಾಪ ಮಾಡಿದಾಗ ನಾನು ಬೆಚ್ಚಿಬಿದ್ದೆ. ಆದರೆ ಅವರು ಅಭ್ಯರ್ಥಿಯನ್ನು ಹಾಕಲೇ ಬೇಕಾಗಿದೆ ಎಂದಾಗ ಇಲ್ಲಿನ ಹಿರಿಯ ಮತ್ತು ಜನಪ್ರಿಯ ರೈತ ನಾಯಕರೊಬ್ಬರ ಹೆಸರು ಸೂಚಿಸಿದೆ. ಆದರೆ ಅಂತಿಮ ಆಯ್ಕೆಯೇನಿದ್ದರೂ ಜಿಲ್ಲೆಯಲ್ಲಿನ ಪಕ್ಷದ ಎಲ್ಲ ಹಿತೈಷಿಗಳನ್ನೊಳಗೊಂಡಿಕೊಂಡ ಒಂದು ಸಂಘಟಿತ ಪ್ರಕ್ರಿಯೆಯಾಗಿ ನಡೆಯುವುದು ಎಂದು ನಾನು ಭಾವಿಸಿದ್ದೆ. ಆದರೆ ನನಗೆ ಕೆಲವೇ ದಿನಗಳಲ್ಲಿ ಗೊತ್ತಾದದ್ದು, ಬೇರೊಬ್ಬರು-ಜಿಲ್ಲೆಯ ಸಾಮಾನ್ಯ ಜನತೆಗೆ ಅಷ್ಟೇನೂ ಪರಿಚಿತರಲ್ಲದ-ಅದರ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದಾರೆಂದು! ಇದು ಹೇಗಾಯಿತೆಂದು ಕುತೂಹಲಕ್ಕಾಗಿ ವಿಚಾರಿಸಿದಾಗ ನನಗೆ ತಿಳಿದು ಬಂದದ್ದು, ಬೆಂಗಳೂರು ಕೇಂದ್ರದೊಡನೆ ಸಂಪರ್ಕ ಹೊಂದಿದ್ದ ಒಂದು ಸಣ್ಣ ಗುಂಪು ಈ ರೈತ ನಾಯಕರ ಸಹಜ ಸಂಕೋಚವನ್ನೇ ನೆಪ ಮಾಡಿಕೊಂಡು ತನ್ನ ಪೂರ್ವಯೋಜನೆಯಂತೆ ಇದನ್ನು ಸಾಧಿಸಿತೆಂದು. ದೊಡ್ಡ ವ್ಯಕ್ತಿಯಾದ ಆ ರೈತ ನಾಯಕರು ಈ ಅಭ್ಯರ್ಥಿಯ ಪರವಾಗಿ ಮನಃಪೂರ್ವಕವಾಗಿ ಕೆಲಸ ಮಾಡಿದರೆಂಬುದು ಬೇರೆ ವಿಷಯ. ಪಕ್ಷದ ಸಂಘಟನೆಯ ಕಥೆ ಇದು. ಅಂತರ್ಜಾಲ ಮತ್ತು ಫೇಸ್ ಬುಕ್‌ವಾಲಾಗಳದ್ದೇ ಇಲ್ಲಿ ದರ್ಬಾರು.

ಇನ್ನು ಸಂಘಟನೆಯ ಒಂದು ಹಿನ್ನೆಲೆಯಿರುವ ಬೆಂಗಳೂರು ನಗರದ ಅಭ್ಯರ್ಥಿಗಳನ್ನೇ ನೋಡಿ. ಆ ಮೂವ್ವರೂ ಕನ್ನಡೇತರರು. ಇವರಲ್ಲಿ ಕನ್ನಡದವರೇ ಎಂದು ಭಾವಿಸಬಹುದಾದ ಒಬ್ಬ ಕೊಂಕಣಿಯಮ್ಮ ತಾನು ಸಾರ್ವಜನಿಕವಾಗಿ ಕನ್ನಡಕ್ಕೆ ಬದಲಾಗಿ ಕೊಂಕಣಿಯಲ್ಲಿ ಮಾತಾಡುವುದಾಗಿ ಬೆದರಿಸಬಲ್ಲವರು! ಇದೆಲ್ಲ ಹೇಗಾಯಿತು? ಇದರ ಅರ್ಥವೇನು? ಪಕ್ಷದ ಸೌಭಾಗ್ಯ, ಈ ಸಂಗತಿ ನಮ್ಮ ಕನ್ನಡ ಚಳುವಳಿಕಾರರಿಗೆ ಗೊತ್ತಿಲ್ಲ. ಇತರೆಡೆ ಅದೃಷ್ಟವಶಾತ್ ಪಕ್ಷದ ಸಂಘಟನೆ ಇಲ್ಲದಿದ್ದುದರಿಂದ ಪಕ್ಷ ಅಲ್ಲೆಲ್ಲ ಇಂತಹ ಅನೇಕ ಪ್ರಶ್ನೆಗಳಿಂದ ಪಾರಾಗಿದೆ!

ಹೀಗಾಗಿ ಸದ್ಯಕ್ಕೆ ಆಂ ಆದ್ಮಿ ಒಂದು ಪಕ್ಷವಾಗಿ ಕನ್ನಡ ನಾಡಿನ ನಿಜವಾದ ಆಂ ಆದ್ಮಿಗಳಿಗೆ ದೆಹಲಿ ಕಛೇರಿಯಿಂದ ನಿಯಂತ್ರಿತವಾದ ಅಪರಿಚಿತ ಮುಖಗಳ ಒಂದು ದಂಡೇ ಆಗಿಬಿಟ್ಟಿದೆ. ಇದಕ್ಕೊಂದು ಸಣ್ಣ ಉದಾಹರಣೆ: ನಮ್ಮ ಪತ್ರಿಕೆಯ ಮಾರ್ಚ್ ಸಂಚಿಕೆ ಆಪ್ ಕುರಿತಾಗಿದ್ದರಿಂದ ಬೆಂಗಳೂರಿನ ಈ ಪಕ್ಷದ ಪರಿಚಿತ ನಾಯಕರೊಬ್ಬರಿಗೆ ನಾನು ಕರೆ ಮಾಡಿ ನಿಮ್ಮ ಕಾರ್ಯಕರ್ತರಿಗೆಂದು ಒಂದಷ್ಟು ಸಂಚಿಕೆಗಳನ್ನು ಕಳಿಸಲೇ ಎಂದು ಕೇಳಿದ್ದಕ್ಕೆ ಆ ಕಡೆಯಿಂದ ಬಂದ ಉತ್ತರವೇನು ಗೊತ್ತೆ? 'ಬೇಡ ಸರ್. ನಮ್ಮ ಪಕ್ಷದಲ್ಲಿ ಕನ್ನಡ ಪತ್ರಿಕೆ ಓದುವವರು ಯಾರೂ ಇಲ್ಲ!' ಇದು ಕರ್ನಾಟಕದ ಆಂ ಆದ್ಮಿ ಪಕ್ಷ!

## ನಾವು ಕಾಯುತ್ತೇವೆ, ನೀವು ವಾರಾಣಾಸಿ ಗೆದ್ದು ಬನ್ನಿ!

ಇದಕ್ಕೆಲ್ಲ ಕಿರೀಟವಿಟ್ಟಂತೆ ಮೊನ್ನೆ ತಾನೇ ಕೇಜ್ರಿವಾಲ್ ಹೇಳಿಬಿಟ್ಟರು: 'ಈಗ ಪಕ್ಷ ಮುಖ್ಯವಲ್ಲ. ಆಂದೋಲನ ಮುಖ್ಯ. ಅಮೇಥಿಯಲ್ಲಿ ರಾಹುಲ್‌ರನ್ನು, ವಾರಾಣಾಸಿಯಲ್ಲಿ ಮೋದಿಯನ್ನು ಸೋಲಿಸಲು ನೀವೆಲ್ಲ ಅಲ್ಲಿಗೆ ಬನ್ನಿ!' ಖಂಡಿತ ನಮಗೆ ರಾಹುಲ್ ಮತ್ತು ಮೋದಿ ಸೋಲಬೇಕೆಂಬ ಬಯಕೆ ಇದೆ. ಆದರೆ ಮುಂದೇನು? ಸುಸ್ಥಿರ ಪಕ್ಷವಿಲ್ಲದೆ, ಸಂಘಟನೆ ಇಲ್ಲದೆ ನೀವು ಮುಂದೆ ಏನು ಮಾಡಬಲ್ಲಿರಿ? ಅದು, ವಾರಣಾಸಿಯಲ್ಲಿ ಮಾಧ್ಯಮಗಳೆದುರು ಗಂಗಾ ಸ್ನಾನ ಮಾಡಿ ವಿಭೂತಿ ಬಳಿದುಕೊಂಡಷ್ಟು ಅಥವಾ ಸಾರ್ವಜನಿಕ ಸಭೆಗಳಲ್ಲಿ ಗಂಟಲು ಹರಿಯುವಂತೆ 'ಹರಹರ ಮಹಾದೇವ್' ಎಂದು ಘೋಷಣೆ ಕೂಗುವಷ್ಟು ರೋಚಕ, ಅಸಂಬದ್ಧವಾದ ಸುಲಭ ಕೆಲಸವಲ್ಲ. ನಿಮಗಿದು ತಿಳಿದಿರಲಿ: ದೆಹಲಿ ಜನರನ್ನು ನಡುನೀರಿನಲ್ಲಿ ಕೈಬಿಟ್ಟು ಹೋದಂತೆಯೇ ದೇಶದ ಜನರನ್ನು ನಡುನೀರಿನಲ್ಲಿ ಕೈಬಿಟ್ಟು ಹೋದರೆ ಅವರು ನಿಮ್ಮನ್ನು ಕ್ಷಮಿಸುವುದಿರಲಿ, ಮರ್ಯಾದೆಯಿಂದ ಬಾಳಲೂ ಬಿಡಲಾರರು.

ಇದನ್ನು ನನ್ನ ಮನೆಯಲ್ಲಿ ಮೊನ್ನೆ ಯೋಗೇಂದ್ರ ಯಾದವ್‌ರಿಗೆ ಹೇಳಿದೆ. ಅವರು ಗಂಭೀರರಾದರು. ನನ್ನ ಮಾತುಗಳು ಅವರ ಮನ ಹೊಕ್ಕಿದೆ ಎಂದು ಭಾವಿಸುವೆ. ಈ ನನ್ನ ಭಾವನೆ ಹುಸಿ ಆಗದಿರುವವರೆಗೆ ಮತ್ತು ನೈತಿಕವಾಗಿ ಈ ಪಕ್ಷ ಮೊದಲನೇ ತಪ್ಪು ಎಸಗುವವರೆಗೆ ಅದಕ್ಕೆ ನಮ್ಮ ಮತ್ತು ನನ್ನ ಸಮಾನ ಮನಸ್ಕರ ಬೆಂಬಲ ಇದ್ದೇ ಇರುತ್ತದೆ. ಏಕೆಂದರೆ ನಮಗೀಗ ಏಕೈಕ ಪರ್ಯಾಯವಾಗಿ ಕಾಣುತ್ತಿರುವುದು ಇದೇ ಪಕ್ಷ. ಕೇಜ್ರಿವಾಲ್ ನಿಮಗೆ ಶುಭವಾಗಲಿ! ವಾರಾಣಾಸಿಯನ್ನು ಗೆದ್ದು ಬನ್ನಿ. ನಿಮ್ಮೊಡನೆ ಮಾತಾಡುವುದು ಇನ್ನೂ ಬಹಳವಿದೆ.

**-ಸಂಪಾದಕ**

# ನಮ್ಮ ಸಮಾಜವಾದಿಗಳು | ಅಪರೂಪದ ಕಾರ್ಮಿಕ ನಾಯಕ ಸಾಲೋಮನ್ ದಾಸನ್



**ಲೋ**ಹಿಯಾ ಪ್ರಣೀತ ಸಮಾಜವಾದದಲ್ಲಿ ಅಚಲ ನಂಬಿಕೆ ಇಟ್ಟು, ಗಾಂಧಿ ಮಾರ್ಗದಲ್ಲಿ ನಡೆದು, ಸೈದ್ಧಾಂತಿಕ ಹೋರಾಟಗಳನ್ನು ಸಂಘಟಿಸಿದ ಕರ್ನಾಟಕದ ಬಹುದೊಡ್ಡ ಕಾರ್ಮಿಕ ನಾಯಕ ದಾಸನ್ ಸಾಲೊಮನ್. ದಾಸನ್ ಅವರ ಪೂರ್ಣ ಹೆಸರು ಆಂಥೊನಿ ಕ್ಲೆಮೆಂಟ್ ಜೇಸುದಾಸನ್ ಸಾಲೊಮನ್. ಪ್ರತಿಭಾವಂತ ವಿಧ್ಯಾರ್ಥಿಯಾಗಿದ್ದ ದಾಸನ್ ಬಳ್ಳಾರಿಯ ವಾರ್ಡ್ಲಾ ಹೈಸ್ಕೂಲ್, ಅನಂತಪುರದ ಆರ್ಟ್ಸ್ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿರುವಾಗಲೇ ಸ್ವಾತಂತ್ರ್ಯ ಚಳುವಳಿಯ ಪ್ರಭಾವಕ್ಕೆ ಒಳಗಾಗಿ ಹೋರಾಟದಲ್ಲಿ ಧುಮುಕಿದರು. ೧೯೪೨ರ 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ದಾಸನ್ ಪೊಲೀಸರ ಹೊಡೆತದಿಂದ ತೀವ್ರವಾಗಿ ಗಾಯಗೊಂಡ ಬಗ್ಗೆ ಹಿರಿಯ ಸ್ವಾತಂತ್ರ್ಯಹೋರಾಟಗಾರ ಯಜಮಾನ್ ಶಾಂತರುದ್ರಪ್ಪ ತಮ್ಮ ನೆನಪುಗಳಲ್ಲಿ ದಾಖಲಿಸಿದ್ದಾರೆ. ಒಂದಕ್ಕಿಂತ ಹೆಚ್ಚು ಸಲ ಬ್ರಿಟೀಷರಿಂದ ಬಂಧಿಸಲ್ಪಟ್ಟು ಜೈಲುವಾಸ ಅನುಭವಿಸಿದ ದಾಸನ್, ನೀಲಂ ಸಂಜೀವರೆಡ್ಡಿಯವರೊಂದಿಗೆ ಬಳ್ಳಾರಿ ಜೈಲಿನಲ್ಲಿ ಜೊತೆಗಿದ್ದರು.

ಆ ಸಂದರ್ಭದಲ್ಲಿ ಬಳ್ಳಾರಿಯಲ್ಲಿ ಗಾಂಧೀವಾದಿಗಳ ದೊಡ್ಡ ಪಡೆಯೇ ಇತ್ತು. ವೈ.ಮಹಾಬಳೇಶ್ವರಪ್ಪ, ರಂಜಾನ್ ಸಾಬ್ ಮಳೆಬೆನ್ನೂರ್, ಯಜಮಾನ್ ಶಾಂತರುದ್ರಪ್ಪ ಮೊದಲಾದವರು ಪ್ರಮುಖರು. ದಾಸನ್‌ರನ್ನು ಬಳ್ಳಾರಿಯ ಗಾಂಧಿಯೆಂದೇ ಜನ ಕರೆಯುತ್ತಿದ್ದರಂತೆ. ಗಾಂಧಿಯಂತೆಯೇ ಸರಳ ಜೀವಿಯಾಗಿದ್ದು, ಗಾಂಧಿ ಕೃತಿಗಳನ್ನು ಓದಿ, ಗಾಂಧಿ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಹೋರಾಟಗಳನ್ನು ರೂಪಿಸುವಾಗ ಗಾಂಧೀಜಿಯುವರ ಅಸಹಕಾರ ಚಳುವಳಿಯ ತಾತ್ತ್ವಿಕತೆಯನ್ನು ಪಾಲಿಸುತ್ತಿದ್ದರಂತೆ. ಬಳ್ಳಾರಿಗೆ ಗಾಂಧಿ ಬಂದಾಗ ಅವರೊಡನೆ ಒಡನಾಡಿದ್ದರಂತೆ.

ಲೋಹಿಯಾ ಸಿದ್ಧಾಂತದಲ್ಲಿಯೂ ನಂಬಿಕೆ ಇಟ್ಟಿದ್ದ ದಾಸನ್, ಸಮಾಜವಾದಿ ಸಿದ್ಧಾಂತದ ನಿಜವಾದ ಜೀವಂತಿಕೆ ಇರುವುದು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ನಡೆಸುವ ಹೋರಾಟಗಳಲ್ಲಿ ಎಂದು ಬಲವಾಗಿ ನಂಬಿದ್ದರು. ಹಾಗಾಗಿ ಬಳ್ಳಾರಿಯಲ್ಲಿ ೧೦ಕ್ಕೂ ಹೆಚ್ಚು ಕಾರ್ಮಿಕ ಸಂಘಟನೆಗಳನ್ನು ಕಟ್ಟಿದ್ದರು. ಅವುಗಳಲ್ಲಿ ಮುಖ್ಯವಾಗಿ ಹಮಾಲಿಗಳ ಸಂಘ, ಸಕ್ಕರೆ ಕಾರ್ಖಾನೆ ಕಾರ್ಮಿಕ ಸಂಘ, ಗಣಿ ಕಾರ್ಮಿಕರ ಸಂಘ, ಪುರಸಭೆ ಕಾರ್ಮಿಕರ ಸಂಘ, ಬೀಡಿ ಕಾರ್ಮಿಕರ ಸಂಘ, ಆಟೋಮೊಬೈಲ್ ಹಾಗೂ ವಿದ್ಯುತ್ ಇಲಾಖೆ ನೌಕರರ ಸಂಘ ಇವೇ ಮುಂತಾದವುಗಳು. ಕಾರ್ಮಿಕರಲ್ಲಿ ಸಂಘಟಿತ ಮನೋಭಾವವನ್ನು ಬೆಳೆಸುವಲ್ಲಿ ಬಳ್ಳಾರಿ ಭಾಗದಲ್ಲಿ ದಾಸನ್ ಅವರು ವಹಿಸಿದ ಪಾತ್ರ ದೊಡ್ಡದು. ಮಾಸಲು ಜುಬ್ಬಾ, ಪೈಜಾಮಾ, ಸಣಕಲು ದೇಹದ ದಾಸನ್ ಹಿಂದ್ ಮಜ್ದೂರ್ ಸಂಘದ ಧ್ವಜವನ್ನು ಹಿಡಿದು ಜಾಥಾ ಹೊರಟಾಗ, ವಿದ್ಯಾರ್ಥಿಯಾಗಿದ್ದ ಈ ಲೇಖಕನು ಜಯಕಾರ ಹಾಕಿಕೊಂಡು ಹಿಂಬಾಲಿಸಿದ್ದನ್ನು ಜ್ಞಾಪಿಸಿಕೊಂಡು ಈಗಲೂ ರೋಮಾಂಚಿತನಾಗುತ್ತಾನೆ. ದಾಸನ್ ಸಕ್ಕರೆ ಕಾರ್ಮಿಕರ ಪರವಾದ ಹೋರಾಟ ರೂಪಿಸುವಲ್ಲಿ ಹೆಚ್ಚು ಕ್ರಿಯಶೀಲರಾಗಿದ್ದರು. ಅಖಿಲ ಭಾರತ ಸಕ್ಕರೆ ಕಾರ್ಮಿಕರ ಫೆಡೆರೇಷನ್‌ನ ಉಪಾಧ್ಯಕ್ಷ, ಕರ್ನಾಟಕ ಸಕ್ಕರೆ ಕಾರ್ಖಾನೆ ಸಂಘಗಳ ಕಾರ್ಮಿಕ ಒಕ್ಕೂಟದ ರಾಜ್ಯಾಧ್ಯಕ್ಷ, ಹಿಂದ್ ಮಜ್ದೂರ್ ಪಂಚಾಯತ್‌ಗೆ ಅಧ್ಯಕ್ಷರಾಗಿದ್ದರು.

ದಾಸನ್‌ರ ಕಾರ್ಮಿಕ ಹೋರಾಟ ಕಾನೂನು ರೀತ್ಯವಾಗಿರುತ್ತಿತ್ತು. ಹಾಗಾಗಿ ಈ ಭಾಗದ ಕಾರ್ಖಾನೆಗಳ ಮಾಲೀಕರು ದಾಸನ್‌ರನ್ನು ತುಂಬಾ ಪ್ರೀತಿ–ಗೌರವದಿಂದ ಕಾಣುತ್ತಿದ್ದರು. ಯಾವುದೇ ಸಂಗತಿ ಇದ್ದರು ಮಾಲೀಕರಿಗೆ ಮೊದಲು ನೋಟಿಸ್ ಕಳುಹಿಸುತ್ತಿದ್ದರು. ಆ ನೋಟಿಸ್ ನೋಡಿದ ತಕ್ಷಣ ಮಾಲೀಕರು ಸಾಲೊಮನ್ ಹತ್ತಿರ ಬಂದು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಇಚ್ಛಿಸುತ್ತಿದ್ದರು. ಸಾಲೊಮನ್ ಕಾರ್ಮಿಕರ ಬಹಿರಂಗ ಸಭೆಗಳಲ್ಲಿ ಆಗಲೀ ಅಥವಾ ಪಕ್ಷದ ಸಭೆಗಳಲ್ಲಿ ಆಗಲೀ ತುಂಬಾ ಮೆದುವಾಗಿ ಮಾತನಾಡುತ್ತಿದ್ದರು. ತಾತ್ತ್ವಿಕವಾಗಿ ಗಟ್ಟಿಯಾಗಿದ್ದ ದಾಸನ್ ಅಧಿಕಾರ ರಾಜಕಾರಣದಲ್ಲಿ ಹಿಂದೆ ಉಳಿದರು. ಹೆಚ್ಚು ಮಾತನಾಡುತ್ತಿದ್ದ ಎಂ.ಪಿ.ಪ್ರಕಾಶ್ ಮುಂತಾದವರು ಅಧಿಕಾರ ರಾಜಕಾರಣದಲ್ಲಿ ಲಾಭ ಪಡೆಯುತ್ತ ರಾಜಿಯಾಗುತ್ತಾ ಹೋದರು. ದಾಸನ್‌ರವರು ಎಂ.ಪಿ.ಪ್ರಕಾಶ್‌ರವರ ನಡೆ ಮತ್ತು ರಾಜಕೀಯ ನಿಲುವುಗಳನ್ನು ಇಷ್ಟಪಡದೇ ಕೆಲವೊಮ್ಮೆ ಕಟುವಾಗಿ ವಿರೋಧಿಸುತ್ತಿದ್ದರು. ಹೀಗಾಗಿ ಪ್ರಕಾಶ್ ಸಮಾಜವಾದಿ ಪಕ್ಷದ ಕಛೇರಿಗೆ ಬರುವುದನ್ನೇ ಕಡಿಮೆ ಮಾಡಿದರೆಂದು ದಾಸನ್‌ರವರ ಸಾಕು ಮಗಳಂತಿದ್ದ ಆಪ್ತ ಸಹಾಯಕಿ ಶಾಂತಮ್ಮನವರ ಅಭಿಪ್ರಾಯ.

೧೯೬೪ರ ನಂತರ ಸಮಾಜವಾದಿ ಪಕ್ಷ ರೂಪಿಸುತ್ತಿದ್ದ ರೈತ ಹೋರಾಟಗಳು ಸಹಜವಾಗಿ ಸಮಾಜವಾದಿ ಆಶಯಗಳಿರುವ ಗೆಳೆಯರನ್ನು ತನ್ನತ್ತ ಸೆಳೆಯುತ್ತಿದ್ದವು. ಹಾಗಾಗೀ ದಾಸನ್ ಕಾಗೋಡು ರೈತ ಹೋರಾಟದಲ್ಲಿ ಗೋಪಾಲಗೌಡರೊಂದಿಗೆ ಸಕ್ರಿಯವಾಗಿ ಭಾಗವಹಿಸಿದ್ದು ತಿಳಿದುಬರುತ್ತದೆ. ೧೯೭೬ರಲ್ಲಿ ಸಂಡೂರಿನ ಮಾಜಿ ರಾಜ ಎಂ.ವೈ.ಘೋರ್ಪಡೆ ರೈತರ ಜಮೀನನ್ನು ತನ್ನ ವಶದಲ್ಲೇ ಇಟ್ಟುಕೊಂಡಿರುವುದನ್ನು ಪ್ರತಿಭಟಿಸಿ ಆ ಜಮೀನಿನ ವಿಮೋಚನೆಗಾಗಿ ಹೋರಾಟವನ್ನು ಸಂಘಟಿಸಿದವರಲ್ಲಿ ಯಜಮಾನ್ ಶಾಂತರುದ್ರಪ್ಪ, ಎಲಿಗಾರ ತಿಮ್ಮಪ್ಪನವರೊಂದಿಗೆ ದಾಸನ್ ಕೂಡಾ ಒಬ್ಬರು. ಕಾನೂನಿನ ವಿಷಯದಲ್ಲಿ ದಾಸನ್ ಆಳವಾದ ಜ್ಞಾನವನ್ನು ಹೊಂದಿದ್ದ ಕಾರಣ, ಹೋರಾಟಕ್ಕೆ ಬೇಕಾದ ಕಾನೂನಿನ ಚೌಕಟ್ಟನ್ನು ತುಂಬಾ ಜಾಣ್ಮೆಯಿಂದ ನಿರ್ವಹಿಸಿದರು. ಜಾರ್ಜ್ ಫರ್ನಾಂಡಿಸ್ ಅವರೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದರಿಂದಾಗಿ ಹೋರಾಟದ ರೂಪು ರೇಷೆಗಳ ಬಗ್ಗೆ ಅವರೊಂದಿಗೆ ಚರ್ಚಿಸುತ್ತಿದ್ದರು. ಸಂಡೂರು ಭೂ ಹೋರಾಟದ ಯಶಸ್ಸಿನಲ್ಲಿ ಇವರ ಪಾತ್ರವನ್ನು ಅಷ್ಟಾಗಿ ಮೇಲ್ಸ್ತರಕ್ಕೆ ತರದೆ ಗೌಣಗೊಳಿಸಲಾಯಿತು.

ದಾಸನ್ ಅವರು ನಿಜಾರ್ಥದಲ್ಲಿ ಕರ್ನಾಟಕದ ಬಹುದೊಡ್ಡ ಕಾರ್ಮಿಕ ನಾಯಕರು. ಎಪ್ಪತ್ತರ ದಶಕದಲ್ಲಿ ಕರ್ನಾಟಕ ಸಮಾಜವಾದಿ ಪಕ್ಷದ ರಾಜ್ಯಾಧ್ಯಕ್ಷರಾಗಿದ್ದ ಕೆ.ಜಿ.ಮಹೇಶ್ವರಪ್ಪನವರು ದಾಸನ್ ಬಗ್ಗೆ ಹೀಗೆ ಹೇಳುತ್ತಾರೆ. 'ಒಳ್ಳೆ ಲೇಬರ್ ಲೀಡರ್ ಅವ್ರು ಅಂಡ್ ಕಮ್ಯೂನಿಟಿ ಡಿಸ್ ಅಡ್ವಾಂಟೇಜ್ ಇರ್ತದೆ. ಬಿಕಾಸ್ ಹಿ ವಾಸ್ ಎ ಕ್ರಿಶ್ಚಿಯನ್. ಬಳ್ಳಾರಿಯಲ್ಲಿ ಬಾಳಾ ಹೋರಾಟ ಮಾಡ್ಯಾರ ಅವ್ರು. ನಮ್ ಸ್ಟೇಟ್‌ನ ಟಾಪ್ ಮೋಸ್ಟ್ ಟ್ರೇಡ್ ಯೂನಿಯನ್ ಲೀಡರ್ ಅವರು.' ಎನ್ನುತ್ತಾರೆ. ಈ ಮಾತು ದಾಸನ್‌ರವರ ವ್ಯಕ್ತಿತ್ವ ಮತ್ತು ಹೋರಾಟದ ಬದುಕಿಗೆ ಕನ್ನಡಿ ಹಿಡಿಯುತ್ತದೆ. ಈಗಲೂ ಬಳ್ಳಾರಿಯ ಹಿರಿಯ ಕಾರ್ಮಿಕರನ್ನು ಭೇಟಿಯಾದರೆ, ಅವರು ಕಾರ್ಮಿಕರ ದೇವರು ಎನ್ನುತ್ತಾ ತಮ್ಮೊಳಗೆ ಮಿಂಚಿನ ಸಂಚಾರವಾದಂತೆ ಭಾವುಕರಾಗುತ್ತಾರೆ.

ಗಾಂಧಿ ತತ್ತ್ವವನ್ನು ಬದುಕಿದ ದಾಸನ್ ತಮ್ಮ ೮೧ನೇ ವಯಸ್ಸಿನಲ್ಲಿ ಗಾಂಧಿ ಹುಟ್ಟಿದ ದಿನವೇ ಅಕ್ಟೋಬರ್ ೨, ೧೯೯೫ರಂದು ತಮ್ಮ ಹೋರಾಟ ಯಾತ್ರೆಯನ್ನು ಮುಗಿಸಿದರು.

**–ಸಿ.ಚನ್ನಬಸವಣ್ಣ**

## ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ-೧೮

–ಇಂದಿರಾ ಬಿ. ಕೃಷ್ಣಪ್ಪ

# ಒಂದು ಸಾವು ಮತ್ತು ಒಂದು ಮದುವೆ

**ಆ** ದಿನದ ನೆನಪು ನಾನು ಮರೆಯಲು ಸಾಧ್ಯವೇ ? ಹರಿಹರದಿಂದ ಕಾಲೇಜಿಗೆ ಟೆಲಿಗ್ರಾಂ ಬಂದಿದ್ದನ್ನು ಕೃಷ್ಣಪ್ಪ ನನ್ನ ಕೈಗೆ ಕೊಟ್ಟು, ಆತುರಾತುರದಲ್ಲಿ ಕಿಟ್‌ಬ್ಯಾಗ್‌ಗೆ ಅವರ ಬಟ್ಟೆಗಳನ್ನು ತುಂಬಿಕೊಂಡು ಹೊರಟೇ ಬಿಟ್ಟರು. ಟೆಲಿಗ್ರಾಂನಲ್ಲಿ "ಮದರ್ ಸೀರಿಯಸ್ ಸ್ಟಾರ್ಟ್ ಇಮೀಡಿಯಟ್ಲಿ" ಎಂದಿತ್ತು. ನಾನು ನೋಡುತ್ತಲೇ "ಏನಾಗಿದೆ" ಅಂತ ಕೇಳಿದೆ. 'ತಾಯಿಗೆ ಸ್ವಲ್ಪ ಸೀರಿಯಸ್. ನಾನು ಹೋಗಿರ್‍ತೀನಿ. ಶಿವುಗೆ ಹೇಳು' ಅಂತ ಹೇಳಿ ಅವರು ಗೇಟು ದಾಟಿಯೇ ಬಿಟ್ಟರು. ಮೂರು ದಿನಗಳ ನಂತರ ಬೆಳಗಿನ ಜಾವ ಅವರು ವಾಪಸಾಗುವವರೆಗೆ ನಮಗೇನೂ ತಿಳಿಯಲೇ ಇಲ್ಲ. ಕೃಷ್ಣಪ್ಪನವರ ತಾಯಿಗೆ ದಾವಣಗೆರೆ ಚಿಗಟೇರಿ ಆಸ್ಪತ್ರೆಗೆ ಸೇರಿಸಿರುವುದಾಗಿಯೂ ಕಾಲು ಕೀತುಕೊಂಡಿದೆ, ಡಾಕ್ಟ್ರು ಎಲ್ಲಾ ಟೆಸ್ಟ್ ಮಾಡ್ತಾ ಇದ್ದಾರೆ, ತಂಗಿ ಗಂಗಮ್ಮ ಅವರ ಬಳಿ ಇದ್ದಾರೆಂದು ಪುನಃ ನಾನು ಹೋಗಬೇಕೆಂದು ಹೇಳಿದರು.

ಆದರೆ ಮರುದಿನ ಪುನಃ ಟೆಲಿಗ್ರಾಂ ಬಂದಿತ್ತು. ಅವೇ ಪದಗಳಿದ್ದವು. ಕೃಷ್ಣಪ್ಪ ಒಂದು ವಾರ ರಜೆ ಹಾಕಿ ಹರಿಹರಕ್ಕೆ ಹೊರಟರು. ಒಂದು ವಾರ ಕಳೆದರೂ ಅಲ್ಲಿಂದ ಯಾವ ಸುದ್ದಿಯೂ ಇಲ್ಲದೆ ನಾನು ಚಡಪಡಿಸುತ್ತಿದ್ದೆ. ಮತ್ತೊಂದು ಟೆಲಿಗ್ರಾಂ ನಮ್ಮ ಕಚೇರಿಗೆ ಬಂದಿತು. 'ಮದರ್ ನೋ ಮೋರ್' ಎಂದಿತ್ತು. ನಾನು ಕಚೇರಿಯಲ್ಲಿ ರಜೆ ಬರೆದು ಸೀದಾ ಶಿವು ಕೆಲಸ ಮಾಡುತ್ತಿದ್ದ ಸ್ಟುಡಿಯೋಗೆ ಹೋಗಿ, ಹೊರಗೆ ಕೆಲಸಕ್ಕೆ ಹೋಗಿದ್ದ ಅವನನ್ನು ತಕ್ಷಣ ಕರೆಸಿ ನಾಲ್ಕಾರು ದಿನ ರಜೆ ಕೊಡಬೇಕೆಂದು ಹೇಳಿ ಮನೆಗೆ ಬಂದು, ಮಕ್ಕಳನ್ನು ಶಾಲೆಯಿಂದ ಕರೆತಂದು, ಹೊರಡುವ ಸಿದ್ಧತೆ ನಡೆಸಿದ್ದೆ. ಮಧ್ಯಾಹ್ನ ಮೂರು ಗಂಟೆಗೆ ಬಂದ ಶಿವುನನ್ನು ತರಾಟೆಗೆ ತೆಗೆದುಕೊಳ್ಳುತ್ತಾ ಹರಿಹರಕ್ಕೆ ಹೊರಟೆ.

ನಾವು ಅಲ್ಲಿಗೆ ತಲುಪಿದಾಗ ಸಂಜೆ ಏಳು ಏಳೂವರೆ ಗಂಟೆ. ಮನೆಯಲ್ಲಿ ಸ್ಮಶಾನ ಮೌನ. ಅತ್ತೆಯ ಪಾರ್ಥಿವ ಶರೀರ ಇರಲಿಲ್ಲ. ನಮ್ಮನ್ನು ನೋಡಿದೊಡನೆ ಎಲ್ಲರೂ ಜೋರಾಗಿ ಅಳತೊಡಗಿದರು. ಅವರನ್ನು ಕಡೆಗಳಿಗೆಯಲ್ಲಿ ನೋಡಲಾಗಲಿಲ್ಲವೆಂಬ ದುಃಖ ನನ್ನನ್ನು ಘಾಸಿಗೊಳಿಸತೊಡಗಿತು. ನಮ್ಮ ಅತ್ತೆ ಚೌಡಮ್ಮನವರ ವಿದಾಯದ ಕಡೆ ಗಳಿಗೆಯನ್ನು ಕೃಷ್ಣಪ್ಪನ ಮೊದಲ ಸಹೋದರಿ ಹಾಲಮ್ಮ ಅಳುತ್ತಳುತ್ತಲೇ ನನ್ನೊಡನೆ ಹಂಚಿಕೊಂಡರು. "ಆಸ್ಪತ್ರೆಯಿಂದ ಬೆಳ್ಳಂಬೆಳಿಗ್ಗೆ ಏಳು ಏಳೂವರೆ ಗಂಟೆಗೆ ಅವರನ್ನ ಕರಕೊಂಡು ಬಂದ್ವಿ. ನಾನು ಒಂದು ಪಾತ್ರೆಯಲ್ಲಿ ಗಂಜಿ ಮಾಡಿದೆ ಎಲ್ಲರೂ ಒಂದೊಂದು ಚಮಚ ಗಂಜಿಯನ್ನು ಆಕೆಯ ಬಾಯಲ್ಲಿ ಹಾಕಿದರು. ಮೊಮ್ಮಗ–ಶಿವು, ಕೃಷ್ಣಪ್ಪನ ಹೆಂಡತಿ, ಮಕ್ಕಳು ಬರಲಿಲ್ಲವಲ್ಲ ಅಂತ ಕೈ–ಬಾಯಿ ಸನ್ನೆಗಳಿಂದ ಕೇಳಿದಳು. ಅವರ ನೆನಕೆಯಲ್ಲಿ ಸಾಯಬಾರದು ಅಂತ, ನಿಮ್ಮೆಲ್ಲರ ಹೆಸರು ಹೇಳಿ ಗಂಜಿ ಹಾಕಿದೆವು. ಅದಾಗಿ ಐದು ನಿಮಿಷದಲ್ಲಿ ಶಿವನ ಪಾದ ಸೇರಿಬಿಟ್ಟಳು ಅತ್ತಿಗೆ." ಸುತ್ತ ನೆರೆದಿದ್ದ ಎಲ್ಲರ ಅಳು ಮತ್ತೆ ಮುಗಿಲು ಮುಟ್ಟಿತು.

ಅತ್ತೆ ಮಲಗಿದ್ದ ಜಾಗದಲ್ಲಿ ಹಚ್ಚಿಟ್ಟ ಹಣತೆಗೆ ನಾನು, ಮಕ್ಕಳು ನಮನ ಸಲ್ಲಿಸಿದೆವು. ಜಗುಲಿ ಮೇಲೆ ರಾತ್ರಿ ಮಾತನಾಡುತ್ತಾ ಕುಳಿತಾಗ ಆಸ್ಪತ್ರೆಯ ಕಡೆ ದಿನಗಳನ್ನು ಕೃಷ್ಣಪ್ಪ ಹೇಳುತ್ತಾ,"ಸಕ್ಕರೆ ಕಾಯಿಲೆಯಿಂದ ಅವಳಿಗೆ ಕಾಲು ಕತ್ತರಿಸಬೇಕಾದ ಪರಿಸ್ಥಿತಿ ಬಂತು. ಡಾಕ್ಟ್ರು–ಕಾಲು ತೆಗೆಯಲೇ ಬೇಕು ಅಂದ್ರು. ಅವ್ವನನ್ನ ಅಂಗಹೀನವಾಗಿ ನೋಡಲು ನನಗೆ ಸಾಧ್ಯವಿಲ್ಲ ಅನ್ನಿಸಿ, ಬೇಡ ಅಂದೆ. ನೆನ್ನೆ ಆಕೆ ನಂಗೆ ಇಲ್ಲಿ ಇರಕ್ಕಾಗಲ್ಲ ನನ್ನನ್ನು ಮನೆಗೆ ಕರಕೊಂಡು ಹೋಗು ಅಂದ್ಲು .ಅದ್ಕೆ ಕಡೆಗಳಿಗೆಯಲ್ಲಿ ಮನೆಯವರೊಟ್ಟಿಗೆ ಇರ್‍ಲಿ ಅಂತ ಕರಕೊಂಡು ಬಂದೆ", ಅಂದ್ರು.

ಸಕ್ಕರೆ ಕಾಯಿಲೆಗೆ ಈಗಿರುವಂಥ ಆಧುನಿಕ ಚಿಕಿತ್ಸಾಕ್ರಮಗಳು ಇದ್ದಿದ್ದರೆ ಆಕೆ ಇನ್ನಷ್ಟು ಕಾಲ ಮನೆಮಂದಿಯೊಂದಿಗೆ ಹಾಯಾಗಿ ಬದುಕುತ್ತಿದ್ದರು ಎಂದು ಈಗ ನನಗೆ ಅನಿಸುತ್ತಿದೆ.



ಕೃಷ್ಣಪ್ಪನವರ ತಾಯಿ ಚೌಡಮ್ಮ

ಮರುದಿನ ಹೆಣ್ಮಕ್ಕಳೆಲ್ಲಾ ಸೇರಿ ಮಾತನಾಡುವಾಗ ಆಕೆಯನ್ನು ಆಸ್ಪತ್ರೆಗೆ ಸೇರಿಸುವ ಸ್ಥಿತಿ ಯಾಕೆ ಬಂತು? ಹೇಗಾಯಿತು ಎಂದು ಕೇಳಿದೆ. ಮೈತ್ರಾ ಹೇಳಿದ ಪ್ರಕಾರ ಮಾರ್ಕೆಟ್‌ನಿಂದ ತರಕಾರಿ ತಂದು ಮಾರಾಟ ಮಾಡುತ್ತಿದ್ದ ನಮ್ಮ ಅತ್ತೆ ಚಳಿಗಾಲದ ಒಂದು ಬೆಳಿಗ್ಗೆ ಮಾರ್ಕೆಟ್ಟಿಗೆ ಹೋಗಿದ್ದವರು ನಡುಗುತ್ತಾ ಬಂದು ಕಾಲಿಗೆ ಶೀತ ಆಗಿದೆ ಎಂದು ಒಲೆ ಹತ್ತಿರ ಕಾಲು ಚಾಚಿ ಬಿಸಿ ಮಾಡಿಕೊಳ್ಳಲು ಯತ್ನಿಸಿದಾಗ ಅವರ ಕಾಲು ಬಾತುಕೊಂಡಿತು. ಕೆಲವೇ ದಿನಗಳಲ್ಲಿ ಬೊಬ್ಬೆಗಳು ಒಡೆದು ಕೀವು ಕಾಣಿಸಿಕೊಂಡು ಊರಿನ ವೈದ್ಯರು ಕೊಟ್ಟ ಯಾವ ಮದ್ದುಗಳಿಂದಲೂ ಅದು ವಾಸಿಯಾಗದಾಗ ದಾವಣಗೆರೆ ಆಸ್ಪತ್ರೆಗೆ ಸೇರಿಸಲಾಯಿತು.

ಮರುದಿನ ಹಾಲುತುಪ್ಪ–ಶಿವು ಕೈಲಿ ಹಾಕಿಸಲು ಹೋದ್ವಿ. ಅವರನ್ನು ನದಿ ದಂಡೆಯಲ್ಲಿ ಜಲಸಮಾಧಿ ಮಾಡಲಾಗಿತ್ತು. ಈ ವಿಷಯ ನಂಗೆ ಆಶ್ಚರ್ಯ ತಂದಿತ್ತು. ನಾದಿನಿ ಗಂಗಮ್ಮ ಮತ್ತು ರೇಣುಕಾಳನ್ನು ಕೇಳಿದೆ. "ಅತ್ತಿಗೆ, ನಮ್ಮವ್ವ ನಮ್ಮ ಮನೆ ದೇವರು ಹುಚ್ಚಂಗಮ್ಮಂಗೆ ನಡಕೋತಾ ಇದ್ರು. ಹಿಂದೊಮ್ಮೆ ಆಕೇಗೆ ಭಾಳ ಹುಶಾರಿದ್ದಿಲ್ಲ. ಹಿಂದುಗಡೆ ಮನೇಲಿ ಒಬ್ಬರಿಗೆ ಹುಚ್ಚಂಗಮ್ಮ ಮೈಮೇಲಿ ಬಂದು, ನಮ್ಮವ್ವಂಗೆ ಮುತ್ತು ಕಟ್ಟಸಬೇಕು ಅಂತು. ನಮ್ಮಪ್ಪ ಒಪ್ಪಲಿಲ್ಲ. 'ನಾವು ಅಂತಾದ್ದನ್ನ ನಂಬೋಲ್ಲ. ನಮ್ಮ ಕೃಷ್ಣಪ್ಪ ನಮ್ಮನ್ನು ಸುಮ್ನೆ ಬಿಟ್ಟಾನೇ, ನನ್ನ ಹೆಂಡತಿಗೆ ಆಗಲೇ ವಯಸ್ಸಾತು–ದೊಡ್ಡದೊಡ್ಡ ಮಕ್ಳಾ ಇದಾವೆ. ನಾವು ಹೀಗೆಲ್ಲಾ ಮಾಡೋಲ್ಲ' ಅಂತ ಅಂದ್ರು. ನಮ್ಮವ್ವ, ಆ ದೇವರಿಗೆ ನಡ್ಕೋಳೋದು ಬಿಡಲಿಲ್ಲ. ಕಾಯಿಲೆನೂ ವಾಸಿ ಆಗಲಿಲ್ಲ. ಎಲ್ರೂ ಅಪ್ಪಂಗೆ, 'ನಿನ್ನ ಹೆಂಡ್ತಿ ಸಾಯ್ತಾಳೆ ಅಷ್ಟು ಮಕ್ಳನ್ನ ಕಟ್ಟಿಕೊಂಡು ಏನು ಮಾಡ್ತಿ, ದೇವರು ಹೇಳಿದಂಗೆ ಮುತ್ತು ಕಟ್ಸು. ಇದು "ಗರತಿ ಮುತ್ತು". ಮದುವೆ ಆಗದೆ ಇರುವವರಿಗೆ ಕಟ್ಟಸ್ತಾರಲ್ಲ ಅದು ಅಲ್ಲ. ನಿನ್ನ ಹೆಂಡ್ತಿಗೇನೂ ದೇವದಾಸಿ ಮಾಡಾಕೆ ಕಳಿಸ್ತಾರೆ ಅಂದ್ಕೊಂಡೇನು? ಹಾಗೇನೂ ಇಲ್ಲ. "ಗರತಿ ಮುತ್ತು" ಕಟ್ಟಿಸಿಕೊಂಡೋರು ಸತ್ರೆ ಅವರನ್ನ ಸುಡಬೇಕು ಅಥವ ಜಲಸಮಾಧಿ ಮಾಡಬೇಕು ಅಷ್ಟೆ." ಅಂತ ಒತ್ತಾಯ ಮಾಡದ್ರು, ಆಮೇಲೆ ಅಪ್ಪ, ಹುಚ್ಚಂಗಮ್ಮನ ದುರ್ಗಕ್ಕೆ ಕರಕೊಂಡು ಹೋಗಿದ್ರು. ಅದ್ಕೆ ಅವ್ವಂಗೆ ಸುಡಬೇಕಾ? ಜಲಸಮಾಧಿನಾ? ಅಂತ ಪ್ರಶ್ನೆ ಮೊನ್ನೆ ಬಂತು. ಅವ್ವನ ಸುಡೋದು ನಂಗೆ ನೋಡಕ್ಕಾಗಲ್ಲ ಅಂತ ಅಣ್ಣ ಹೇಳಿದ್ರಿಂದ "ಜಲಸಮಾಧಿ ಮಾಡಿದ್ರು.." ನನಗೆ ಜಲಸಮಾಧಿಯಂತ ಸಂಸ್ಕಾರ ಪದ್ಧತಿ ಇರುವುದು ತಿಳಿದು ಸಖೇದಾಶ್ಚರ್ಯವಾಯಿತು.

* * *

ಈ ಮಧ್ಯೆ ನನ್ನ ಗೆಳತಿ ಮನೋರಮಾ ಅವಳ ಮದುವೆಯ ವಿಚಾರದಲ್ಲಿ ಮನದ ಮಾತನ್ನು ಆಗಾಗ್ಗೆ ಹೇಳುತ್ತಿದ್ದ ಗಡುವು ಬಂದೇ ಬಿಟ್ಟತ್ತು. ಬೆಂಗಳೂರಿನಲ್ಲಿ ಮೊದಲು ಅರೆಕಾಲಿಕ ಕೆಲಸದಲ್ಲೂ, ನಂತರ ಸೇವಾದಳದಲ್ಲಿ ಸರ್ಕಾರಿ ಕೆಲಸದಲ್ಲಿದ್ದ ಆಕೆ, ಭದ್ರಾವತಿಗೆ ಬಂದಾಗ ನಾವಿಬ್ಬರೂ ಸೇರಿ ನಮ್ಮ ಬದುಕಿನ ಕಷ್ಟಸುಖಗಳನ್ನೆಲ್ಲಾ ಹಂಚಿಕೊಳ್ಳುತ್ತಿದ್ದವು. ಬಿ.ಎಡ್. ಮಾಡುವಾಗ ಜೊತೆಯಾದ ನಿಸಾರ್ ಅಹ್ಮದ್ ಭದ್ರಾವತಿಯಲ್ಲಿರುವವರೆಂದೂ, ಜಾತ್ಯಾತೀತ ಮನೋಭಾವ ಉಳ್ಳವರೂ, ಸರಳ ವಿವಾಹದ ಒಲವುಳ್ಳವರೂ, ಈಗಾಗಲೇ ಸರ್ಕಾರಿ ನೌಕರಿಯಾಗಿ, ಚನ್ನಗಿರಿಯ ಕೆರೆಬಿಳಚಿಯಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಕರಾಗಿ ಕೆಲಸ ಮಾಡುತ್ತಿರುವುದಾಗಿಯೂ ತಿಳಿಸಿದ್ದಳು. ಸಮಾಜವಾದಿ ಯುವಜನ ಸಭಾದ ಚಟುವಟಿಕೆ ಕಾರಣದಿಂದ ನಾನೂ ಅವರನ್ನು ಬಲ್ಲವಳಾಗಿದ್ದೆ. ಸರ್ಕಾರಿ ನೌಕರಿ ಸಿಕ್ಕಿದ ತಕ್ಷಣ ಮದುವೆಯಾಗುವುದಾಗಿ ತಿಳಿಸಿದ್ದ,

ಮನೋರಮಾಗೆ ಹೊನ್ನಾಳಿ ತಾಲ್ಲೂಕಿನ ಸುರಹೊನ್ನೆ ಗ್ರಾಮದ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿ ಕೆಲಸದ ಆದೇಶ ಬಂದೇ ಬಿಟ್ಟಿತು. ಅವಳಿಗೆ ನೌಕರಿ ಆದೇಶ ಬರುವುದೆಂದರೆ, ಮದುವೆಯನ್ನೂ ನಿಶ್ಚಯ ಮಾಡಿಕೊಂಡಂತಾಗಿತ್ತು.

ಮನೋರಮಾ ಅವರ ಮನೆಯಲ್ಲಿ ತಾನು ಮುಸ್ಲಿಂ ಯುವಕನನ್ನು ಮದುವೆಯಾಗುವ ವಿಚಾರ ಹೇಳಿದಾಗ ಅವಳ ತಾಯಿ, ಸಹೋದರ–ಸಹೋದರಿಯರು, ಭಾವಂದಿರು ಬಹಳ ಎಚ್ಚರಿಕೆಯಿಂದ ಜೀವನ ಕಟ್ಟಿಕೊಳ್ಳಬೇಕೆಂಬ ಸಲಹೆ ಮಾತ್ರ ಕೊಟ್ಟರೇ ವಿನಹ, ಮದುವೆಗೆ ನಕಾರ ಸೂಚಿಸಲಿಲ್ಲ. ಮುಂದೆ ಸಹ ಯಾವ ತೊಂದರೆಯನ್ನೂ ಮಾಡಲಿಲ್ಲ. ಆ ಕಾಲದ ಮಟ್ಟಿಗಾದರೂ ಅದೊಂದು ಅಪೂರ್ವ ಸಂಗತಿಯೇ ಆಗಿತ್ತು ಮತ್ತು ಅವರೆಲ್ಲ ಅಭಿನಂದನಾರ್ಹರೇ ಆಗಿದ್ದರು.

ಮದುವೆಗೆ ಅವರ ತಾಯಿಯನ್ನು ಬಿಟ್ಟು ಬಾಕಿ ಎಲ್ಲರೂ, ಬಂದಿದ್ದರು ಮತ್ತು ಇದುವರೆಗಿನ ಜೀವನದಲ್ಲಿ ಜೊತೆಯಾಗಿ, ಬೆಂಬಲವಾಗಿಯೇ ನಿಂತಿದ್ದರು. ನಿಸಾರ್ ಅಹ್ಮದ್‌ರವರು ಕೃಷ್ಣಪ್ಪನೊಂದಿಗೆ ಮದುವೆಯ ವಿಚಾರವನ್ನೆಲ್ಲಾ ತಿಳಿಸಿದರು. ಹಿಂದೂ–ಮುಸ್ಲಿಂ ವಿವಾಹದ ಸಂದರ್ಭದಲ್ಲಿ ಏನಾದರೂ ಗಲಾಟೆಯಾದರೆ ದಲಿತ ಸಂಘರ್ಷ ಸಮಿತಿ ಮತ್ತು ಸಮಾಜವಾದಿ ಯುವಜನ ಸಭಾಗಳು ಸಂಭಾಳಿಸುವುದಾಗಿ ಭರವಸೆ ಕೊಟ್ಟರು. ಮನೋರಮಾ ಇನ್ನೂ ಬೆಂಗಳೂರಿನಲ್ಲಿಯೇ ಕೆಲಸ ಮಾಡುತ್ತಿದ್ದುದರಿಂದ, ಅಲ್ಲಿಯೇ ಇವರ ಮದುವೆ ನೋಂದಣಿಯಾಯಿತು. ನಂತರ ೧೯೭೭ರ ಏಪ್ರಿಲ್ ೧೪ರಂದು ಶಿವಮೊಗ್ಗ ವಿದ್ಯಾಭವನದಲ್ಲಿ 'ಲೋಹಿಯಾ ವಿಚಾರ ವೇದಿಕೆ'ಯ ವತಿಯಿಂದ ಸರಳ ವಿವಾಹ ಏರ್ಪಡಿಸಲಾಯಿತು.

ಈ ಅಪೂರ್ವ ಮದುವೆಗೆ ಎಂ.ಡಿ.ನಂಜುಂಡಸ್ವಾಮಿ ರವಿವರ್ಮಕುಮಾರ್, ಪೂರ್ಣಚಂದ್ರ ತೇಜಸ್ವಿ, ಕಡಿದಾಳ ಶಾಮಣ್ಣ, ಕೋಣಂದೂರು ಲಿಂಗಪ್ಪ, ಸುಂದರೇಶ್ ಹಾಗೂ ಎಸ್.ಆರ್.ನಾಯಕ್ ಬಂದಿದ್ದರು. ಈ ಸಮಾರಂಭದ ಎಲ್ಲಾ ವ್ಯವಸ್ಥೆಯನ್ನು ದಿವಾಕರ ಹೆಗ್ಡೆಯವರು ಮುತುವರ್ಜಿಯಿಂದ ಮಾಡಿದ್ದರು. ಆಹ್ವಾನ ಪತ್ರಿಕೆಯಲ್ಲಿ ಹೆಸರಿದ್ದಾಗ್ಯೂ ಈ ಮದುವೆಗೆ ಪೂರ್ಣ ಬೆಂಬಲ ಸೂಚಿಸುತ್ತಿದ್ದ ಕೃಷ್ಣಪ್ಪ ದಸಂಸ ಕಾರ್ಯಕರ್ತರ ಮೂರು ದಿನಗಳ ತರಬೇತಿ ಶಿಬಿರಕ್ಕೆ ಹೋಗಿದ್ದ ಕಾರಣ ಭಾಗವಹಿಸಲಾಗಲಿಲ್ಲ. ನಾನು ಮಕ್ಕಳನ್ನು ಕರೆದುಕೊಂಡು ವಿವಾಹ ಸಮಾರಂಭದಲ್ಲಿ ಭಾಗಿಯಾಗಿದ್ದೆ.



ನಿಸಾರ್–ಮನೋರಮಾ ಮದುವೆಯಲ್ಲಿ ಪ್ರೊ. ಎಂ.ಡಿ.ಎನ್ ಭಾಷಣ

ವಿವಾಹ ಸಂಹಿತೆಯನ್ನು ರವಿವರ್ಮಕುಮಾರ್‌ರವರು ಮದುಮಕ್ಕಳಿಗೆ ಓದಿಸಿದರು. ಹಾರ ವಿನಿಮಯ, ಗಣ್ಯರಿಂದ ವಿಚಾರ ನಿವೇದನೆಗಳ ನಂತರ, ಇಂತಹ ಅಪರೂಪದ ಮದುವೆ ಕಂಡ ಪತ್ರಿಕಾ ಪ್ರತಿನಿಧಿಗಳು, ಎಂಡಿಎನ್ ಮತ್ತು ರವಿವರ್ಮಕುಮಾರ್‌ರವರಲ್ಲಿ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು. ಕುತೂಹಲಿ ಕಿಡಿಗೇಡಿಯೊಬ್ಬ, ನಿಸಾರ್ ಅವರಿಗೆ, "ನೀವು ಮದುವೆಯಾದ ನಂತರ ಎಲ್ಲಿಗೆ ಹೋಗುತ್ತೀರಿ? ಮಂದಿರಕ್ಕೋ? ಮಸೀದಿಗೋ?"ಎಂದು ಕೇಳಿದ. ಯಾವ ತಳಮಳಗಳಿಲ್ಲದೆ ನಿಸಾರ್ "ನಾವು ಹನಿಮೂನ್‌ಗೆ ಹೋಗುತ್ತೇವೆ ಎಂದು ಉತ್ತರಿಸಿದರು. ಈ ಅನಿರೀಕ್ಷಿತ ಚುಟುಕಿನ ಉತ್ತರ ಕೇಳಿ ಕೆಲವರು ದಿಕ್ಕೆಟ್ಟಂತೆ ಬಹಳ ಜನ ನಗೆಗಡಲಿನಲ್ಲಿ ತೇಲಿದರು!

ಯಾವ ಧರ್ಮ–ಮತಗಳ ಸಂಕೋಲೆಗಳಿಗೂ ಸಿಗದೆ ನಿಸಾರ್ ಅಹ್ಮದ್ ಹಾಗೂ ಮನೋರಮಾರವರ ಜೀವನ ಮಾದರಿಯಾಗಿದೆ. ಮನು ಬಹಳ ಯೋಜಿತವಾಗಿ ಬದುಕು ಕಟ್ಟಿಕೊಂಡ ಬಗ್ಗೆ ನನಗೆ ಹೆಮ್ಮೆ ಇದೆ. ಇವರ ಇಬ್ಬರು ಮಕ್ಕಳೂ ಈಗ ಉನ್ನತ ವಿದ್ಯಾಭ್ಯಾಸ ಪಡೆದು ಒಳ್ಳೆಯ ಕೆಲಸಗಳಲ್ಲಿದ್ದು ವಿವಾಹವಾಗಿ ಸುಖವಾಗಿದ್ದಾರೆ.

**(ಮುಂದುವರೆಯುವುದು)**

## ನಿಮ್ಮ ಮಾತು

ಪ್ರಿಯ ಸಂಪಾದಕರೇ,

ಮೋದಿ ಸಂಚಿಕೆ ಚೆನ್ನಾಗಿದೆ. ಮೋದಿ ಮತ್ತು ಕಾಂಗ್ರೆಸ್ ಬಗ್ಗೆ ನೀವು ಬರೆದಿರುವುದು ಸರಿಯಾಗಿಯೇ ಇದೆ. ಆದರೆ ನೀವು ಪರ್ಯಾಯ ಆಪ್ ಎನ್ನುವುದನ್ನು ಒಪ್ಪಲಾರೆ. ಬೆಂಗಳೂರಿನ ಕೆಲ ಬುದ್ಧಿಜೀವಿಗಳು ಕಾಂಗ್ರೆಸ ಜೊತೆ ನಿಂತಿರುವುದು ಜಿಗುಪ್ಸೆ ಹುಟ್ಟಿಸುತ್ತಿದೆ. ನೈತಿಕ ಕ್ರೋಧದ ಗೈರು ಹಾಜರಿ ಎಲ್ಲೆಲ್ಲೂ ಎದ್ದು ಕಾಣುತ್ತಿದೆ.

**–ವಸಂತ ಬನ್ನಾಡಿ,** ಕುಂದಾಪುರ

ಇಲ್ಲಿನ ಸಾರ್ವಜನಿಕ ಗ್ರಂಥಾಲಯದಲ್ಲಿ ಪತ್ರಿಕೆ ನೋಡಿ ಖುಷಿಯಾಯಿತು. ಏಪ್ರಿಲ್ ಸಂಚಿಕೆಯ ನಿಮ್ಮ ಮೂರು ಬರಹ ಗಳು ಅಮೂಲ್ಯ ಒಳನೋಟಗಳಿಂದ ಕೂಡಿವೆ. ಸಂಪಾದಕೀಯದಲ್ಲಿ ಬರೆದಿರುವ 'ಮೋದಿ ರಾಜಕಾರಣ, ಜಾತಿ ವ್ಯವಸ್ಥೆ ಕುರಿತ ನಮ್ಮ ಗ್ರಹಿಕೆ ಬದಲಾಗಬೇಕಾದುದನ್ನು ಸೂಚಿಸುತ್ತದೆ' ಎಂಬ, 'ಸಮಕಾಲೀನ'ದಲ್ಲಿನ 'ಇದು ಭ್ರಷ್ಟ ಅಭಿವೃದ್ಧಿಯಿಂದ ದುಷ್ಟ ಅಭಿವೃದ್ಧಿಯ ಕಡೆಗೆ ಪಯಣವಷ್ಟೆ' ಎಂಬ ಮತ್ತು ಬಸವ ಕಲ್ಯಾಣ ಕುರಿತ ಲೇಖನದಲ್ಲಿನ 'ಕನ್ನಡ ಮನಸ್ಸೇಕೆ ಇಷ್ಟೊಂದು ಅಭಿರುಚಿಹೀನವಾಗುತ್ತಿದೆ?' ಎಂಬ ಆತಂಕದ ಮಾತುಗಳು ನನ್ನನ್ನು ಯೋಚನೆಗೆ ಹಚ್ಚಿವೆ. ಹಾಗೇ ಎಲ್.ಕೆ. ಪೂರ್ಣಿಮಾ ಅವರ ಈಶಾನ್ಯ ಭಾರತ ಕುರಿತ ಲೇಖನ ಕುತೂಹಲ ಹುಟ್ಟಿಸಿತು.

**–ಎನ್. ಬಿ. ಚಂದ್ರಕಾಂತ,** ದಾವಣಗೆರೆ

ಗೋರಾ–ಗಾಂಧಿ ಮುಖಾಮುಖಿ ಕುರಿತ ಪುಸ್ತಕದ ಪರಿಚಯ ಏಪ್ರಿಲ್ ಸಂಚಿಕೆಯ ಗಮನಾರ್ಹ ಲೇಖನ. ಮೋದಿ ಕುರಿತ ಬರಹಗಳಲ್ಲಿ ರಾಜೀವ್ ತಾರಾನಾಥರ ಅಭಿಪ್ರಾಯ ಆತನ ವಿಕ್ಷಿಪ್ತ ರಾಜಕಾರಣದ ಬಗ್ಗೆ ಮನಮುಟ್ಟುವಂತೆ ಎಚ್ಚರಿಸುತ್ತದೆ. ಕಾಂಗ್ರೆಸ್–ಬಿಜೆಪಿಗಳನ್ನು ಸಮನಾಗಿ ತೂಗುವ ಹಾಗೂ ಹೊಣೆ ಹೊರದೆ ಹಿಂದೆ ಸರಿದ ಆಪ್‌ಗೆ ಪೂರ್ಣ ಅಂಕ ಕೊಡುವ ಸಂಪಾದಕೀಯ ಮಾತ್ರ ಈ ಕ್ಷಣದ ಸಮ್ಯಕ್ ಗ್ರಹಿಕೆಯಾಗಿ ಕಾಣುವುದಿಲ್ಲ.

**–ಕೆ.ಪಿ. ನಟರಾಜ,** ತುಮಕೂರು

ಕಳೆದ ಸಂಚಿಕೆಯಲ್ಲಿನ 'ಮೋದಿ ಏಕೆ ಪ್ರಧಾನ ಮಂತ್ರಿಯಾಗಬಾರದು?' ಎಂಬ ತಲೆಹರಹದಡಿಯ ಲೇಖನಗಳು ದಿಟ್ಟ ಪತ್ರಿಕೋದ್ಯಮಕ್ಕೆ ಕೈಗನ್ನಡಿ ಹಿಡಿಯುವಂತಿವೆ. ನಿಮಗೆ ಅಭಿನಂದನೆಗಳು.

**–ಎಂ.ಆರ್. ಸುಭಾಷ್,** ಮೈಸೂರು

ನಿಮ್ಮ ರಾಜಕೀಯ ಮತ್ತು ಸಾಂಸ್ಕೃತಿಕ ವಿಶ್ಲೇಷಣೆಗಳು ಹಾಗೂ 'ಸಮಕಾಲೀನ'ದಲ್ಲಿನ ಬರಹಗಳು ನಿಮ್ಮ ಪತ್ರಿಕೆಗಾಗಿ ಈ ಹಿಂದೆ ಲಂಕೇಶ್ ಬದುಕಿದ್ದಾಗ ಅವರ ಪತ್ರಿಕೆಗೆ ಕಾಯುತ್ತಿದ್ದಂತೆ ಕಾಯುವಂತೆ ಮಾಡುತ್ತಿವೆ.

**–ಎಸ್. ದಯಾನಂದ,** ಶಿವಮೊಗ್ಗ

ನಾಡಿನ ನೈಜ ಸಮಾಜವಾದಿಗಳನ್ನು ಹೆಕ್ಕಿ ಹೆಕ್ಕಿ ತೆಗೆದು ಇಂದಿನ ಪೀಳಿಗೆಗೆ ಪರಿಚಯಿಸುತ್ತಿರುವ ನಮ್ಮೆಲ್ಲರ ಪ್ರೀತಿಯ ಸಂಪಾದಕರಿಗೆ ನನ್ನದೊಂದು ಪ್ರೀತಿಯ ಸಲಾಂ.

**–ಸಿ.ಚೆನ್ನಬಸವಣ್ಣ,** ಬಳ್ಳಾರಿ





‘ಜಾತಿ ವಿನಾಶ’ ಡಾ. ಅಂಬೇಡ್ಕರ್‌ರ ಸುಪ್ರಸಿದ್ಧ ಮತ್ತು ಬಹು ಮುಖ್ಯ ಲೇಖನ. ಸುಮಾರು ೧೦೦ ಪುಟಗಳ ಈ ಲೇಖನಕ್ಕೆ ಸುಪ್ರಸಿದ್ಧ ಲೇಖಕಿ ಆರುಂಧತಿ ರಾಯ್ ೧೬೪ ಪುಟಗಳ ಒಂದು ಪ್ರಸ್ತಾವನೆಯನ್ನು ಬರೆದು ಒಟ್ಟು ೪೦೦ ಪುಟಗಳ **‘The Doctor and the Saint’** ಎಂಬ ಬೃಹತ್ ಟೀಕೆ-ವ್ಯಾಖ್ಯಾನಗಳ ಗ್ರಂಥವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಅಂಬೇಡ್ಕರ್ ಅವರ ಮೂಲ ಲೇಖನದ ಬಗ್ಗೆ ಆಗ ಗಾಂಧೀಜಿ ಬರೆದಿದ್ದ ವಿಮರ್ಶೆಯನ್ನು ಮುನ್ನೆಲೆಯಾಗಿಟ್ಟುಕೊಂಡು ರಾಯ್ ಗಾಂಧಿ-ಅಂಬೇಡ್ಕರ್ ಮುಖಾಮುಖಿಯ ತಾತ್ವಿಕ ವಿವೇಚನೆ ಮಾಡುತ್ತಾ ‘ಇಂದು ದೇಶಕ್ಕೆ ತುರ್ತಾಗಿ ಅಂಬೇಡ್ಕರ್ ಬೇಕಾಗಿದ್ದಾರೆ’ ಎಂದು ಪ್ರತಿಪಾದಿಸಿದ್ದಾರೆ. ಈ ಕುರಿತು ಅವರು ಇದೇ ಮಾರ್ಚ್ ೧೦ರ ‘ಔಟ್‌ಲುಕ್’ ಪತ್ರಿಕೆಗೆ ನೀಡಿರುವ ದೀರ್ಘ ಸಂದರ್ಶನವನ್ನು ಗಮನಿಸಿದರೆ ರಾಯ್ ಗಾಂಧಿ ದರ್ಶನ ಕುರಿತು ಈವರೆಗೆ ಜಗತ್ತಿನಾದ್ಯಂತ ನಡೆದಿರುವ ಚರ್ಚೆ-ವ್ಯಾಖ್ಯಾನಗಳನ್ನು ಗಮನಿಸದೆ, ಅಂಬೇಡ್ಕರ್‌ಗೆ ಸದೃಶವಾಗಿ ಮಾತ್ರ ಗಾಂಧಿಯನ್ನು ಓದಿಕೊಂಡು ವಾದ ಮಾಡುತ್ತಿರುವಂತೆ ಕಾಣುತ್ತದೆ. ಅದೇನೇ ಇದ್ದರೂ, ರಾಯ್ ಅವರ ಈ ಗ್ರಂಥ ಈಗಾಗಲೇ ಹಲವು ಟೀಕೆ-ಚರ್ಚೆಗಳಿಗೆ ಕಾರಣವಾಗಿದೆ. ಈ ಬಗ್ಗೆ ನಮ್ಮ ನಡುವಿನ ಪ್ರತಿಭಾಶಾಲಿ ಅಂಬೇಡ್ಕರ್ ವಿದ್ವಾಂಸರಲ್ಲಿ ಒಬ್ಬರಾದ ಆನಂದ್ ತೇಲ್ತುಂಬ್ಡೆಯವರು ‘ದ ಹಿಂದೂ’ ಪತ್ರಿಕೆಯ ಏಪ್ರಿಲ್ ೨ರ ಸಂಚಿಕೆಯಲ್ಲಿ ಲೇಖನವೊಂದನ್ನು ಬರೆದರು. ಅದರ ಕನ್ನಡಾನುವಾದವನ್ನು ನಮ್ಮ ಓದುಗರ ಅವಗಾಹನೆಗಾಗಿ ಇಲ್ಲಿ ಪ್ರಕಟಿಸುತ್ತಿದ್ದೇವೆ.-ಸಂ

# ನಮ್ಮ ಕಾಲಕ್ಕಾಗಿ ಬೇಕಾದ ಅಂಬೇಡ್ಕರ್

-ಡಾ. ಆನಂದ್ ತೇಲ್ತುಂಬ್ಡೆ



ಆರುಂಧತಿ ರಾಯ್ ಪ್ರಸ್ತಾವನೆ ದಲಿತ ವಲಯದಲ್ಲಿ ಈಗಾಗಲೇ ಸಾಕಷ್ಟು ವಿವಾದಗಳನ್ನು ಹುಟ್ಟುಹಾಕಿದೆ. ಇದು ೧೯೭೦ ರ ದಶಕದಲ್ಲಿ ಆಗಿನ್ನೂ ಕಣ್ಣು ತೆರೆಯುತ್ತಿದ್ದ ದಲಿತ ಸಾಹಿತ್ಯ ಸಂದರ್ಭದಲ್ಲಿ ದಲಿತ ಸಾಹಿತ್ಯ ಯಾರಿಂದ ಸೃಷ್ಟಿಯಾಗಬೇಕು ಎಂಬ ಬಗ್ಗೆ ನಡೆದ ಚರ್ಚೆಯನ್ನು ನೆನಪಿಸುತ್ತದೆ. ದಲಿತರಾಗಿ ಹುಟ್ಟಿದವರು ಮಾತ್ರ ದಲಿತ ಸಾಹಿತ್ಯ ರಚಿಸಬೇಕು ಎಂಬುದೇ ಅಂದಿನ ದಲಿತ ಸಾಹಿತ್ಯ ಪೋಷಕರ ಸ್ಪಷ್ಟ ಅನಿಸಿಕೆಯಾಗಿತ್ತು. ಇಂದಿನ ಈ ವಿವಾದವು ಅಂಬೇಡ್ಕರನ್ನಾಗಲೀ, ಅವರ ಪಠ್ಯಗಳನ್ನಾಗಲೀ ಪರಿಚಯಿಸಲು ನಿಮ್ಮ (ಪರಿಶಿಷ್ಟ) ಜಾತಿ ಪತ್ರವನ್ನು ತೋರಿಸಬೇಕು ಎನ್ನುವಂತಿದ್ದ ಆ ಅಸ್ಮಿತೆಯ ವ್ಯಸನವನ್ನೇ ಪ್ರತಿಬಿಂಬಿಸುವಂತಿದೆ. ಈ ಹಿಂದೆ ಹಲವಾರು ದಲಿತೇತರರು ಅಂಬೇಡ್ಕರ್ ಹಾಗೂ ಅವರ ಬರಹಗಳ ಬಗ್ಗೆ ಸಾಕಷ್ಟು ಬರೆದಿದ್ದರೂ, ರಾಯ್ ಪ್ರಸ್ತಾವನೆಯ ಬಗ್ಗೆ ಏಕಿಷ್ಟು ವಿವಾದವೋ ತಿಳಿಯದಾಗಿದೆ. ಇದಕ್ಕೆ ಕಾರಣ, ಆಕೆ ‘ಸೆಲಬ್ರಿಟಿ’ ಎಂಬುದೋ ಅಥವಾ ಬಹಳಷ್ಟು ಮಧ್ಯಮ ವರ್ಗದ ದಲಿತರು ಅಂದುಕೊಂಡಂತೆ ರಾಯ್ ಮಾವೋವಾದಿಗಳಿಗೆ ಬೆಂಬಲ ನೀಡುತ್ತಾರೆ ಎಂಬುದೋ? ಬಹುಶಃ ಎರಡನೇ ಕಾರಣವೇ ಇರಬೇಕು. ಕಮ್ಯೂನಿಷ್ಟ್ ಸಿದ್ಧಾಂತಕ್ಕೆ ಅಲ್ಪ ಸಂಬಂಧವಿದ್ದರೂ ಸಾಕು ಅದು ಇವರ ನಕಾರಾತ್ಮಕತೆಗೆ ಹಾಗೂ ವಿರೋಧಕ್ಕೆ ಕಾರಣವಾಗಿಬಿಡುತ್ತದೆ.

ಇದು ಎಬ್ಬಿಸಿರುವ ಗದ್ದಲಕ್ಕೆ ಕಾರಣಗಳೇನೇ ಇದ್ದರೂ, ಅದು ಅನಗತ್ಯವಾದದ್ದು. ಸೋಷಿಯಲ್ ಮೀಡಿಯಾಗಳಲ್ಲಿ ಉಕ್ಕಿ ಹರಿಯುತ್ತಿರುವ ಕೀಳು ಮಟ್ಟದ ಮಾತುಗಳನ್ನು ಬದಿಗೊತ್ತಿ ನೋಡಿದಾಗ ಅವರ ಪ್ರಸ್ತಾವನೆಯ ಬಗ್ಗೆ ಇರುವ ಗಮನಾರ್ಹ ತಕರಾರುಗಳೆಂದರೆ ಅಂಬೇಡ್ಕರ್‌ರವರನ್ನು ಪರಿಚಯಿಸಲು ಗಾಂಧೀಜಿಯನ್ನು ಅನುಚಿತವಾಗಿ ಹಾಗೂ ಅತಿಯಾಗಿ ಮುನ್ನೆಲೆಗೆ ತಂದಿರುವುದು ಅಥವಾ ಪ್ರಥಮವಾಗಿ ಇದನ್ನು ಬರೆಯಲು ಅವರಿಗಿರುವ ಅರ್ಹತೆಯ ಬಗ್ಗೆ ಅಥವಾ ಅವರ ಪ್ರಸ್ತಾವನೆ ಮುಖ್ಯ ಪಠ್ಯಕ್ಕೆ ಸಂಬಂಧಿಸಿಯೇ ಇಲ್ಲ ಎನ್ನುವುದು. ಇವರೆಲ್ಲರ ಅಭಿಪ್ರಾಯಗಳಲ್ಲಿ ಹುರುಳಿರಬಹುದಾದರೂ, ಅವನ್ನು ಅವರು ಅಷ್ಟು ಜಬರದಸ್ತಾಗಿಯೂ ಹಾಗೂ ನಕರಾತ್ಮಕವಾಗಿ ವ್ಯಕ್ತಪಡಿಸುವ ಅಗತ್ಯವಿರಲಿಲ್ಲ. ನಿಜ ಸಂಗತಿಯೇನೆಂದರೆ, ರಾಯ್ ಎಂಬ ಸೃಜನಶೀಲ ಲೇಖಕಿ ಯಥಾವತ್ತಾಗಿ ಅಂಬೇಡ್ಕರ್ ಬರಹವನ್ನು ಎದುರುಗೊಳ್ಳದೇ, ಆ ಬರಹದ ಬಗ್ಗೆ ಗಾಂಧೀಜಿ ‘ಹರಿಜನ’ ಪತ್ರಿಕೆಯಲ್ಲಿ ನೀಡಿದ ಪ್ರತಿಕ್ರಿಯೆ ಮತ್ತದರಿಂದ ಅವರಿಬ್ಬರ ಮಧ್ಯೆ ನಡೆದ ವಾಗ್ವಾದವನ್ನು ಮುನ್ನೆಲೆಗೆ ತಂದುಬಿಟ್ಟಿದ್ದಾರೆ. ಜಾತಿ ಸಮಸ್ಯೆ ಬಗ್ಗೆ ಒಣ ಯಾಂತ್ರಿಕ ರೀತಿಯಲ್ಲಿ ಬರೆಯುವುದಕ್ಕಿಂತ, ಉದಾರವಾದಿ ಹಿಂದೂ ಸಮಾಜವನ್ನು ಪ್ರತಿನಿಧಿಸುತ್ತಿದ್ದ ಗಾಂಧಿ ಹಾಗೂ ಅಂಬೇಡ್ಕರ್‌ರ ವಿಚಾರಗಳ ಸಾದೃಶ್ಯವನ್ನು ಮುಂದಿಟ್ಟುಕೊಂಡು ಬರೆದರೆ ಹೆಚ್ಚು ಪರಿಣಾಮಕಾರಿಯಾಗಿ ಜಾತಿ ಸಮಸ್ಯೆಯನ್ನು ಮುನ್ನಲೆಗೆ ತರಬಹುದೆಂದು ಊಹಿಸಿರಬೇಕು.



ಅರ್ಹತೆಯನ್ನು ಕುರಿತು ಹೇಳುವುದಾದರೆ, ಬರೆಯುವ ವಿಷಯವನ್ನು ಅರ್ಥೈಸಿಕೊಳ್ಳಲು ಬಹಳ ಶ್ರಮವಹಿಸಿದ್ದಾರಾದರೂ, ಅವರ ಬರಹ ಯಾವುದೇ ಸತ್ವಪೂರ್ಣ, ಅಧಿಕಾರಯುತ, ಪಾಂಡಿತ್ಯಪೂರ್ಣ ಒಳನೋಟಗಳಿಲ್ಲದೇ ಬಡವಾಗಿದೆ ಎಂದೇ ಹೇಳಬೇಕು. ಅದು, ಅವರು ಒಗ್ಗಿಸಿಕೊಂಡ ಬರವಣಿಗೆಯ ಶೈಲಿಯ ಪರಿಣಾಮವಾಗಿಯೇ ಕೇವಲ ಸಾಮಾನ್ಯಜ್ಞಾನದ ವಸ್ತುನಿಷ್ಠೆಯ ಮಟ್ಟದಿಂದ ಮೇಲೇರಲಾಗಿಲ್ಲ. ಬಹುಶಃ ಹಾಗಾಗಿಯೇ ಏನೋ ಬುದ್ಧಿಜೀವಿಗಳು ಎಂದುಕೊಳ್ಳುವವರಿಗಿಂತ ಸಾಮಾನ್ಯರಿಗೆ ಆಕೆಯ ಬರಹ ಇಷ್ಟವಾಗುತ್ತದೆಯೋ ಏನೋ!.

## ದಿಟವಲ್ಲದ ಮತ್ತು ದಿಟವಾದ ಅಂಬೇಡ್ಕರ್:

ಇವರ ಪ್ರಸ್ತಾವನೆಯ ಬಗ್ಗೆ ಬಹಳ ಆಸಕ್ತಿದಾಯಕ ವಾದವೊಂದು ಹೊರಬಂದದ್ದು ದಲಿತ ವರ್ಗದಿಂದಲ್ಲ, ಆದರೆ ಮೇಲ್ಜಾತಿಯ ಪತ್ರಕರ್ತರೊಬ್ಬರಿಂದ. (“B.R. Ambedkar, Arundhanti Roy, and the politics of appropriation” – by G. Sampath, Livemint, March 18th 2014). ಅವರು ಅರುಂಧತಿಯವರಿಗೆ ಸವಾಲೆಸೆಯುತ್ತಾ, “ನಿಯಮ ಗಿರಿ ಪರ್ವತ ಶ್ರೇಣಿಯ ಒಡಲೊಳಗಿನ ಬಾಕ್ಸೈಟ್ ಅದಿರು ಆದಿವಾಸಿಗಳಿಗೇ ಬಿಡಬೇಕೆನ್ನುವ ರಾಯ್, ದಲಿತರ ಜೊತೆಯಲ್ಲೇ ಇರುವ ಅಂಬೇಡ್ಕರ್‌ರವರನ್ನು ದಲಿತರ ಪಾಲಿಗಷ್ಟೇ ಬಿಟ್ಟುಬಿಡುವುದಿಲ್ಲವೇಕೆ? ಎಂದು ಪ್ರಶ್ನಿಸುತ್ತಾರೆ. ಆದರೆ ಈ ವಾದಸರಣಿ ಸೃಷ್ಟಿಸುವ ಅಡ್ಡ ಪರಿಣಾಮಗಳು ಅಪಾಯಕಾರಿಯಾಗಿವೆ. ಈ ವಾದದ ಪ್ರಕಾರ ಜಾತಿ ಆಧಾರದಲ್ಲಿ ‘ಅನ್ಯ’ ಎನ್ನುವುದರ ಬಗ್ಗೆ ಯಾವುದೇ ರೀತಿಯ ಪ್ರಗತಿಶೀಲ ತೊಡಗಿಸಿಕೊಳ್ಳುವಿಕೆಯೇ ನ್ಯಾಯಸಮ್ಮತವಲ್ಲ ಎಂದು ಬಿಡಬಹುದು. ಅಂಬೇಡ್ಕರ್‌ರವರು ದಲಿತರ ಸಾಂಸ್ಕೃತಿಕ ಒಳಿತಿನ ಸಂಕೇತವಾದರೂ ಅವರನ್ನು ಕೇವಲ ದಲಿತರಿಗೆ ಸೀಮಿತಗೊಳಿಸುವುದು ಅವರಿಗೆ ಮಾಡುವ ಕಟು ಅಪಮಾನವೂ ಹೌದು. ಹಾಗೆಯೇ ದಲಿತರ ಹಿತಾಸಕ್ತಿಗಳಿಗೆ ಅಳೆಯಲಾರದಷ್ಟು ಪ್ರಮಾಣದ ಹಾನಿಯೂ ಹೌದು. ನಿಯಮಗಿರಿಯ ಅದಿರನ್ನು ಆದಿವಾಸಿಗಳ ಒಡೆತನದಲ್ಲೇ ಇರಲಿ

ಎನ್ನುವುದು ಅಭಿವೃದ್ಧಿಯ ಸಿದ್ಧ ಮಾದರಿಗಳನ್ನು ಪ್ರಶ್ನಿಸುವ ಪ್ರಗತಿಶೀಲ ಸಂವಾದವಾದರೆ, ಅಂಬೇಡ್ಕರ್‌ರನ್ನು ದಲಿತರಿಗೇ ಸೀಮಿತಗೊಳಿಸುವುದು ಬಾಬಾ ಸಾಹೇಬರ ಜಾತಿ ವಿನಾಶ ಅಜೆಂಡಾದ ಅವನತಿಗೆ ಕಾರಣವಾಗುತ್ತದೆ.

ಇಲ್ಲಿ ಸೋಜಿಗದ ಸಂಗತಿಯೇನೆಂದರೆ, ಈ ವಿವಾದ ತನ್ನ ಮುಖ್ಯ ಭೂಮಿಕೆಯ ಪರಿಧಿಯನ್ನು ದಾಟಿ ಬಹುದೂರ ಸಾಗಿರುವುದು. ಇದಕ್ಕೆ ಕಾರಣವೆಂದರೆ, ಅರುಂಧತಿ ರಾಯ್‌ರಿಂದ ಪ್ರಸ್ತಾವನೆ ಬರೆಸುವ ಪ್ರಕಾಶಕರ ವ್ಯಾವಹಾರಿಕ ತರ್ಕ, ಜಾಣ್ಮೆ, ಬೂಕರ್ ಪ್ರಶಸ್ತಿ ವಿಜೇತರೆಂಬ ಪ್ರಸಿದ್ಧಿ ಹಾಗೂ ನಂತರದ ಹಲವಾರು ವಿಷಯಗಳ ಬಗ್ಗೆ, ಹಲವಾರು ಸಂದರ್ಭಗಳಲ್ಲಿ ಅವರ ನಿರ್ಭೀತವಾದ ಜನಪರ ನಿಲುವುಗಳಿಂದಾಗಿ ಈ ಪುಸ್ತಕ ಜಾಗತಿಕ ಗಮನ ಸೆಳೆಯುವುದು ಖಂಡಿತ. ಮೇಲಾಗಿ ಈ ಮೊದಲಿನಂತೆ ಆಕೆಯ ಬರಹ ವಿವಾದಾತ್ಮಕವಾಗಬಹುದೆಂದೂ ಊಹಿಸಬಹುದಾಗಿತ್ತು. ಇದೆಲ್ಲದರ ಅರ್ಥವೆಂದರೆ ಇದು ಪುಸ್ತಕ ಮಾರಾಟಕ್ಕೆ ಉತ್ತೇಜನ ಹಾಗೂ ಪ್ರಕಾಶಕರಿಗೆ ಸುಗ್ಗಿಯನ್ನೇ ತಂದಿದೆ.

ನವಯಾನ ಪ್ರಕಾಶನವು ಇದೆಲ್ಲವನ್ನು ಕರಾರುವಕ್ಕಾಗಿ ಯೋಜಿಸಿ ಈ ರೀತಿ ಮಾಡಿತೋ ಇಲ್ಲವೋ, ಆದರೆ ಉತ್ಪನ್ನವೊಂದನ್ನು ಮಾರಾಟ ಮಾಡುವ ಈ ಬಗೆಯ ಸ್ಥಾಪಿತ ತಂತ್ರಗಾರಿಕೆಯನ್ನು ಬಳಸಿದ ಯಾವುದೇ ಪ್ರಕಾಶಕರ ವ್ಯಾವಹಾರಿಕ ವ್ಯಾಕರಣದ ಬಗ್ಗೆ ನಾವ್ಯಾರೂ ಸೆಟೆದುಕೊಳ್ಳುವ ಅಗತ್ಯವಿಲ್ಲ. ನವಯಾನ ಪ್ರಕಾಶನ ಇತ್ತೀಚೆಗಷ್ಟೇ, 'ಜಾತಿ ವಿರೋಧಿ' ಎಂಬ ಹಣೆಪಟ್ಟಿ ಅಂಟಿಸಿಕೊಂಡಿರುವುದಾದರೂ ಅಂಬೇಡ್ಕರ್ ಕುರಿತು ಕೇವಲ ಭಟ್ಟಂಗಿತನದ ಹಾಗೂ ಭಕ್ತಿ ಪಂಥದ ಸಾಹಿತ್ಯವನ್ನು ಪ್ರಕಟಿಸುವುದು ಜಾತಿವಿನಾಶಕ್ಕೆ ಖಂಡಿತ ಬೆಂಬಲ ನೀಡಿದಂತಲ್ಲ ಎಂದು ಇಲ್ಲಿ ಹೇಳಲೇಬೇಕು. ಕೆಲವರಿಂದ ಉದ್ಭವಿಸುವ ಈ ವಿವಾದಗಳು ತಣ್ಣಗಾಗುತ್ತಿದ್ದಂತೆ, ಬಹುಸಂಖ್ಯೆಯ ದಲಿತರು, ಅರುಂಧತಿ ರಾಯ್ ಕೂಡ ನಮ್ಮ ದೈವವನ್ನು ಆರಾಧಿಸಿದರೆಂದು ಹೆಮ್ಮೆಪಡುವುದರಲ್ಲಷ್ಟೇ ಕೊನೆಗೊಳ್ಳುತ್ತದೆ. ಇಂತಹ ಪ್ರತಿಯೊಂದು ಬಗೆಯ ಅಂಬೇಡ್ಕರ್ ಆರಾಧನೆ ಜಾತಿ ಅಸ್ಮಿತೆಯನ್ನು ಗಟ್ಟಿಗೊಳಿಸುತ್ತಾ, ಜಾತಿವಿನಾಶದ ಬಹುಮುಖ್ಯ ಕಾರ್ಯಕ್ರಮದಿಂದ ನಮ್ಮನ್ನು ಬಹುದೂರ ಒಯ್ಯುತ್ತದೆ.

ಇಂದು ಅಂಬೇಡ್ಕರ್‌ರವರನ್ನು ಒಪ್ಪಿಕೊಳ್ಳುವುದು ಎಂದರೆ, ಜಾತಿ ವಿರೋಧಿ ಮೌಲ್ಯಗಳನ್ನು ಹರಡುವುದು ಎಂದೇನೂ ಅರ್ಥವಾಗಲಾರದು. ಖಂಡಿತವಾಗಿ ಇಂದು ಸಾರ್ವಜನಿಕ ಸಮ್ಮತಿ, ಗೌರವ ಪಡೆಯುವುದರಲ್ಲಿ ಅಂಬೇಡ್ಕರ್ ಇನ್ನುಳಿದ ಎಲ್ಲಾ ನಾಯಕರನ್ನೂ ಮೀರಿಸಿ ನಿಂತಿದ್ದಾರೆ. ಪ್ರತಿಮೆಗಳು, ಚಿತ್ರಗಳು, ವಿಚಾರ ಸಂಕಿರಣಗಳು, ಪುಸ್ತಕಗಳು, ಸಂಶೋಧನೆಗಳು, ಸಮಾವೇಶಗಳು, ಸಂಘಟನೆಗಳು, ಹಾಡುಗಳೂ ಸೇರಿದಂತೆ ಯಾವುದೇ ಬಗೆಯ ಜನಪ್ರಿಯತೆಯ ಮಾನದಂಡದಲ್ಲಾಗಲೀ, ಅಂಬೇಡ್ಕರ್‌ಗೆ ಪ್ರತಿಸ್ಪರ್ಧಿಗಳೇ ಇಲ್ಲವೆಂಬುದು ನಿಜ. ಚಲನಚಿತ್ರಗಳ ಹಾಗೂ ಕಿರುತೆರೆಯ ದೃಶ್ಯಾವಳಿಗಳಲ್ಲಿಯೂ ಅಂಬೇಡ್ಕರ್‌ರವರ ಚಿತ್ರ ಖಾಯಂ ಆಗಿ ಕಾಣಿಸಿಕೊಳ್ಳುತ್ತಿರುವುದು ಕುತೂಹಲಕಾರಿಯಾಗಿದೆ. ಆದರೆ ಅದೇ ವೇಳೆಯಲ್ಲಿ ಜಾತಿ ತಾರತಮ್ಯಗಳು, ಜಾತೀಯತೆಯ ಹಿಂಸೆ, ಜಾತಿ ಸಂಘಟನೆಗಳು ಹಾಗೂ ಜಾತಿಯ ಮೇಲಿನ ಚರ್ಚೆಗಳ ಸಂಖ್ಯೆಯು ಸಮಾನಾಂತರವಾಗಿ ಏರುತ್ತಲೇ ಇದೆ. ಈ ವಿಪರ್ಯಾಸವನ್ನು ಗ್ರಹಿಸಿ, ಅರ್ಥೈಸುವ ಒಂದೇ ದಾರಿಯೆಂದರೆ, ದಲಿತ ಸಮುದಾಯದಲ್ಲೇ ಸದಾ ಮೊಳಕೆಯೊಡೆಯುತ್ತಿರುವ ಅರಿವು ಹಾಗೂ ಜಾಗೃತಿಯನ್ನು ಹತ್ತಿಕ್ಕ ಬಯಸುವ ಪಟ್ಟಭದ್ರ ಹಿತಾಸಕ್ತಿಗಳು ಅಚ್ಚು ಹಾಕಿರುವ ದಿಟವಲ್ಲದ ಅಂಬೇಡ್ಕರ್ ಪ್ರತಿರೂಪಗಳನ್ನು ಪ್ರತ್ಯೇಕಿಸುವುದೇ ಆಗಿದೆ. ಈ ರೀತಿಯ ನಿಜವಲ್ಲದ ಅಂಬೇಡ್ಕರ್ ಪ್ರತಿಕೃತಿಗಳು, ಮೊದಲೇ ಸಮಸ್ಯಾತ್ಮಕವಾದ ಅಂಬೇಡ್ಕರ್‌ರವರನ್ನು ಅತಿ ಸರಳಾತ್ಮಕ ಸಂಕೇತಗಳ ಚೌಕಟ್ಟಿನಲ್ಲಿ ಹಿಡಿದಿಡುತ್ತವೆ– ಸಂವಿಧಾನ ಶಿಲ್ಪಿ, ಮಹಾನ್ ದೇಶಪ್ರೇಮಿ, ಮೀಸಲಾತಿಯ ಜನಕ, ಕಮ್ಯುನಿಸ್ಟರ ಕಡುವಿರೋಧಿ, ಉದಾರ ಪ್ರಜಾಪ್ರಭುತ್ವವಾದಿ, ಶ್ರೇಷ್ಠ ಸಂಸದೀಯ ಪಟು, ದಲಿತ ರಕ್ಷಕ, ಬೋಧಿಸತ್ವ ಇತ್ಯಾದಿ. ಈ ರೀತಿಯ ತೊಂದರೆ ಮಾಡದ, ಯಥಾಸ್ಥಿತಿವಾದಿ ಅಂಬೇಡ್ಕರ್ ಪ್ರತಿರೂಪಗಳನ್ನು ಚಲಾವಣೆಗೆ ತರುತ್ತಾ ಹೋದಂತೆಲ್ಲ ದಿಟವಾದ ಅಂಬೇಡ್ಕರ್‌ರ ಪೂರ್ಣ ರೂಪ ಮಬ್ಬಾಗಿ ಹೋಗತೊಡಗುತ್ತದೆ.

## ಯಾವ ಅಂಬೇಡ್ಕರ್ ?

ಈ ಎಲ್ಲಾ ಮಸಲತ್ತುಗಳೊಂದಿಗೆ ಪಟ್ಟಭದ್ರಹಿತಾಸಕ್ತಿಗಳು ಪ್ರಚಾರಕ್ಕೆ ತಂದಿರುವ ಈ ಪ್ರತಿರೂಪಗಳು ಪ್ರಭುತ್ವದ ಬೆಂಬಲವನ್ನೂ ಪಡೆದಿದೆ. ತಮ್ಮ ಜೀವನದುದ್ದಕ್ಕೂ ಸಕ್ರಿಯರಾಗಿ ಯಾವುದೇ ಸಿದ್ಧಾಂತಕ್ಕೆ ಜೋತು ಬೀಳದ ಅಂಬೇಡ್ಕರ್‌ರವರ ವಿಕಾಸವನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟ. ಸ್ವಗೋತ್ರ, ಭಿನ್ನಗೋತ್ರಗಳ ವಿವಾಹ ನಿಯಮಗಳಿಂದ ಬಂಧಿಸಲ್ಪಟ್ಟ ವರ್ಗಗಳೇ ಜಾತಿಗಳೆಂದು ಸಿದ್ಧಾಂತೀಕರಿಸಿ, ಬಹುಸಂಖ್ಯಾತ ಹಿಂದೂ ಸಮಾಜ ಎಚ್ಚೆತ್ತು, ಪರಿವರ್ತನೆಗೊಂಡು, ಅಂತರ್ಜಾತೀಯ ವಿವಾಹಗಳ ಮೂಲಕ ಜಾತಿಗಳನ್ನು ವರ್ಗಗಳನ್ನಾಗಿ ಮುಕ್ತಗೊಳಿಸಬಹುದೆಂದು ನಿರೀಕ್ಷಿಸಿದ ಯುವ ಅಂಬೇಡ್ಕರ್, ಮಹಾಡ್ ಕೆರೆ ನೀರಿನ ಚಳುವಳಿಯ ನಂತರ ಹಿಂದೂ ಸಮಾಜದ ಉಗ್ರ ಉನ್ಮತ್ತ ಪ್ರತಿಭಟನೆಗಳಿಂದ ಭ್ರಮನಿರಸನಗೊಂಡು, ತನ್ನ ಉದ್ದೇಶಗಳನ್ನು ಈಡೇರಿಸಲು ರಾಜಕೀಯ ಕ್ಷೇತ್ರದತ್ತ ಮುಖ ಮಾಡಿದ ಅಂಬೇಡ್ಕರ್‌ಗೆ ಸದೃಶವಾಗಿ ನಿಲ್ಲುತ್ತಾರೆ. ಇಸ್ಲಾಂಗೆ ಮತಾಂತರಗೊಳ್ಳುವ ಅವರ ಬೆದರಿಕೆ ದಲಿತರಿಗೊಂದು ಪ್ರತ್ಯೇಕ ರಾಜಕೀಯ ಅಸ್ಮಿತೆಯನ್ನು ನೀಡುವುದಕ್ಕಾಗಿತ್ತೋ. ಹಿಂದೂಗಳ ಸುಧಾರಣೆಗೆ ಹೇರಿದ ಒತ್ತಡ ತಂತ್ರವಾಗಿತ್ತೋ? ಇನ್ನು ೧೯೩೦ರ ಅಂಬೇಡ್ಕರ್‌ವೊಬ್ಬರಿದ್ದಾರೆ. ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಲು ಕಾತುರರಾಗಿ ಜಾತಿಯನ್ನು ಬದಿಗೊತ್ತಿ ದುಡಿಯುವ ವರ್ಗಗಳ ಸಂಘಟನೆಗಾಗಿ, ಭಾರತದ ಪ್ರಪ್ರಥಮ ಎಡಪಕ್ಷವೆಂದು ಗುರುತಿಸಬಹುದಾದ 'ಇಂಡಿಯನ್ ಲೇಬರ್ ಪಾರ್ಟಿ'(ILP)ಯನ್ನು ಸ್ಥಾಪಿಸಿ ಕಮ್ಯುನಿಸ್ಟರ ಜೊತೆಗೆ ಹೆಜ್ಜೆಹಾಕುತ್ತಲೇ ಜಾತಿಯಿಂದ ತಪ್ಪಿಸಿಕೊಳ್ಳಲು ಧರ್ಮಾಂತರಗೊಳ್ಳುತ್ತೇನೆಂದು ಘೋಷಿಸಿದ ಅಂಬೇಡ್ಕರ್! ಹೀಗೆ ಹಲವು ಅಂಬೇಡ್ಕರರನ್ನು ನಾನು ಗುರುತಿಸಬಹುದು:

೧೯೪೦ರಲ್ಲಿ ILP ಯನ್ನು ವಿಸರ್ಜಿಸಿ ಜಾತಿ ವಿಷಯಕ್ಕೆ ಮರಳಿ Schedule Caste Federation ಹುಟ್ಟುಹಾಕಿ ಸಂಘರ್ಷರಹಿತ ದಾರಿಯಲ್ಲಿ ಸಾಗಿ, ವಸಾಹತುಶಾಹಿ ಸರ್ಕಾರದಲ್ಲಿ ಕಾರ್ಮಿಕ ಮಂತ್ರಿಯಾದ ಅಂಬೇಡ್ಕರ್‌ರವರೋ ಅಥವಾ 'States and Minorities' ಕೃತಿ ರಚಿಸಿ ಸ್ವತಂತ್ರ ಭಾರತದ ಸಂವಿಧಾನದ ಮೂಲ ಧಾತುವಾಗಿ ಸಮಾಜವಾದವನ್ನು ಬೆಸೆಯಲು ಪಣತೊಟ್ಟ ಅಂಬೇಡ್ಕರ್‌ರವರೋ ಅಥವಾ ಕಾಂಗ್ರೆಸ್‌ನೊಂದಿಗೆ ಸಹಕರಿಸಿ ಸರ್ವಪಕ್ಷ ಸರ್ಕಾರಕ್ಕೆ ಬೆಂಬಲ ನೀಡಿ ಸಂವಿಧಾನ ರಚನಾ ಸಭೆಯನ್ನು ಸೇರಲು ಅದರ ಬೆಂಬಲ ಪಡೆದ ಅಂಬೇಡ್ಕರ್‌ರವರೋ? ಪ್ರಾತಿನಿಧಿಕ ತತ್ವವನ್ನು ಮಂಡಿಸುವ ಮೂಲಕ ಮೀಸಲಾತಿ ಪದ್ಧತಿ ರೂಪುಗೊಳ್ಳಲು ಕಾರಣರಾಗಿ, ಅದರಿಂದ ಅವಕಾಶ ಪಡೆದು ಮುಂದುವರಿದ ದಲಿತರು ತಮ್ಮ ವರ್ಗಗಳ ಉನ್ನತಿಗಾಗಿ ಪ್ರಯತ್ನಿಸುವರೆಂದು ಆಶಿಸಿದ ಅಂಬೇಡ್ಕರ್‌ರವರೋ ಅಥವಾ ವಿದ್ಯಾವಂತ ದಲಿತರು ತನ್ನ ಕೈಬಿಟ್ಟರೆಂದು ಸಾರ್ವಜನಿಕವಾಗಿ ದುಃಖಿಸಿದ, ತೆಗಳಿದ ಅಂಬೇಡ್ಕರ್‌ರವರೋ? ಅಥವಾ ಸಂವಿಧಾನ ಶಿಲ್ಪಿಯಾಗಿ ದಲಿತರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಂವಿಧಾನಿಕ ಮಾರ್ಗಗಳನ್ನೇ ಅನುಸರಿಸಬೇಕೆಂದು ಹೇಳಿದ ಅಂಬೇಡ್ಕರ್‌ರವರೋ ಅಥವಾ ಸಂವಿಧಾನವನ್ನು ಅತ್ಯಂತ ಕಟುವಾಗಿ ಟೀಕಿಸಿ ಹೀಗಳೆದು ಅದನ್ನು ಸುಟ್ಟು ಭಸ್ಮ ಮಾಡುವವನು ಮೊದಲು ನಾನೇ ಎಂದು ಘರ್ಜಿಸಿದ ಅಂಬೇಡ್ಕರ್‌ರವರೋ? ಅಂತಿಮವಾಗಿ ಮಾರ್ಕ್ಸ್‌ವಾದವೇ ನನ್ನ ನಿರ್ಧಾರವನ್ನು ಅಳೆಯುವ ಮಾನದಂಡ ಎನ್ನುತ್ತಿದ್ದ ಅಂಬೇಡ್ಕರ್‌ರವರೋ ಅಥವಾ ಅಂಬೇಡ್ಕರ್ ವಿಚಾರಧಾರೆಯ ವಿದ್ವಾಂಸ ಎಲಿನೇರ್ ಜೇಲಿಯೆಟ್ ಹೇಳುವಂತೆ ಬೌದ್ಧಧರ್ಮವನ್ನು ಅಪ್ಪಿಕೊಂಡು ಕಮ್ಯುನಿಷ್ಟ್ ಸಿದ್ಧಾಂತವನ್ನು ವಿರೋಧಿಸಲು ಸಶಕ್ತ ಗರಡಿ ಮನೆಯನ್ನೇ ಕಟ್ಟಿದ ಅಂಬೇಡ್ಕರ್‌ರವರೋ? ಅಥವಾ ಇಹಲೋಕ ತ್ಯಜಿಸುವ ಕೆಲವೇ ದಿನಗಳ ಮುನ್ನ ಬುದ್ಧ ಹಾಗೂ ಮಾರ್ಕ್ಸ್‌ರನ್ನು ಹೋಲಿಸುತ್ತಾ–ಮಾರ್ಕ್ಸ್‌ಗಿಂತ ಬುದ್ಧನೇ ಉತ್ತಮನೇ, ಸೂಕ್ತನೇ?– ಅವರ ಉದ್ದೇಶ ಒಂದೇ ಆಗಿದ್ದು, ಸಾಧಿಸುವ ಮಾರ್ಗ ವಿಭಿನ್ನವಾಗಿತ್ತು ಎಂದ ಅಂಬೇಡ್ಕರ್‌ರವರೋ?

(೧೬ನೇ ಪುಟ ನೋಡಿ

## ಸಮಕಾಲೀನ

# ಪರಿಸರ ಮತ್ತು ಅಭಿವೃದ್ಧಿ



**ಹ**ವಾಮಾನ ಬದಲಾವಣೆ ಕುರಿತ ಅಂತರ್‌ಸರ್ಕಾರ ಸಮಿತಿಯ ವರದಿ ಇದೇ ಏಪ್ರಿಲ್ ೧೫ರಂದು ಬಿಡುಗಡೆಯಾಗಿದ್ದು, ವಾತಾವರಣಕ್ಕೆ ಇಂಗಾಲವನ್ನು ವಿಸರ್ಜಿಸುವುದನ್ನು ಕುರಿತ ಜಾಗತಿಕ ಒಪ್ಪಂದ ಎಲ್ಲ ವಿವಾದಗಳನ್ನು ಪರಿಹರಿಸಿಕೊಂಡು ಸಮರ್ಪಕವಾಗಿ ಜಾರಿಯಾಗದ ಹೊರತು ಹತ್ತಿರದಲ್ಲೇ ಅನಾಹುತ ಖಚಿತ ಎಂದು ಪುನರುಚ್ಚರಿಸಿದೆ. ಈ ವರದಿಯ ಬಗ್ಗೆ ಅಭಿವೃದ್ಧಿಗೊಂಡರಾಷ್ಟ್ರಗಳ ವಕ್ತಾರನಾಗಿ ಅಮೇರಿಕಾದ ಉಪಾಧ್ಯಕ್ಷರು ಇನ್ನು ಕಾಯುವುದು ಅನಾಹುತವನ್ನು ಆಹ್ವಾನಿಸಿದಂತೆಯೇ ಎಂದು ಎಚ್ಚರಿಸಿದ್ದರೆ, ಭಾರತವೂ ಸೇರಿದಂತೆ ಅಭಿವೃದ್ಧಿಶೀಲ ರಾಷ್ಟ್ರಗಳ ಅಧಿಕೃತ ವಕ್ತಾರರು ಇದು ತಮ್ಮ ಅಭಿವೃದ್ಧಿಯನ್ನು ತಡೆಯುವ ಇನ್ನೊಂದು ಬೆದರಿಕೆಯಾಗಿದೆ ಎಂದಿದ್ದಾರೆ. ಅವರಲ್ಲಿ ಕೆಲವರು ಬಡ ರಾಷ್ಟ್ರಗಳ ಜನತೆಗೆ ಮೊದಲು ಅನ್ನ–ಬಟ್ಟೆ–ವಸತಿ ಮೊದಲಾದ ಮೂಲ ಅಗತ್ಯಗಳು ದೊರೆಯುವಂತಾಗಲಿ; ಆಮೇಲೆ ಬೇಕಾದರೆ ಭೂಮಿಗೆ ಮುಂದೆಂದೋ ಒಂದು ದಿನ ಒದಗಬಹುದಾದ ಅಪಾಯವನ್ನು ತಡೆಯುವತ್ತ ಗಮನ ಹರಿಸೋಣ ಎಂದು ವ್ಯಂಗ್ಯವಾಡಿದ್ದಾರೆ.

ಆದರೆ ನಿಜವಾದ ವ್ಯಂಗ್ಯವೆಂದರೆ ಈ ಸೃಷ್ಟಿಯನ್ನು ಕುರಿತ ಮಾನವ ಕೇಂದ್ರಿತ ದೃಷ್ಟಿ ಎಂದೋ ಬದಲಾಗಿ ಮಾನವ ತನ್ನ ಸುತ್ತಲಿನ ಪರಿಸರದೊಂದಿಗೆ ಸಾವಯವವಾಗಿ ಬದುಕಲು ಕಲಿತರೆ ಮಾತ್ರ ಅವನ ಬದುಕಿನ ಗುಣಮಟ್ಟ ಸುಧಾರಿಸಬಲ್ಲುದೆಂಬ ಸತ್ಯ ಗೊತ್ತಾಗಿರುವ ಕಾಲದಲ್ಲೂ ಕೆಲವರು–ಅದೂ ಜವಾಬ್ದಾರಿಯುತ ಸ್ಥಾನದಲ್ಲಿರುವ ಆಡಳಿತಗಾರರು–ಪರಿಸರದ ಪ್ರಶ್ನೆಯನ್ನು ಜನಪ್ರಿಯ ವಾಗ್ವಿಲಾಸದ, ರಾಜಕಾರಣದ ವಸ್ತುವಾಗಿರಿಸಿಕೊಂಡಿರುವುದು. ಇದಕ್ಕೆ ಮುಖ್ಯ ಕಾರಣ, ಅಭಿವೃದ್ಧಿಶೀಲ ದೇಶಗಳಲ್ಲಿ ಮೂಲ ಅಗತ್ಯಗಳ ಹೆಸರಿನಲ್ಲಿ ನಡೆದಿರುವ ಅಭಿವೃದ್ಧಿ ರಾಜಕಾರಣದ ವರಸೆ. ಈ ದೇಶಗಳ ಜನತೆಗೆ ಪಶ್ಚಿಮದ ದೇಶಗಳ ಜೀವನ ಗುಣಮಟ್ಟದ ಆದರ್ಶವೊಂದನ್ನು ಕಟ್ಟಿಕೊಟ್ಟು, ಅವರಲ್ಲಿ ಎಂದೂ ನೀಗಲಾಗದ ಬಡತನದ ಪರಿಕಲ್ಪನೆಯನ್ನು ಬಿತ್ತಿಬಿಟ್ಟಿರುವುದು.

ಇದು ಅಗತ್ಯಗಳ ನಿರಂತರ ಸೃಷ್ಟಿಯ ರಾಜಕಾರಣ. ಇದನ್ನು ಅಭಿವೃದ್ಧಿಯೆಂದು ಕರೆಯುತ್ತಾ ಅದರ ಸುತ್ತ ರಾಜಕಾರಣ ಮಾಡುವ ಒಂದು ಪಟ್ಟಭದ್ರ ವರ್ಗವೇ ಭಾರತವೂ ಸೇರಿದಂತೆ ಈ ಅಭಿವೃದ್ಧಿಶೀಲ ಎಂದು ಕರೆಯಲಾಗುವ ದೇಶಗಳಲ್ಲಿ ಬಹಳ ವರ್ಷಗಳಿಂದ ನೆಲೆಯೂರಿಬಿಟ್ಟಿದೆ. (ಹಾಗೆ ನೋಡಿದರೆ ಈ ಅಭಿವೃದ್ಧಿಶೀಲ ಎಂಬ ಶಬ್ದವೇ ಈ ಅಭಿವೃದ್ಧಿ ರಾಜಕಾರಣದ ವಹಿವಾಟಿನ ಮೂಲ ನಾಣ್ಯ!) ಈ ಪಟ್ಟಭದ್ರ ವರ್ಗದಲ್ಲಿ ರಾಜಕಾರಣಿಗಳು ಕೇಂದ್ರದಲ್ಲಿದ್ದರೆ ಅವರ ಸುತ್ತ ಕೈಗಾರಿಕೋದ್ಯಮಿಗಳು, ವಿಜ್ಞಾನಿ–ತಂತ್ರಜ್ಞಾನಿಗಳು, ಕೃಷಿ ತಜ್ಞರು, ಅರ್ಥಶಾಸ್ತ್ರಜ್ಞರು ಎಲ್ಲರೂ ಇದ್ದಾರೆ. ಅಭಿವೃದ್ಧಿ ಎನ್ನುವ ಶಬ್ದ ಇಂದು ತನ್ನ ಸಾರ್ವತ್ರಿಕ ಅರ್ಥವನ್ನೆಲ್ಲ ಕಳೆದುಕೊಂಡು ಸಂಪತ್ತಿನ ಒಡೆತನ ಎಂಬ ಸಂಕುಚಿತ ಅರ್ಥಕ್ಕಷ್ಟೇ ಸೀಮಿತವಾಗಿಬಿಟ್ಟಿದೆ. ಇದರಿಂದಾಗಿ ನಾವು ಈ ಎಲ್ಲ ಶಬ್ದಗಳನ್ನು ಯಾವುದಕ್ಕಾಗಿ ಸೃಷ್ಟಿಸಿಕೊಂಡಿದ್ದೇವೋ ಆ ಬದುಕಿನ ಗುಣಮಟ್ಟ ಮತ್ತು ಸಾರ್ಥಕತೆಯ ಕಡೆ ನಮ್ಮ ಗಮನವೇ ಹೋಗದಂತಾಗಿಬಿಟ್ಟಿದೆ.

ಈ ದೇಶದ ಹಸಿದವರ, ದರಿದ್ರರ ಮೂಲ ಅಗತ್ಯಗಳನ್ನು ಪೂರೈಸಲು ಇಂದು ಈ ಅಭಿವೃದ್ಧಿ ನಡೆದಿದೆಯೇ ಎಂಬುದನ್ನು ಯಾರಾದರೂ ನೇರವಾಗಿ ನೋಡಿ ಹೇಳಿದರೆ ಸಾಕು ಈ ಅಭಿವೃದ್ಧಿ ರಾಜಕಾರಣದ ಗುಟ್ಟು ಬಯಲಾಗುವುದು. ಆದರೆ ಹಾಗೆ ನೋಡಿ ಹೇಳಬಲ್ಲವರೆಲ್ಲರೂ ಈ ಅಭಿವೃದ್ಧಿಯ ಫಲದಾಯಿಗಳೇ ಆಗಿರುವುದರಿಂದ ಈ ಗುಟ್ಟು ಬಯಲಾಗಿಲ್ಲ. ಹಾಗಾಗಿಯೇ, ಇತ್ತೀಚಿನ ಪರಿಸರ ವರದಿ ಇಂಗಾಲ ವಿಸರ್ಜನೆಯ ಯೋಜಿತ ನಿಯಂತ್ರಣ ದಾರಿ ತಪ್ಪಿರುವುದರಿಂದ ಸದ್ಯದಲ್ಲೇ ಒದಗಲಿರುವ ವಿಪತ್ತುಗಳಲ್ಲಿ ಭಾರತಕ್ಕೆ ಮುಖ್ಯವಾದ್ದು ಎಂದರೆ ಈ ದೇಶದ ಜನತೆಯ ಆಹಾರ ಭದ್ರತೆಗೆ ಧಕ್ಕೆಯಾಗಲಿದೆ ಎಂದು ಹೇಳುತ್ತಿದ್ದರೂ, ಅತ್ತ ಕಡೆ ಯಾರ ಗಮನವೂ ಇಲ್ಲ. ಬದಲಿಗೆ ಆಹಾರ ಭದ್ರತೆಯ ಕಾನೂನನ್ನು ಪಾಸು ಮಾಡಿಕೊಂಡು ಸಂಭ್ರಮ ಪಡುತ್ತಿದ್ದೇವೆ. ಮೂಲ ಅಗತ್ಯಗಳ ಪೂರೈಕೆಗೆ ಅಭಿವೃದ್ಧಿ ಎನ್ನುತ್ತಾ ಅದು ನಮ್ಮ ಆಹಾರ ಭದ್ರತೆಗೇ ಧಕ್ಕೆ ತರುತ್ತಿದೆ ಎಂದರೂ ನಮಗೆ ಎಚ್ಚರವಿಲ್ಲ. ಹಾಗೇ ೨೦೧೨ರಲ್ಲಿ ವಾಯು ಮಾಲಿನ್ಯವೊಂದರಿಂದಲೇ ಜಗತ್ತಿನಲ್ಲಿ ೭೦ ಲಕ್ಷ ಜನ ಸತ್ತಿದ್ದು ಇದರಲ್ಲಿ ಬಹುಪಾಲು ಏಷ್ಯಾದ ಜನರು ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳುತ್ತಿದ್ದರೂ ನಮ್ಮ ಅಭಿವೃದ್ಧಿಯ ಹಪಾಹಪಿ ಮತ್ತು ಅದರ ಜನಪ್ರಿಯ ರಾಜಕಾರಣಕ್ಕೆ ಕಡಿವಾಣ ಹಾಕಲು ನಾವು ಸಿದ್ಧರಿಲ್ಲ. ಈ ದೇಶಕ್ಕೆ ಮೋದಿ ಕನಸು ಬಿದ್ದಿರುವುದರ ರಹಸ್ಯ ಬಹುಶಃ ಇದೇ ಇರಬಹುದು!.



ಈ ಹಿನ್ನೆಲೆಯಲ್ಲಿ, ದೇಶಾದ್ಯಂತ ಇಂದು ಹಬ್ಬಿರುವ ರಾಜಕಾರಣದ ದಟ್ಟ ರೋಚಕ ವಾತಾವರಣದ ನಡುವೆಯೂ ಪತ್ರಿಕೆ ಈ ಸಂಚಿಕೆಯಲ್ಲಿ ಪರಿಸರದ ಪ್ರಶ್ನೆಯ ಬಗ್ಗೆ ಚರ್ಚೆ ನಡೆಸಿದೆ. ಅದರ ಕೆಲವು ಮೂಲ ಸಂಗತಿಗಳನ್ನು ಮತ್ತು ಅದರ ಅನ್ವಯದ ಸಾಧ್ಯತೆಗಳನ್ನೂ ಅನುಕ್ರಮವಾಗಿ ಇಲ್ಲಿನ ಎರಡು ಲೇಖನಗಳಲ್ಲಿ ಪ್ರಸ್ತುತಪಡಿಸಿದೆ.–ಸಂ

# ಹವಾಮಾನ ಬದಲಾವಣೆಯ ವರದಿ: ಒಂದು ವಿಶ್ಲೇಷಣೆ

**–ಡಾ. ಟಿ.ಎಸ್. ಚನ್ನೇಶ್**



**ಅ**ಭಿವೃದ್ಧಿಯ ಚಟುವಟಿಕೆಗಳು ಉಂಟುಮಾಡುವ ಪರಿಸರದ ಸಮಸ್ಯೆಗಳನ್ನು ಸಾರ್ವಜನಿಕವಾಗಿ ಚರ್ಚೆಗೆ ತಂದ ಕೀರ್ತಿ ರಾಚೆಲ್ ಕಾರ್‌ಸನ್ ಎಂಬ ಹೆಣ್ಣುಮಗಳಿಗೆ ಸೇರುತ್ತದೆ. ೧೯೫೦ರ ದಶಕದಲ್ಲೇ ಕೃಷಿಯಲ್ಲಿ ಬಳಸುವ ಕೀಟನಾಶಕಗಳಿಂದಾಗುವ ಆಹಾರದ ಮಲಿನತೆಯನ್ನು ಸಂಶೋಧನೆಗಳಿಂದ ಸಾಬೀತು ಮಾಡಿ ತನ್ನ 'ನೀರವ ವಸಂತ (ಸೈಲೆಂಟ್ ಸ್ಪ್ರಿಂಗ್)' ಎಂಬ ಪುಸ್ತಕದ ಪ್ರಕಟಣೆಯ ಮೂಲಕ ೧೯೬೨ರಲ್ಲಿ ಮೊದಲ ಬಾರಿಗೆ ಮಾನವರ ಎದೆ ಹಾಲಿನಲ್ಲೂ ಡಿ.ಡಿ.ಟಿ. ಸೇರಿರುವ ಕುರಿತು ಬರೆದರು. ವಿಷವು ಮನುಷ್ಯ ದೇಹದ ಸೇರಿಕೆಗೆ ಮಲಿನಗೊಂಡ ಪರಿಸರದಲ್ಲಿನ ಆಹಾರ ಉತ್ಪಾದನೆಯೇ ಕಾರಣವೆಂಬ ವಾದವನ್ನು ೧೯೬೦ರ ದಶಕದ ಮೊದಲಲ್ಲೇ ಅವರು ಪ್ರತಿಪಾದಿಸಿದರು. ಕೂಡಲೇ, ಆಗ ಡಿ.ಡಿ.ಟಿ. ತಯಾರಿಸುವ ಡ್ಯುಪಾಂಟ್ ಕಂಪನಿಯು ತಗಾದೆ ತೆಗೆಯಿತು. ಅದೇ ರೀತಿ ಇತರೇ ರಸಾಯನಿಕ ಕಂಪನಿಗಳೂ ಆಕೆಯ ಮತ್ತು ಅಂತಹ ಸಂಶೋಧನೆ, ಅಧ್ಯಯನಗಳ ವಿರುದ್ಧ ದನಿ ಎತ್ತಿದವು. ಅಂದಿನಿಂದ ಇಂದಿನವರೆಗೂ ಸಣ್ಣಪುಟ್ಟ ಪರಿಹಾರಗಳ ಹೊರತಾಗಿ ಕೈಗಾರಿಕೆಗಳ

ಉತ್ಪಾದನಾ ಪ್ರಪಂಚ ಪರಿಸರದ ಹತೋಟಿಯನ್ನು ತನ್ನ ತೆಕ್ಕೆಯಲ್ಲಿಟ್ಟು ಪೋಷಿಸುತ್ತಿದೆ. ಪರಿಸರ ಪ್ರಜ್ಞೆಯ ಬಗೆಗೆ ಹಲವಾರು ನೆಲೆಗಳಿಂದ, ನಿರ್ದಿಷ್ಟವಾಗಿ ವಾತಾವರಣದ ಬಗೆಗೆ ಕಳೆದ ಕೆಲವು ವರ್ಷಗಳಿಂದ ಹಲವಾರು ಚರ್ಚೆಗಳು ನಡೆದು ವಿಚಾರಗಳು ವಿನಿಮಯವಾಗಿವೆ. ಆದರೆ ನಮ್ಮ ಪರಿಸರ ಪರಿಸ್ಥಿತಿ ಮಾತ್ರ ದಿನೇ ದಿನೇ ಅಧೋಗತಿಯತ್ತ ಸಾಗುತ್ತಿದೆ. ಪರಿಸರದ ಪ್ರಜ್ಞೆಯ ವಿಕಾಸಕ್ಕೆ ನಾಲ್ಕು ದಶಕಗಳಿಗೂ ಮಿಕ್ಕಿ ಇತಿಹಾಸವಿದ್ದರೂ, ವಾಸ್ತವ ಸಂಗತಿ ಮಾತ್ರ ಅಷ್ಟು ಆಶಾದಾಯಕವಾಗಿಲ್ಲ.

### ಪರಿಸರ ಅಧ್ಯಯನ ಸಮ್ಮೇಳನಗಳು: ಭೂ ಶೃಂಗ ಸಭೆ

: ಈ ಅವಧಿಯಲ್ಲಿ ಪರಿಸರ ಮತ್ತು ಮನುಷ್ಯ ಬಾಳುವೆಯ ಉತ್ತಮಿಕೆಯ ಪ್ರಯತ್ನವೆಂದು ಹೇಳಲಾಗುವ ಅಭಿವೃದ್ಧಿ ನಡುವಣ ಸಂಬಂಧಗಳ ಬಗೆಗೆ ಅಧ್ಯಯನಗಳೂ, ಸಂಶೋಧನೆಗಳೂ ಆರಂಭವಾದವು. ಪರಿಸರ ಮತ್ತು ಅಭಿವೃದ್ಧಿ ಸದಾ ವೈರುಧ್ಯದ ನೆಲೆಯಲ್ಲೇ ಸಾಗುವುದನ್ನು ಇವು ದಾಖಲು ಮಾಡಿದವು. ಅಭಿವೃದ್ಧಿ ಮತ್ತು ಪರಿಸರದ ಚರ್ಚೆಯು ೧೯೭೨ರಷ್ಟು ಹಿಂದೆಯೇ ಸ್ಟಾಕ್‌ಹೋಂ ಸಮ್ಮೇಳನಕ್ಕೆ ಕಾರಣವಾಯಿತು. ಅಲ್ಲಿಂದ ನಿರಂತರವಾಗಿ ಅನೇಕ ಅಂತಾರಾಷ್ಟ್ರೀಯ ಸಮ್ಮೇಳನಗಳು ಪರಿಸರದ ರಕ್ಷಣೆಗಾಗಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆಗಳನ್ನು ಅಧ್ಯಯನದ ಆಧಾರದ ಮೇಲೆ ರೂಪಿಸುತ್ತಲೇ ಇವೆ.

ಆದರೆ, ೧೯೮೨ರಲ್ಲಿ 'ಅರ್ಥ್ ಸಮಿಟ್' (ಭೂ ಶೃಂಗ ಸಭೆ)ನೊಂದಿಗೆ ಆರಂಭವಾದ ಚರ್ಚೆಗಳು ತನ್ನ ಅಧ್ಯಯನದ ನೆಲೆಗಳು ಮತ್ತು ಉದ್ದೇಶಗಳಲ್ಲಿ ಕೆಲವು ಬದಲಾವಣೆಗಳನ್ನು ಅಳವಡಿಸಿಕೊಂಡು ಆಧುನಿಕ ಜೀವನ ಪದ್ಧತಿಯಿಂದಾಗಿ ಮುಖ್ಯವಾಗಿ ಭೂಮಿ ಮತ್ತು ಅದನ್ನು ಹೊಂದಿಕೊಂಡಿರುವ ಜೀವಪರಿಸರದ ಮೇಲಾಗುವ ಪರಿಣಾಮಗಳ ಬಗೆಗೆ ಆಲೋಚಿಸುವ ಚಿಂತನೆಗಳಿಗೆ ಕಾರಣಗಳಾದವು. ೧೯೮೮ರಲ್ಲಿ ಹವಾಮಾನ ಬದಲಾವಣೆ ಕುರಿತ ಅಂತರ್‌ಸರ್ಕಾರೀಯ ಸಮಿತಿಯನ್ನು (ಇಂಟರ್‌ಗೌರ್ನಮೆಂಟಲ್ ಪ್ಯಾನಲ್ ಫಾರ್ ಕ್ಲೈಮೇಟ್ ಚೇಂಜ್– IPCC) ಹುಟ್ಟು ಹಾಕಲಾಯಿತು. ಈ ಸಮಿತಿಯ ೩೯ನೇ ಅಧಿವೇಶನ ಇತ್ತೀಚೆಗೆ ತಾನೇ, ಅಂದರೆ ೨೦೧೪ರ ಏಪ್ರಿಲ್ ೭ರಿಂದ ೧೨ರವರೆಗೆ ಜರ್ಮನಿಯ ಬರ್ಲಿನ್‌ನಲ್ಲಿ ನಡೆಯಿತು. ಕಳೆದ ೩೮ ಅಧಿವೇಶನಗಳ ನಿರ್ಧಾರಗಳ ಅನುಷ್ಠಾನಗಳನ್ನೂ ಗಮನದಲ್ಲಿಟ್ಟುಕೊಂಡು ಚರ್ಚೆ ನಡೆದು, ವರದಿ ಇದೀಗ ಬಿಡುಗಡೆಯಾಗಿ ಬಿಸಿ ಬಿಸಿ ಚರ್ಚೆಗೆ ಕಾರಣವಾಗಿದೆ. ಈ ವರದಿ ಜಾಗತಿಕ ಮತ್ತು ಸ್ಥಳಿಯ ವಿಷಯಗಳಿಗೆ ಸಂಬಂಧಿಸಿದಂತೆ ನೀಡಿರುವ ಮಾಹಿತಿ ಮತ್ತು ಎಚ್ಚರಿಕೆಗಳನ್ನು ವಿಶ್ಲೇಶಿಸುವ ಮುನ್ನ ಇವನ್ನು ಅರ್ಥ ಮಾಡಿಕೊಳ್ಳಲು ಅಗತ್ಯವಾದ ಒಂದು ಹಿನ್ನೆಲೆಯ ಕಡೆ ನೋಡೋಣ.

### ಕರ್ನಾಟಕದಲ್ಲಿ ಪರಿಸರ ಚರ್ಚೆಗಳು :

ಕರ್ನಾಟಕದ ಸಂದರ್ಭದಲ್ಲಿ ಪರಿಸರದ ಚರ್ಚೆಗಳೆಂದರೆ ಪಶ್ಚಿಮ ಘಟ್ಟ ಉಳಿಸಿ ಹೋರಾಟ, ತುಂಗಭದ್ರಾ ಮಾಲಿನ್ಯ ವಿರುದ್ಧದ ದನಿಗಳು, ತುಂಗಾ ಮೂಲ ಉಳಿಸಿ, ಹೇಮಾವತಿ ಮೇಲ್ದಂಡೆ ಕಾಮಗಾರಿಯ ಪರಿಣಾಮಗಳ ಬಗೆಗಿನ ಹೋರಾಟ, ಇತ್ಯಾದಿಗಳು ಗಮನಾರ್ಹವಾದವು. ಇವೆಲ್ಲಾ ಆಯಾ ಕಾಲದಲ್ಲಿ ಒಂದಷ್ಟು ಪರಿಸರ ಪ್ರೀತಿಯನ್ನು ಪಸರಿಸುವ, ಬೆಳೆಸುವ ಕೆಲಸ ಮಾಡಿದವು. ಅದಕ್ಕೆ ಬೇಕಾದಂತಹ ಸಾಹಿತ್ಯದ ಸೃಷ್ಟಿಯೂ ಆಯಿತು. ಶೈಕ್ಷಣಿಕವಾಗಿ ಪರಿಸರ ಅಧ್ಯಯನವು ವಿಶ್ವವಿದ್ಯಾಲಯವನ್ನು ಪ್ರವೇಶಿಸಿತು. ಕೃಷಿ ಪರಿಸರದ ಬಗೆಗೆ ಒಲವು ಮೂಡಿ ಸಾವಯವ ರೈತರು ಅಲ್ಲಲ್ಲಿ ಸುದ್ದಿ ಮಾಡಿದರು. ಕೀಟನಾಶಕಗಳ ಹಾಗೂ ಕೃಷಿಜೀವಿ ಪರಿಸರವನ್ನು ಕಂಗೆಡಿಸುವ ಸಂಗತಿಗಳ ವಿರುದ್ಧ ದನಿಗಳು ಎದ್ದವು. ಶಿವರಾಮ ಕಾರಂತರಂತೂ ಪರಿಸರ ಪ್ರಜ್ಞೆಯ ಬಗೆಗೆ ಅತ್ಯಂತ ಕ್ರಿಯಾಶೀಲರಾಗಿ, ಅದನ್ನೇ ಮುಂದಿಟ್ಟುಕೊಂಡು ಕೆನರಾ ಕ್ಷೇತ್ರದಿಂದ ಲೋಕಸಭೆಗೂ ಸ್ಪರ್ಧಿಸಿದ್ದರು.

ಆದರೆ ಇದೆಲ್ಲ ಈಗ ಚಿಕ್ಕಬಳ್ಳಾಪುರ ಲೋಕಸಭಾ ಚುನಾವಣಾ ಸಭೆಗಳಲ್ಲಿ ನದಿ ಜೋಡಣೆಯಂತಹ ಅನಾಹುತಕಾರಿ ಸಂಗತಿಗಳನ್ನು ಸ್ವಾಗತಿಸುವಂತಹ ವಿಚಾರಕ್ಕೆ ಬಂದು ನಿಂತಿದೆ! ಹಲವು ಜಿಲ್ಲೆಗಳಾಚೆಯ ಎತ್ತಿನಹೊಳೆಯ ನೀರನ್ನು ಇಲ್ಲಿನ ಒಣನೆಲಕ್ಕೆ ತರುವ ಬಗ್ಗೆ, ಅದಕ್ಕೆ ಸಂಬಂಧಿಸಿದ ಕಾಮಗಾರಿಗಳ ಬಗ್ಗೆ ಚರ್ಚೆ ನಡೆದಿದೆ. ಆದರೆ ಈಗಾಗಲೇ ಅಲ್ಲಿ ಆಗಿರುವ ಅಂತರ್ಜಲ ನಷ್ಟ ಮತ್ತು ಬೆಂಗಳೂರಿನ ಅಭಿವೃದ್ಧಿಗೆ ಅಲ್ಲಿಂದ ಮರಳು ಮಾರಿದ ದಂಧೆಯ ಬಗ್ಗೆ ಯಾವುದೇ ಮಾತುಗಳು ಕೇಳಿಬರುತ್ತಿಲ್ಲ.

ಆದರೆ ಪಕ್ಕದ ರಾಜ್ಯ ಕೇರಳದತ್ತ ನೋಡಿ. ಅಲ್ಲಿ 'ಸೈಲೆಂಟ್ ವ್ಯಾಲಿ' ಯೋಜನೆಯನ್ನು ಸಂಪೂರ್ಣ ನಿಲ್ಲಿಸುವಷ್ಟು ಕೆಲಸಗಳಾದವು. ನಮ್ಮಲ್ಲಿ ಶಿಕ್ಷಣಕ್ಕೆ ಅಳವಡಿಸಲ್ಪಟ್ಟ ಪರಿಸರ ಚಿಂತನೆಗಳು, ವಿಶ್ವವಿದ್ಯಾಲಯಗಳಿಂದ ಸಾರ್ವಜನಿಕವಾಗಿ ಚರ್ಚೆಗೆ ಹೊರ ಬಂದದ್ದು ಇಲ್ಲವೇ ಇಲ್ಲವೆನ್ನಿಸುವಷ್ಟು ಕಡಿಮೆ. ಕೃಷಿ ವಿಶ್ವವಿದ್ಯಾಲಯಗಳನ್ನೂ ಸೇರಿಸಿಕೊಂಡು ಇತರೆ ವಿಶ್ವವಿದ್ಯಾಲಯಗಳೂ, ಪರಿಸರ ಇಂಜನಿಯರಿಂಗ್ ಇಲಾಖೆಗಳೂ ಪರಿಸರ ಕುರಿತ ಸಾರ್ವಜನಿಕ ಚರ್ಚೆಗೆ ಯಾವ ಕೊಡುಗೆಯನ್ನೂ ಸಲ್ಲಿಸಲಿಲ್ಲ. ಇವೆಲ್ಲಾ ಸೇರಿ ಮಾಡಿದ್ದೆಂದರೆ, ಪರಿಸರ ಮಾಲಿನ್ಯ ಮಂಡಳಿ, ಜೀವಿ ಪರಿಸರ ಇಲಾಖೆಗಳಂತಹ ಸರ್ಕಾರಿ ಸಂಸ್ಥೆಗಳನ್ನು ಹುಟ್ಟು ಹಾಕಿದ್ದು. ಈಗ ಇವು ಅಭಿವೃದ್ಧಿ ಎಂಬ ಕಾಮಗಾರಿಗಳಿಗೆ ಒಪ್ಪಿಗೆ ಕೊಡುವ ಕೆಲಸವನ್ನಷ್ಟೇ ಮಾಡುತ್ತಿವೆ. ಅದಕ್ಕಷ್ಟು ಮಧ್ಯವರ್ತಿಗಳು 'ಕನ್ಸಲ್ಟೆಂಟ್'ಗಳ ಹೆಸರಿನಲ್ಲಿ ಹುಟ್ಟಿಕೊಂಡಿದ್ದಾರೆ. ಇವರು 'ಪರಿಸರ ಪ್ರಭಾವದ ವಿಶ್ಲೇಷಣೆಗಳು' ಎನ್ನುವ ವರದಿ ತಯಾರಿಸಿ ಕೊಡುವ ಮಧ್ಯವರ್ತಿಗಳೂ ಆಗಿ ಮಂಡಳಿ ಮತ್ತು ಉದ್ಯಮಗಳ ನಡುವಣ ವ್ಯಾವಹಾರಿಕ ಕೊಂಡಿಗಳಾಗಿ ಉಳಿದಿದ್ದಾರೆ. ವಿಶ್ವವಿದ್ಯಾಲಯದ ಮತ್ತು ಇತರೆ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳು 'ಸಂಶೋಧನಾ ಲೇಖನ' ಎಂಬ ಹೆಸರಿನಲ್ಲಿ ಚರ್ವಿತಚರ್ವಣವನ್ನು ಬರೆದು ಬಡ್ತಿ ಗಿಟ್ಟಿಸುತ್ತಿದ್ದಾರೆ.

### ಇಂಧನ ಬಳಕೆಯ ಸುತ್ತಮುತ್ತ

ಕೆಲದಿನಗಳ ಹಿಂದೆ IPCC ವೇದಿಕೆಯಲ್ಲಿ ಅಭಿವೃದ್ಧಿ ಚಟುವಟಿಕೆಗಳಿಂದ ಅಂದರೆ ಮುಖ್ಯವಾಗಿ ಇಂಧನ ಉರಿಯುವಿಕೆಯಿಂದ ಪರಿಸರದ ಮೇಲಾಗುವ ಪರಿಣಾಮಗಳ ರ‍್ಯಾಂಕ್ ಪಟ್ಟಿಯೊಂದು ಚರ್ಚೆಯಲ್ಲಿತ್ತು. ವಿವಿಧ ಪರಿಣಾಮಗಳ ಗಂಭೀರತೆಯ ಆಧಾರದ ಮೇಲೆ ಅದನ್ನು ಸಿದ್ಧಪಡಿಸಲಾಗಿತ್ತು. ಅನುಕ್ರಮವಾಗಿ ಅವು ಸಾರ್ವಜನಿಕ ಆರೋಗ್ಯ, ವಿನಾಶದ ಅಂಚಿನ ಜೀವಿ ಸಂಕುಲ, ದೀರ್ಘಕಾಲಿಕ ರೋಗ, ಸಮೂಹ ಬಳಕೆದಾರಿಕೆ, ಕಾಡಿನ ನಾಶ, ನೆಲ, ನೀರು ಮತ್ತು ಗಾಳಿಯ ಮಲಿನತೆ, ಕೃಷಿಯ ಸಮಸ್ಯೆಗಳು, ತ್ಯಾಜ್ಯಗಳ ನಿರ್ವಹಣೆ, ಶಕ್ತಿಯ ಉತ್ಪಾದನೆ ಮತ್ತು ಹವಾಮಾನದ ಬದಲಾವಣೆ ಎಂದು ಗುರುತಿಸಲಾಗಿದೆ. ಇವೆಲ್ಲದರ ಪೈಕಿ ಅತ್ಯಂತ ನಿರ್ಣಾಯಕವಾದ ಸಂಗತಿ ಹವಾಮಾನ ಬದಲಾವಣೆಯಾಗಿದ್ದು, ಅದರ ಆಚೀಚೆಯೇ ಇತರೆ ಸಂಗತಿಗಳ ಪ್ರಭಾವಗಳ ಬಗೆಗೆ ಆಲೋಚಿಸಬಹುದಾಗಿದೆ. ಏಕೆಂದರೆ ಇವೆಲ್ಲವೂ ಒಂದಕ್ಕೊಂದು ಸಂಬಂಧವುಳ್ಳ ಅಥವಾ ಒಂದರಿಂದ ಮತ್ತೊಂದು ಪ್ರಭಾವಿತವಾಗಿರುವ ಪರಿಣಾಮಗಳೇ ಆಗಿವೆ.

### ಕರ್ನಾಟಕದಲ್ಲಿ ಹವಾಮಾನ ವೈಪರೀತ್ಯಗಳು:

ಉದಾಹರಣೆಗೆ ನಮ್ಮ ರಾಯಚೂರು, ಬಳ್ಳಾರಿ ಮತ್ತು ಗುಲ್ಬರ್ಗ ಜಿಲ್ಲೆಗಳ ಪರಿಸ್ಥಿತಿಯನ್ನೇ ನೋಡಿ. ಇಲ್ಲಿನ ಬಿಸಿಲಿನ ರೌದ್ರತೆಗೆ ಉದಾಹರಣೆಗಳನ್ನು ಕೊಡಲೇಬೇಕಿಲ್ಲ. ಆದರೆ ಅಲ್ಲಿಯೇ ಇತ್ತೀಚೆಗೆ ಮಹಾ ಮಳೆಯೂ ಆಗಾಗ್ಗೆ ದಾಖಲಾಗುತ್ತಿದೆ! ಇದರಿಂದ ರೈತರಿಗೆ ಇದೆಂತಹ ಕಾಲ ಬಂತಪ್ಪಾ! ಬಿಸಿಲಿನ ಝಳಕ್ಕೆ ಸೋಲುತ್ತಿದ್ದ ನಮಗೆ ಮಳೆಯ ಕಾರಣದಿಂದಲೂ ಭೀತಿ ಕಾಡುವಂತಾಯಿತೇ? ಎನ್ನಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಮಹಾಮಳೆಯೆಂದರೆ ಅದೆಷ್ಟು? ೨೦೦೯ರ ಸೆಪ್ಟೆಂಬರ್ ೨೯ರಿಂದ ಅಕ್ಟೋಬರ್ ೩ರೊಳಗೆ ಕೇವಲ ಒಂದು ವಾರಕ್ಕಿಂತಲೂ ಕಡಿಮೆ ಅವಧಿಯಲ್ಲಿ ವರ್ಷದ ಮುಕ್ಕಾಲು ಪಾಲು ಮಳೆಯಾಗಿದೆ. ಕೇವಲ ಐದು ದಿನಗಳಲ್ಲಿ ಬಿದ್ದ ಮಳೆಯು ಹತ್ತಾರು ವರ್ಷಗಳ ಗಳಿಕೆಯನ್ನೂ ಕೊಚ್ಚಿ ಹಾಕಿದೆ. ಮಾತ್ರವಲ್ಲ, ಆ ಮಳೆಯು ಸಾಮಾನ್ಯವಾಗಿ ಬೀಳುವ ಮಳೆಗಿಂತಲೂ ೨–೩ಪಟ್ಟು ಕೆಲವೆಡೆ ಐದಾರು ಪಟ್ಟು ಮತ್ತೂ



ಕೆಲವಡೆ ಹೆಚ್ಚೂ ಕಡಿಮೆ ೮ ಪಟ್ಟು ಮಳೆಯಾಗಿದೆ. ಕಳೆದ ವರ್ಷವೂ ಗುಲ್ಬರ್ಗಾ, ಯಾದಗೀರ್, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಸೆಪ್ಟೆಂಬರ್ ತಿಂಗಳ ಎರಡನೇ ವಾರದಲ್ಲಿ ಬಿದ್ದ ಮಳೆಯಿಂದ ಭಯಾನಕ ಪರಿಸ್ಥಿತಿ ನಿರ್ಮಾಣವಾಗಿತ್ತು. ಇಲ್ಲಿನ ಮಹಾಮಳೆಯ ರೌದ್ರತೆ ಎಷ್ಟೆಂದರೆ ಕೆಲವೆಡೆ ಒಂದೇ ಗಂಟೆಯಲ್ಲಿ ೧೦೦ ಮಿ. ಮೀ. ಗೂ ಹೆಚ್ಚು ಮಳೆಯಾದ ದಾಖಲೆಗಳಿವೆ. ಇದು ಒಂದು ಉದಾಹರಣೆಯಷ್ಟೆ. ನಮ್ಮ ಭೂಮಿಯ ಋತು ಚಕ್ರ ಅಸ್ತವ್ಯಸ್ತವಾಗಿದೆ. ಏಕೆ?

ಇದೆಲ್ಲಾ ವಾತಾವರಣದ ತಾಪಮಾನ ಹೆಚ್ಚುತ್ತಿರುವ ಕಾರಣದಿಂದ ಎಂದು ಅಧ್ಯಯನಗಳು ಹೇಳುತ್ತಿವೆ. ಉಷ್ಣತೆಯು ಹೆಚ್ಚಾಗಲು ವಾತಾವರಣಕ್ಕೆ ಇಂಗಾಲದ ಡೈಆಕ್ಸೈಡ್, ಮೀಥೇನ್ ಸೇರಿಕೆ ಎಂದು ವಾದಿಸಲಾಗುತ್ತಿದೆ.ಇದಕ್ಕೆ ಒಂದು ಉದಾಹರಣೆ ಕೊಡುವುದಾದರೆ, ಜಗತ್ತಿನಲ್ಲಿ ಪ್ರತೀ ವರ್ಷ ಉತ್ಪಾದನೆಯಾಗುತ್ತಿರುವ ಕಾರುಗಳ ಸಂಖ್ಯೆ ಎಂಟು ಕೋಟಿ ಮುವತ್ತು ಲಕ್ಷ. ೨೦೧೭ರ ಹೊತ್ತಿಗೆ ಹತ್ತು ಕೋಟಿ ತಲುಪಲಿದೆ. ಪ್ರತೀ ಕಾರೂ ೧೫ ವರ್ಷವಾದರೂ ಓಡುತ್ತದೆ. ಅಷ್ಟೂ ಸೇರಿ ವಾತಾವರಣಕ್ಕೆ ಮೀಥೆನು, ಇಂಗಾಲ ಡೈಆಕ್ಸೈಡ್, ಸೇರಿಸುತ್ತಲೇ ಇರುತ್ತವೆ. ಪಾಶ್ಚಾತ್ಯ ಕಂಪನಿಗಳ ಲಾಭಕ್ಕೆ ಇಲ್ಲಿನ ಕಾರು ಸಾಲ ಸುಲಭವಾಗುವಂತಹ ಬ್ಯಾಂಕಿಂಗ್ ನೀತಿಗಳು ವಿಕಾಸವಾಗುತ್ತವೆ. ಇಷ್ಟೆಲ್ಲಾ ಒತ್ತಡಗಳ ಜೊತೆಗೆ, ನಮ್ಮ ದೇಶಗಳಂತಹ ದೇಶಗಳ ಮೇಲೆ ದನಗಳಿಂದ, ಗದ್ದೆಗಳಿಂದ ಮೀಥೇನು ಸೇರುತ್ತಿರುವ ಬಗೆಗೆ ಅಭಿವೃದ್ಧಿ ಹೊಂದಿದ ದೇಶಗಳು ಆರೋಪ ಮಾಡುತ್ತಲೆ ಇವೆ. ಇವನ್ನು ಪಾಕಿಸ್ತಾನ, ಬಾಂಗ್ಲಾ ಬರ್ಮಾ ಮತ್ತು ನಮ್ಮಂತಹ ದೇಶಗಳು ಸಹಿಸಿಕೊಳ್ಳಬೇಕಾಗುತ್ತದೆ.

## ಆಹಾರ ಉತ್ಪಾದನೆ ಮತ್ತು ಭದ್ರತೆಯ ಬಿಕ್ಕಟ್ಟು:

IPCCಯ ಕಾಳಜಿಯು ಜಗತ್ತಿನ ಒಟ್ಟಾರೆ ವಾತಾವರಣಕ್ಕೆ ಇಂಗಾಲದ ಡೈಆಕ್ಸೈಡ್‌ನ ಸೂಸುವಿಕೆಯ ಪ್ರಮಾಣವನ್ನು ಈಗಿರುವ ೦.೦೪% ನಿಂದ ೦.೦೩೫%ಗೆ ಇಳಿಸುವುದೇ ಆಗಿದೆ. ಆದರೆ, ಇದರಿಂದ ದಿನೇ ದಿನೇ ಏರುತ್ತಿರುವ ಜನಸಂಖ್ಯೆಯ ಆಹಾರದ ಉತ್ಪಾದನೆ ಮತ್ತು ಸರಬರಾಜಿನ ವ್ಯವಸ್ಥೆಯ ಮೇಲೆ ಮಹತ್ತರ ಪರಿಣಾಮ ಉಂಟಾಗುತ್ತದೆ. ಹಾಗಾಗಿ ಭಾರತದಂತಹ ಅಭಿವೃದ್ಧಿಶೀಲ ದೇಶಗಳು ಪರಿಸರ ಸಂರಕ್ಷಣೆಯಲ್ಲಿ ಅಭಿವೃದ್ಧಿಗೊಂಡ ದೇಶಗಳು ಹೆಚ್ಚಿನ ಪಾತ್ರ ವಹಿಸಬೇಕೆಂದೂ ತಮ್ಮ ಮೇಲೆ ಹೆಚ್ಚಿನ ಒತ್ತಡ ಹೇರಬಾರದೆಂದೂ ಆಗ್ರಹಿಸುತ್ತಿವೆ. ಈ ಹಿನ್ನೆಲೆಯಲ್ಲಿ IPCCಯ ವರದಿ ಭಾರತದ ಬಗ್ಗೆ ನಿರ್ದಿಷ್ಟವಾಗಿ ಕರ್ನಾಟಕವು ಗಮನಿಸಬೇಕಾದ ವಿಷಯಗಳ ಬಗ್ಗೆ ಏನು ಹೇಳಿದೆ ನೋಡೋಣ.

ಕೃಷಿಯು ನೆಲ, ನೀರು ಮತ್ತು ಬಿಸಿಲನ್ನೇ ನೆಚ್ಚಿ ಮಾಡುವ ವೃತ್ತಿ. ಇವುಗಳಲ್ಲೇ ವ್ಯತ್ಯಯಗಳುಂಟಾದರೆ ಇಡೀ ಕೃಷಿಯು ಬಳಲುವುದು ಸತ್ಯ. ನಮ್ಮಲ್ಲಂತೂ ಬಹು ಮುಖ್ಯವಾದ ಆಹಾರದ ಬೆಳೆಗಳ ಮೇಲೆ ಹವಾಮಾನದ ಪ್ರತಿಕೂಲ ಪರಿಣಾಮಗಳೇ ಅಧಿಕವಾಗಲಿವೆ. ಅದರಲ್ಲೂ ಏಕದಳ ಧಾನ್ಯಗಳ ಮೇಲೆ ಇದರ ಪ್ರಭಾವ ಇನ್ನೂ ಹೆಚ್ಚು. ಮೆಕ್ಕೆ ಜೋಳ, ಜೋಳ, ಗೋಧಿ ಹೆಚ್ಚು ತೊಂದರೆಯನ್ನು ಅನುಭವಿಸಲಿವೆ. ಕರ್ನಾಟಕದಲ್ಲು ಮೆಕ್ಕೆ ಜೋಳವು ಮೊದಲಿಗಿಂತಲೂ ಹೆಚ್ಚು ಹೆಚ್ಚು ಜನಪ್ರಿಯ ಬೆಳೆಯಾಗುತ್ತಿದ್ದು, ರೈತರೂ ಈ ಬೆಳೆಯನ್ನು ಮಳೆ ಆಶ್ರಿತ ಕೃಷಿಯಲ್ಲಿ ಹೆಚ್ಚಾಗಿ ನಂಬಿಕೊಂಡಿದ್ದಾರೆ. ಜತೆಗೆ ಗೋಧಿಯು ದೇಶದ ಉತ್ತರ ಭಾಗದಲ್ಲಿ ಪ್ರಮುಖ ಆಹಾರದ ಬೆಳೆ. ಇವೆರಡೂ ಹವಾಮಾನದ ಬದಲಾವಣೆಗೆ ಹೆಚ್ಚು ನಲುಗಲಿವೆ ಎಂದು IPCC ಅಂದಾಜಿಸಿದೆ. ಇದರಿಂದ ಆಹಾರದ ಬೆಲೆಯೂ ಹೆಚ್ಚಿ, ಗ್ರಾಹಕನೂ ತೊಂದರೆಗೆ ಒಳಗಾಗಲಿದ್ದಾನೆ. ಹಾಗಾಗಿ ಹವಾಮಾನ ಬದಲಾವಣೆಯು ಸಾಮಾನ್ಯರ ಆಹಾರ ಭದ್ರತೆಯ ಮೇಲೆ ಹೆಚ್ಚು ಗಂಭೀರ ಪರಿಣಾಮವನ್ನು ಬೀರಲಿದೆ ಎನ್ನುತ್ತದೆ IPCC ವರದಿ.



ಆದರೂ ಈ ಹವಾಮಾನ ಬದಲಾವಣೆಯು ಮತ್ತಷ್ಟು ವೈಜ್ಞಾನಿಕವಾಗಿ ಪರೀಕ್ಷೆಗೆ ಒಳಗಾಗಬೇಕು ಎಂದೇ ಅನೇಕ ವಿಜ್ಞಾನಿಗಳ ಅನಿಸಿಕೆ!

ಸಾಮಾನ್ಯವಾಗಿ ಬೆಳೆಯ ಹಂಗಾಮಿನಲ್ಲಿ ಉಷ್ಣತೆಯು ೩೦°ಸೆ. ಇರುವ ಸಾಧ್ಯತೆಯು ಹೆಚ್ಚಾದುದರಿಂದ ಬೆಳೆಗಳು ಉತ್ತಮ ನಿರೀಕ್ಷಿತ ಇಳುವರಿಯನ್ನು ಕೊಡಲಾರವು ಎನ್ನುತ್ತವೆ IPCC ಅಧ್ಯಯನಗಳು. ಇದರ ಜತೆಗೆ ಮಣ್ಣಿನ ತೇವಾಂಶವು ಕಡಿಮೆಯಾಗಿ ನಿರೀಕ್ಷಿತ ಇಳುವರಿಗೆ ಸಮಸ್ಯೆಯಾಗಲಿದೆ. ಅದರ ಜತೆಗೆ ವಾತಾವರಣದಲ್ಲಿ ಹೆಚ್ಚಾದ ತಾಪಮಾನ, ಇಂಗಾಲದ ಡೈಆಕ್ಸೈಡ್ ಇರುವುದರಿಂದ ಇವು ಬೆಳೆಗಳನ್ನು ಹಿಂದಿಕ್ಕಿ ಬೆಳೆವ ಕಳೆಗಳಿಗೆ ಪೂರಕ ವಾತಾರವಣವನ್ನು ಸೃಜಿಸುತ್ತದೆ. ಜೊತೆಗೆ ಇಂತಹ ವೈಪರೀತ್ಯದ ವಾತಾವರಣವು ಕೀಟ ಮತ್ತು ರೋಗಕಾರಕ ಜೀವಿಗಳಿಗೆ ಅನುಕೂಲಕರವಾಗಿ ಇಳುವರಿಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿವೆ.

## ಸುಸ್ಥಿರ ಕೃಷಿಯ ಹೊಸ ಮಾದರಿ:

ಹಾಗಾದರೆ ರೈತರೇನು ಮಾಡಬೇಕು? ಇದು ಕೇವಲ ಕೃಷಿಗೆ ಸಂಬಂಧಿಸಿದ ಸಮಸ್ಯೆ ಮಾತ್ರವಲ್ಲ. ಕೃಷಿಯ ಹೊರಗಿನ ಪ್ರಪಂಚ ಸೇರಿಸುತ್ತಿರುವ ಅಪಾಯಗಳನ್ನೂ ಇದು ಒಳಗೊಂಡಿದೆ. ಹಾಗಾಗಿ ಇಂದು ರೈತ ತಮ್ಮ ಜಮೀನು ಮತ್ತು ವೃತ್ತಿಯನ್ನು ಹೆಚ್ಚು ಸುಸ್ಥಿರವಾಗಿರುವಂತೆ ಮಾಡುವಲ್ಲಿ ಆಸಕ್ತರಾಗಬೇಕಿದೆ. ಇದನ್ನು ಕೇವಲ ಆರ್ಥಿಕ ದೃಷ್ಟಿಕೋನದ ಕೃಷಿಯ ಪರಿಭಾಷೆಯಲ್ಲಿ ವಿವರಿಸಲು ಸಾಧ್ಯವಿಲ್ಲ. ಬದಲಿಗೆ ಜೈವಿಕ ಮತ್ತು ಸಾಮಾಜಿಕ ಶಾಸ್ತ್ರಗಳ ಹೊಸ ಪಾಠಗಳ ಕಲಿಕೆಯಿಂದ ಈ ಸುಸ್ಥಿರತೆಯನ್ನು ರೂಪಿಸಬಲ್ಲ ವಿಧಾನ ಮತ್ತು ಪರಿಕರಗಳತ್ತ ರೈತರ ಗಮನ ಹರಿಯಬೇಕಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳೂ ಕೂಡ ಸುಸ್ಥಿರ ಕೃಷಿಗೆ, ಆರೋಗ್ಯಕರ ಆಹಾರದ ಉತ್ಪಾದನೆಗೆ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಬೆಂಬಲವನ್ನು ಕೊಡುತ್ತಿವೆ. ಆದರೆ ಕೃಷಿಯನ್ನೇ ಅವಲಂಬಿಸಿದ ದೇಶಗಳಲ್ಲಿ ಅಧಿಕ ರಸಾಯನಿಕಗಳ ಬಳಕೆಯನ್ನು ಪ್ರಚೋದಿಸುತ್ತಿವೆ. ಕೃಷಿಯು ಜೈವಿಕ ಪ್ರಪಂಚವಾಗಿದ್ದು. ಇದರ ಅಭಿವೃದ್ಧಿಯಲ್ಲಿ ಪರಿಸರಶಾಸ್ತ್ರದ ಸರಳ ಪಾಠಗಳನ್ನೂ ಒಳಗೊಂಡಿದೆ. ಇದು ಕೇವಲ ವ್ಯಾಪಾರದ ಆಕಾಂಕ್ಷೆಯನ್ನು ಮಾತ್ರವೇ ಒಳಗೊಂಡಿಲ್ಲ ಎಂಬುದನ್ನು ಆಡಳಿತವು ಮೊದಲು ಅರ್ಥ ಮಾಡಿಕೊಂಡು ತನ್ನ ಕೃಷಿನೀತಿಯನ್ನು ರೂಪಿಸಬೇಕು. ಮುಖ್ಯವಾಗಿ ಅಧಿಕವಾಗುತ್ತಿರುವ ವಾಹನ ಸಂಖ್ಯೆ ಮತ್ತು ನಗರೀಕರಣಗಳ ಒತ್ತಡವನ್ನು ಕಡಿಮೆಗೊಳಿಸಬೇಕು.

ಇಂದು ಆಹಾರದ ಭದ್ರತೆ, ಗ್ರಾಹಕ ಪ್ರಪಂಚ, ಆರ್ಥಿಕ ನೀತಿ, ಆಡಳಿತ, ಅಂತಾರಾಷ್ಟ್ರೀಯ ಮಾತುಕತೆ ಈ ಎಲ್ಲವನ್ನೂ 'ಹವಾಮಾನ ಬದಲಾವಣೆ' ಎಂಬ ಒಂದೇ ಚಪ್ಪರದಡಿ ತರಲಾಗುತ್ತಿರುವ ಹೊಸ ಮಾದರಿಯ ಬಗ್ಗೆ ಭಯ ಅಗತ್ಯವಿಲ್ಲ. ಇದರ ನಡುವೆಯೇ ಬಾಳುವ ಜಾಣತನ ಮತ್ತು ಪರಿಸರವನ್ನು ಹೆಚ್ಚೆಚ್ಚು ಸೂಕ್ಷ್ಮವಾಗಿ ಅರಿಯುವ ಮೂಲಕ ಇದನ್ನು ನಮ್ಮದಾಗಿಸಿಕೊಳ್ಳಬಹುದು. ಏಕೆಂದರೆ ಕೃಷಿಯನ್ನಂತೂ ಕೈಗಾರಿಕೀಕರಣದ ಉತ್ಪನ್ನಗಳಿಗೆ ದಾಸರನ್ನಾಗಿಸುವ ಹುನ್ನಾರ ಮಾಡಿದವರೇ ಇದೀಗ ಹವಾಮಾನ ಬದಲಾವಣೆಯೆಂಬ ಗುಮ್ಮನನ್ನು ಸೃಷ್ಟಿಸಿದ್ದಾರೆ ಎಂಬ ಮಾತೂ ಇದೆ. ಆದರೆ ಇದಕ್ಕೆ ಬಲಿಪಶುವಾಗದಂತೆ ನಾವು ನಮ್ಮ ಎಚ್ಚರದಲ್ಲಿ ಇರಬೇಕಾಗಿದೆ. *

# ಪರಿಸರ ಪೂರಕ ಪರ್ಯಾಯ ಅರ್ಥ ವ್ಯವಸ್ಥೆ: ಕೆಲವು ಆಲೋಚನೆಗಳು

– ಭರತ್ ಡೋಗ್ರ




ಪರಿಸರ, ಪರಿಸರ ವಿಜ್ಞಾನ, ಪರಿಸರ ಸಂರಕ್ಷಣೆ ಇತ್ಯಾದಿ ಶಬ್ದಗಳು ಚಲಾವಣೆಗೆ ಬರುವ ಬಹು ಮುನ್ನವೇ ಗಾಂಧಿ ಜಗತ್ತಿನಾದ್ಯಂತ ಕೈಗಾರಿಕೀಕರಣ ದಾಪುಗಾಲು ಇಡತೊಡಗಿದ್ದ ರೀತಿ ನೀತಿಗಳನ್ನು ನೋಡಿ ಇಂದು ಈ ಶಬ್ದಾವಳಿಯನ್ನು ಬಳಸುವ ಪಂಡಿತರು ಇತ್ತೀಚೆಗಷ್ಟೇ ಕಂಡುಕೊಂಡ ಆಳದ ಸತ್ಯವನ್ನು ಬಹಳ ಸರಳ ಮಾತುಗಳಲ್ಲಿ ಹೀಗೆ ಹೇಳಿದ್ದರು: 'ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ. ಏಕೆಂದರೆ ಅವರಿಗೆ ಗೊತ್ತಿತ್ತು: ಭೂಮಿಗೆ ಒಂದು ಅಳತೆ ಇದೆ ಆದರೆ ಮನುಷ್ಯನ ಆಸೆಗೆ ಅಳತೆಯಿಲ್ಲ ಎಂದು. ಆದರೆ ಇಂದು ಮನುಷ್ಯನ ಆಸೆಗಳು ದುರಾಸೆಗಳಾಗಿ, ಕೆಲವರ ಈ ದುರಾಸೆಗಳಿಂದಾಗಿ ಹಲವರ ಅಗತ್ಯಗಳಿಗೂ ಸಂಚಕಾರ ಬಂದಿದೆ. ಇದರಿಂದಾಗಿ ಜೀವಪರಿಸರದ ಜೊತೆಗೆ ಸಾಮಾಜಿಕ ಪರಿಸರವೂ ಅಪಾಯದ ಅಂಚನ್ನು ತಲುಪಿದೆ.

ಈ ಹಿನ್ನೆಲೆಯಲ್ಲಿ ಲೇಖಕರು ಕೈಗಾರಿಕೀಕರಣ ಮಾನವ ಅರ್ಥಶಾಸ್ತ್ರವನ್ನು ಸರಕು ಅರ್ಥಶಾಸ್ತ್ರವನ್ನಾಗಿ ಮಾಡಿದ ಪಶ್ಚಿಮ ದೇಶಗಳು ಇಂದು ಯೋಚಿಸತೊಡಗಿರುವ ದಿಕ್ಕನ್ನು ಹಿಡಿದು ಅವರನ್ನು ಅನುಸರಿಸುತ್ತಿರುವ ನಾವು ಏನು ಮಾಡಬಹುದು ಎಂದು ಇಲ್ಲಿ ಯೋಚಿಸಿದ್ದಾರೆ.–ಸಂ

ನಮ್ಮ ಪ್ರಸ್ತುತ ಅರ್ಥವ್ಯವಸ್ಥೆಯು ಸೃಷ್ಟಿಸಿರುವ ಬೃಹತ್ ಪ್ರಮಾಣದ ಶಾಶ್ವತ ಬಡತನ ಮತ್ತು ಅಗಾಧವಾದ ಪಾರಿಸರಿಕ ವಿನಾಶದ ಹಿನ್ನಲೆಯಲ್ಲಿ ನಾವು ಒಂದು ಪರ್ಯಾಯ ಅರ್ಥವ್ಯವಸ್ಥೆಯನ್ನು ನಿರ್ಮಿಸಿಕೊಳ್ಳುವುದು ನಮ್ಮ ಕಾಲದ ತುರ್ತು ಅಗತ್ಯವಾಗಿದೆ.

ಇದಕ್ಕಾಗಿ ಮೊದಲು, ಪ್ರತಿಯೊಂದು ಕುಟುಂಬಕ್ಕೂ ಒಂದು ಮೂಲಭೂತ ಹಕ್ಕು ಮತ್ತು ಮೂಲಭೂತ ಕರ್ತವ್ಯವನ್ನು ಒತ್ತಿ ಹೇಳಬೇಕಾಗುತ್ತದೆ..

ಪ್ರತಿಯೊಂದು ಕುಟುಂಬದ ಮೂಲಭೂತ ಅಗತ್ಯಗಳೂ ಪೂರೈಸಲ್ಪಡಬೇಕು. ಅಂದರೆ ಪ್ರತಿಯೊಬ್ಬರಿಗೂ ಶುದ್ಧವಾದ ಕುಡಿಯುವ ನೀರು, ಸಾಕಷ್ಟು ಪೌಷ್ಟಿಕಾಂಶ ದೊರೆಯಬೇಕು. ಮೂಲಭೂತ ಆರೋಗ್ಯ ಮತ್ತು ಶೈಕ್ಷಣಿಕ ಸೌಲಭ್ಯಕ್ಕೆ ಅವಕಾಶವಿರಬೇಕು. ಹವಾಮಾನದ ವೈಪರೀತ್ಯಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಅಗತ್ಯವಿರುವಷ್ಟಾದರೂ ಬಟ್ಟೆ ಮತ್ತು ವಸತಿ ವ್ಯವಸ್ಥೆ ದೊರೆಯುವಂತಿರಬೇಕು. ಹಾಗೆಯೇ ಈ ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಒಂದು ಕುಟುಂಬವು ಆರೋಗ್ಯಕ್ಕೆ ಮಾರಕವಾದ ಉದ್ಯೋಗವನ್ನು ಕೈಗೊಳ್ಳಬೇಕಾದ ಒತ್ತಡವೂ ಸಹ ಇರಬಾರದು.

ಈ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಂಡ ನಂತರ, ತುಸು ಮನರಂಜನೆ ಮತ್ತು ಆರಾಮವನ್ನು ಕೊಡುವಂತಹ, ಬಹು ತೀವ್ರವಾದ ಕೆಲವು ಸರಳ ಬಯಕೆಗಳನ್ನು ತೀರಿಸುವಂತಹ ಆದರೆ ಸಾಮಾಜಿಕವಾಗಿ ಯಾವ ರೀತಿಯ ತೊಂದರೆಯನ್ನೂ ಉಂಟುಮಾಡದಂಥಹ ಸಣ್ಣ ಪುಟ್ಟ ದುಬಾರಿಯಲ್ಲದ ವಸ್ತುಗಳನ್ನು ಒಂದು ಕುಟುಂಬವು ಹೊಂದುವಂತಿರಬೇಕು.

ಈ ಮಟ್ಟದ ಮೂಲಭೂತ ಅಗತ್ಯಗಳನ್ನು ಮತ್ತು ಸೌಕರ್ಯಗಳನ್ನು ಪಡೆದುಕೊಂಡ ನಂತರ ಒಂದು ಕುಟುಂಬವು ಇನ್ನೂ ಹೆಚ್ಚಿನದಕ್ಕಾಗಿ ಹಾತೊರೆಯುವುದನ್ನು ಸ್ವಯಂಪ್ರೇರಣೆಯಿಂದ, ಸಂತೋಷದಿಂದ ನಿಲ್ಲಿಸಬೇಕು. ಯಾವ ವಸ್ತುಗಳ ಬಳಕೆಯು ಆರೋಗ್ಯ ಮತ್ತು ಪರಿಸರದ ಮೇಲೆ (ವ್ಯಷ್ಟಿ ಮತ್ತು ಸಮಷ್ಟಿ ಎರಡೂ ಮಟ್ಟದಲ್ಲಿ) ದುಷ್ಪರಿಣಾಮವುಂಟು ಮಾಡುವುದು ಸರ್ವವೇದ್ಯವೋ ಅಂತಹ ವಸ್ತುಗಳನ್ನು ಬಳಸದಿರಲು ಒಂದು ಕುಟುಂಬವು ಸಾಧ್ಯವಿರುವಷ್ಟು ಮಟ್ಟಿಗೂ ಪ್ರಯತ್ನಿಸಬೇಕು.

ಈ ಮೂಲಭೂತ ಅಗತ್ಯಗಳನ್ನು ಪೂರೈಸಿದ ನಂತರವೂ ಮಿಗುವ ಯಾವುದೇ ಆದಾಯ ಮತ್ತು ಸಂಪತ್ತನ್ನು ಒಂದು ಕುಟುಂಬವು ಸ್ವಯಂಸ್ಫೂರ್ತಿಯಿಂದ ಸಂತೋಷವಾಗಿ ಅಗತ್ಯವುಳ್ಳವರಿಗೆ ಬಿಟ್ಟುಕೊಡಬೇಕು ಅಥವಾ (ಇದನ್ನು ಸಂಪೂರ್ಣ ಪ್ರಾಮಾಣಿಕತೆಯಿಂದ ನಡೆಸುವುದು ಸಾಧ್ಯವಾದರೆ) ಪರಿಸರ ಸಂರಕ್ಷಣೆ, ಪ್ರಾಣಿಗಳನ್ನು ಕ್ರೂರವಾಗಿ ನಡೆಸಿಕೊಳ್ಳುವುದನ್ನು ತಡೆಯುವುದು ಮುಂತಾದ ಮಹತ್ವದ ಕಾರ್ಯಗಳಿಗೆ ಅಥವಾ ದುರ್ಬಲ ವರ್ಗಗಳಿಗೆ ಸಹಾಯವಾಗುವಂಥ ಕೆಲಸಗಳಿಗಾಗಿ ಈ ಹಣವನ್ನು ನ್ಯಾಸವಾಗಿ (Trust) ಇರಿಸಬೇಕು.

ಒಂದುಉತ್ತಮ ಅರ್ಥ ವ್ಯವಸ್ಥೆಯ ಡಿಪಾಯ ಹಾಕಲು ಮೌಲ್ಯ ವ್ಯವಸ್ಥೆಯನ್ನು ಎಷ್ಟು ಸಾಧ್ಯವೋ ಅಷ್ಟು ಜನರ ಮಧ್ಯೆ ಪ್ರಚುರಪಡಿಸಬೇಕು. ಹೆಚ್ಚುವರಿಯಾದ ಆದಾಯ ಮತ್ತು ಸಂಪತ್ತನ್ನು ಸ್ವಯಂಸ್ಫೂರ್ತಿಯಿಂದ ಬಿಟ್ಟುಕೊಡುವ ವಿಚಾರಕ್ಕೆ ಹೆಚ್ಚಿನ ಒತ್ತು ಕೊಟ್ಟು ಹೇಳಿದ ಮಾತ್ರಕ್ಕೆ ಹೆಚ್ಚುವರಿಯಾದುದನ್ನು ಬಿಟ್ಟುಕೊಡಲು ತಯಾರಿರದ



ಜನರಿಂದ ಅದನ್ನು ಪಡೆದುಕೊಳ್ಳಲು ಅಗತ್ಯ ಸಂದರ್ಭದಲ್ಲಿ ಬೇರೆ ಬೇರೆ ರೀತಿಗಳ ಬಲಗಳನ್ನು ಬಳಸಬಾರದು ಎಂದಲ್ಲ. ಏನೇ ಆದರೂ ಈ ಹಕ್ಕನ್ನು ಸರ್ಕಾರಕ್ಕೆ ನೀಡುವ ಮೊದಲು ನಾವು ಸ್ವಯಂಸ್ಫೂರ್ತಿಯ ಅಂಶವನ್ನು ಕಡೆಗಣಿಸಬಾರದು. ಹಾಗಿದ್ದಲ್ಲಿ ಮಾತ್ರ ಯುಕ್ತ ಮೌಲ್ಯಗಳನ್ನು ಜನರ ಮಧ್ಯೆ ವ್ಯಾಪಕವಾಗಿ ಪ್ರಸರಿಸಲು ಸಾಧ್ಯ.

ಈ ಮೌಲ್ಯಗಳ ಪ್ರಸರಣವು ಸುದ್ಧಾಂತ ಪ್ರತಿಪಾದನೆ ಮತ್ತು ಭಾಷಾಡಂಬರಗಳಿಗೆ ಪ್ರತಿಯಾಗಿ ವಸ್ತುಸ್ಥಿತಿ ಮತ್ತು ತರ್ಕವನ್ನಾಧರಿಸಿರಬೇಕು. ನಮ್ಮ ಪರಿಸರವನ್ನು ಕಾಪಾಡುವುದಕ್ಕಾಗಿ ನಮ್ಮ ಅಗತ್ಯಗಳನ್ನು ಒಂದು ಮಿತಿಗೆ ಒಳಪಡಿಸುವುದು ಅಗತ್ಯ. ಏಕೆಂದರೆ ನಮ್ಮ ಮಕ್ಕಳು ಮೊಮ್ಮಕ್ಕಳಿಗೆ ಶುದ್ಧ ಸುರಕ್ಷಿತ ಪರಿಸರವನ್ನು ಉಳಿಸುವುದಕ್ಕಿಂತ ದೊಡ್ಡ ಕೊಡುಗೆ ಬೇರೊಂದಿರಲಾರದು. ಜನಸಾಮಾನ್ಯರ ಮನಸ್ಸಿನ ಮೃದು ಮೂಲೆಗಳನ್ನು ಮುಟ್ಟಬಲ್ಲ ಈ ಬಗೆಯ ಅಂಶಗಳ ಮೇಲೆ ಒತ್ತು ನೀಡುವುದು ಉತ್ತಮ.

ತಮ್ಮ ಅವಶ್ಯಕತೆಗಳನ್ನು ಮಿತಿಗೊಳಿಸಿಕೊಳ್ಳುವ ಅಗತ್ಯವನ್ನು ಜನಕ್ಕೆ ಮನಗಾಣಿಸುವುದು ಬಹಳ ಕಠಿಣವಾದ ಕಾರ್ಯ ಎಂಬುದು ಸಾಮಾನ್ಯ ನಂಬಿಕೆ. ಆದರೆ ಸರಳ ಜೀವನ ನಡೆಸಬೇಕು, ಕಡಿಮೆ ಬಳಕೆದಾರಿಕೆಯನ್ನು ಕಡಿಮೆ ಮಾಡಿಕೊಳ್ಳಬೇಕು ಎಂಬ ಬಹಳ ಜನರ ಆಸೆಯನ್ನು ಬಹಳ ಬಾರಿ ಹೆಚ್ಚು ಪ್ರಚುರಪಡಿಸಲು ಹಿಂಜರಿಯಲಾಗಿದೆ. ೧೯೯೬ರ ಆಗಸ್ಟ್ ೧೩ರ 'ದಿ ಟೈಮ್ಸ್ ಆಫ್ ಇಂಡಿಯಾ'ದ ವರದಿಯೊಂದು ಬಳಕೆದಾರಿಕೆಯ ಮೂಲಸ್ಥಾನವಾದ ಯು.ಎಸ್.ಎ ಯಲ್ಲಿಯೇ ಸಾಕಷ್ಟು ಜನ ಬಳಕೆದಾರಿಕೆಯ ಮೌಲ್ಯಗಳನ್ನು ಪ್ರಶ್ನೆ ಮಾಡುತ್ತಾರೆ ಎಂಬುದಾಗಿ ತಿಳಿಸುತ್ತದೆ.

ಕಳೆದ ಬೇಸಿಗೆಯಲ್ಲಿ, 'ಮೆರೆಕ್ ಕುಟುಂಬ ನಿಧಿ'ಯು ಬಳಕೆದಾರಿಕೆ, ಭೌತಿಕವಾದ ಮತ್ತು ಪರಿಸರವನ್ನು ಕುರಿತು ಒಂದು ರಾಷ್ಟ್ರವ್ಯಾಪಿ ಸಾರ್ವಜನಿಕ ಅಭಿಪ್ರಾಯದ ಸಮೀಕ್ಷೆಯನ್ನು ಪ್ರಾರಂಭಿಸಿತು. ಮೇಲ್ನೋಟಕ್ಕೆ ಜನಮನದಲ್ಲಿ ಆಳವಾಗಿ ಬೇರೂರಿದಂತೆ ಕಂಡು ಬರುವ ಮೌಲ್ಯಗಳಾದ ಆರ್ಥಿಕ ಭದ್ರತೆ ಮತ್ತು ಔದ್ಯೋಗಿಕ ಯಶಸ್ಸುಗಳನ್ನು ಅಮೆರಿಕದ ಜನ ಪ್ರಶ್ನೆ ಮಾಡುವುದು ಈ ಸಮೀಕ್ಷೆಯಿಂದ ತಿಳಿದು ಬಂತು. "ಈಗ ಕೊಂಡುಕೋ ನಂತರ ಹಣಕೊಡು" ಮನೋಭಾವವು ನಮ್ಮಲ್ಲಿ ನಮ್ಮ ಅಗತ್ಯಕ್ಕಿಂತ ಹೆಚ್ಚು ಕೊಳ್ಳುವುದಕ್ಕೆ ಕಾರಣವಾಗಿದೆ ಎಂಬ ಅಭಿಪ್ರಾಯವನ್ನು ಶೇ. ೯೧ರಷ್ಟು ಜನ ವ್ಯಕ್ತಪಡಿಸಿದರು. ಈ ಸಮೀಕ್ಷೆಯ ಹೆಚ್ಚು ಮಹತ್ವದ ಸಂಗತಿಯೆಂದರೆ ಅವರು ತಮ್ಮಲ್ಲಿ ಹೆಚ್ಚುತ್ತಿರುವ ಅಶಾಂತಿ–ಅಸಮಾಧಾನದ ವಿಚಾರದಲ್ಲಿ



ಕ್ರಮ ಕೈಗೊಂಡವರಾಗಿದ್ದುದು. ತಮ್ಮ ಗಳಿಕೆಯನ್ನು ಕಡಿಮೆ ಮಾಡಿಕೊಳ್ಳುವ ವಿಚಾರದಲ್ಲಿ ಕಳೆದ ಐದು ವರ್ಷಗಳಲ್ಲಿ ಅವರು ಸ್ವಪ್ರೇರಣೆಯಿಂದ ಕ್ರಮ ಕೈಗೊಂಡಿದ್ದಾರೆಯೇ ಎಂಬ ಪ್ರಶ್ನೆಗೆ ೨೮% ಜನ ಹೌದು ಎಂದು ಉತ್ತರಿಸಿದ್ದಾರೆ. ಈ ನಿರ್ದಿಷ್ಟ ಅಂಕಿ-ಅಂಶಗಳಿಂದ ನಾವು ನಿಜಕ್ಕೂ ದಿಗ್ಭ್ರಮೆಗೆ ಒಳಗಾದೆವು ಎಂಬುದಾಗಿ ನಿಧಿಯ ಕಾರ್ಯಕಾರಿ ನಿರ್ದೇಶಕರಾದ ಬೆಟ್ಸಿ ಟೇಲರ್ ಹೇಳುತ್ತಾರೆ. ಸಮೀಕ್ಷೆಗೆ ಒಳಪಟ್ಟ ಜನರು ತಮ್ಮ ಬದುಕನ್ನು ಸರಳಗೊಳಿಸಿಕೊಳ್ಳಲು ನಿಜವಾದ ಹಾತೊರಿಕೆಯನ್ನು ಪ್ರಕಟಿಸಿದ್ದಾರೆ. ಈ ವಿಷಯವಾಗಿಒಮ್ಮೆ ಮಾತು ಪ್ರಾರಂಭಿಸಿದ ನಂತರ ಅದನ್ನು ಕೂಡಲೇ ನಿಲ್ಲಿಸುವುದಕ್ಕೆ ಹಲವರು ಸಿದ್ಧರಿರಲಿಲ್ಲ. ಇದಕ್ಕೆ ಅವರು ಕೊಟ್ಟ ಅತಿ ಮುಖ್ಯ ಕಾರಣ : ಹೆಚ್ಚು ಸಮತೋಲನದ ಜೀವನದ ಬಯಕೆ.

ಬ್ರಿಟಿಷ್ ಸಾಮಾಜಿಕ ಸಂಶೋಧನಾ ಮಂಡಳಿಯು ನಡೆಸಿದ ಒಂದು ಸಮೀಕ್ಷೆಯಲ್ಲಿ, ತಮ್ಮ ಬಳಿಯಿರುವ ಅನುಭೋಗಿ ವಸ್ತುಗಳಿಗಿಂತಲೂ ಒಂದು ಒಳ್ಳೆಯ ಕೌಟುಂಬಿಕ ಜೀವನ ಮತ್ತು ಸಂತೃಪ್ತಿಗಳೇ ಮೇಲು ಎಂಬುದಾಗಿ ಬಹುಸಂಖ್ಯಾತ ಜನರು ಅಭಿಪ್ರಾಯಪಟ್ಟಿರುವುದು ತಿಳಿದು ಬರುತ್ತದೆ.

ತಮಗೆ ಯಾವುದೇ ಹೆಚ್ಚಿನ ರೀತಿಯಲ್ಲಿ ಉಪಯುಕ್ತವಾಗಿ ಕಂಡು ಬರದ ಹಲವಾರು ಅನುಭೋಗಿ ವಸ್ತುಗಳನ್ನು ಹೊಂದಿರುವುದರ ಬಗ್ಗೆ ಜನರಲ್ಲಿ ಅಸಹನೆ ಹೆಚ್ಚುತ್ತಿರುವುದನ್ನು ಸಾಮಾಜಿಕ ವಿಮರ್ಶಕರು ಎಷ್ಟೋ ಸಮಯದಿಂದ ಪ್ರಯತ್ನಿಸುತ್ತಿದ್ದಾರೆ. ಇಂಗ್ಲೀಷ್ ಕಲಾವಿದ ಮತ್ತು ಕವಿ ವಿಲಿಯಂ ಮೌರಿಸ್ ೧೮೭೬ ರಷ್ಟು ಹಿಂದೆಯೇ ಈ ಕಾರ್ಯವನ್ನು ಮಾಡಿದ್ದಾನೆ: "ಸಂಪತ್ತು ಎಂಬುದು ಪ್ರಕೃತಿ ನಮಗೆ ಏನು ಕೊಡುತ್ತದೋ ಅದು ಮತ್ತು ಒಬ್ಬ ವಿವೇಕಿಯಾದ ಮನುಷ್ಯ ಪ್ರಕೃತಿಯ ಕೊಡುಗೆಯನ್ನು ಬಳಸಿಕೊಂಡು ತನ್ನ ನ್ಯಾಯಯುತ ಬಳಕೆಗೆ ಏನು ಮಾಡಿಕೊಳ್ಳಬಲ್ಲನೋ ಅದು... ಆದರೆ ಜಾಗತಿಕ ಕಾರ್ಯಾಗಾರವಾಗಿರುವ ಇಂಗ್ಲೆಂಡ್ ಏನೆಲ್ಲವನ್ನು ತಯಾರಿಸುತ್ತಿದೆ ಎಂಬುದರ ಬಗ್ಗೆ ತುಸು ಯೋಚಿಸಿ ಎಂದು ನಿಮ್ಮನ್ನು ಆಗ್ರಹಿಸುತ್ತಿದ್ದೇನೆ... ಬುದ್ಧಿ ಸ್ಥಿಮಿತವಿರುವ ಯಾವ ಮನುಷ್ಯನಿಗೂ ಬೇಡವಾದ, ಆದರೆ ನಮ್ಮ ವ್ಯರ್ಥ ಪರಿಶ್ರಮದಿಂದ ರಾಶಿ ರಾಶಿಯಾಗಿ ತಯಾರಾಗುತ್ತಿರುವ ಬಗ್ಗೆ ನನ್ನ ಹಾಗೇ ನೀವೂ ದಿಗ್ಭ್ರಮೆಗೊಳ್ಳದಿರಲಾರಿರಿ."

'ದಿ ಡೈಲಿ ಟೆಲಿಗ್ರಾಫ್' ಪತ್ರಿಕೆಯ ಇತ್ತೀಚಿನ ಲೇಖನವೊಂದರಲ್ಲಿ ನಿಕೋಲಾ ಟೈರರ್ ಹೇಳುತ್ತಾರೆ "ಬದುಕಿನ ಭಾರವನ್ನು ಕಡಿಮೆ ಮಾಡಬಲ್ಲಂಥವು ಎಂಬುದಾಗಿ ನಂಬಿ ಯಾವ ಆವಿಷ್ಕಾರಗಳನ್ನು ನಾವು ಹೊಗಳುತ್ತಿದ್ದೇವೆಯೋ ಅವು ಆ ರೀತಿಯಲ್ಲಿ ನಿಜವಾಗಿ ಇರಲಾರವು ಅಷ್ಟೇ ಅಲ್ಲ ಅದಕ್ಕೆ ವಿರುದ್ಧವಾಗಿ ಅವು ನಮ್ಮ ಕೆಲಸದ ಹೊರೆಯನ್ನು ಹೆಚ್ಚಿಸುತ್ತಿರಬಹುದು ಅಥವಾ ನಮಗೆ ಪ್ರಿಯವಾದಂಥವನ್ನು ನಮ್ಮ ಅರಿವಿಗೆ ಬಾರದ ರೀತಿಯಲ್ಲಿ ನಾಶಪಡಿಸುತ್ತಿರಬಹುದು ಎಂಬ ಸಂಶಯವು ಯುದ್ಧ ಕಾಲದ ಸಂತತಿಯ ಪುತ್ರ ಪುತ್ರಿಯರಲ್ಲಿ ಸುಳಿಯುತ್ತಿದೆ. ಉದಾಹರಣೆಗೆ ಪ್ರತಿ ಹತ್ತು ಬ್ರಿಟೀಷ್ ಕುಟುಂಬಗಳ ಎಂಟು ಮನೆಗಳಲ್ಲಾದರೂ ಇರುವ ಬಟ್ಟೆ ಒಗೆಯುವ ಯಂತ್ರವನ್ನೇ ನೋಡೋಣ. ಫ್ಯಾಷನ್ ಪ್ರಜ್ಞೆಯ ಮಕ್ಕಳು ತಮ್ಮ ಮನ ಬಂದಂತೆ ಪದೇ ಪದೇ ಬಟ್ಟೆಗಳನ್ನು ಬದಲಾಯಿಸುತ್ತಾ ಇರುವುದರಿಂದ ಎಷ್ಟೊಂದು ಜನ ಮಹಿಳೆಯರು ಪ್ರತಿನಿತ್ಯ ಬಟ್ಟೆ ಒಗೆಯುವ ಯಂತ್ರಕ್ಕೆ ಬಟ್ಟೆಗಳನ್ನು ತುಂಬುವ ತೆಗೆಯುವ ಕೆಲಸದಲ್ಲಿ ಮುಳುಗಿ ಹೋಗಿಲ್ಲ? ಬಹಳಷ್ಟು ಮನೆಗಳಲ್ಲಿ ಪಾತ್ರೆ ತೊಳೆಯುವ ಯಂತ್ರದಿಂದ ಪಾತ್ರೆಗಳನ್ನು ತೆಗೆಯುವುದು ಹೆಂಗಸರ ಕೆಲಸವೇ. ೫೦ ವರ್ಷಗಳ ಹಿಂದೆ ತೊಳೆಯುವ ಕೆಲಸಗಳನ್ನು ಮನೆ ಮಂದಿಯೆಲ್ಲಾ ಹಂಚಿಕೊಳ್ಳುತ್ತಿದ್ದರು. ಇದೇ ವೇಳೆಗೆ ಟಿ.ವಿ ಮತ್ತು ಮೈಕ್ರೋವೇವ್‌ಗಳು ಕುಟುಂಬದ ಪ್ರತಿಯೊಬ್ಬ ಸದಸ್ಯರೂ ತಮಗೆ ಬೇಕೆನಿಸಿದಾಗ ಊಟ ಮಾಡುವ ವ್ಯವಸ್ಥೆಯನ್ನು ಸೃಷ್ಟಿಸಿರುವುದರಿಂದ ಕುಟುಂಬವು ಒಟ್ಟಾಗಿ ಕುಳಿತು ಊಟ ಮಾಡುವ ಆನಂದವೇ ನಾಶವಾಗಿದೆ. ತಮ್ಮ ಮಲಗುವ ಕೋಣೆಗಳಲ್ಲಿ ಟಿವಿ ಮತ್ತು ಸ್ವಂತ ಗಣಕಗಳನ್ನು ಹೊಂದಿರುವ ಮಕ್ಕಳು ಜಗಳವಾಡುವುದು ಕಡಿಮೆಯೇನೋ ಆಗಿದೆ. ಆದರೆ ಈ ಪ್ರತ್ಯೇಕತೆಯಿಂದಾಗಿ ಆಟ ಮತ್ತು ಸಹಿಷ್ಣುತೆಗಳಂತಹ ಬದುಕಿನ ಮುಖ್ಯ ಪಾಠಗಳನ್ನು ಮಕ್ಕಳು ಕಳೆದುಕೊಳ್ಳುತ್ತಿದ್ದಾರೆ."

ಮುಂದುವರೆದು 'ಡೈಲಿ ಟೆಲಿಗ್ರಾಫ್'ನ ಈ ಲೇಖನವು, ಒಂಬತ್ತು ಟಿವಿ ಸೆಟ್‌ಗಳನ್ನು ಹೊಂದಿದ್ದ ಆರು ಜನ ಸದಸ್ಯರ ಒಂದು ಕುಟುಂಬಕ್ಕೆ ಮೂರು ದಿನಗಳ ಕಾಲ ಟಿವಿಯನ್ನು ಬಂದ್ ಮಾಡಲು ತಿಳಿಸಿದಾಗ ಏನಾಯಿತು ಎಂಬ ಕಥೆಯನ್ನು ಹೇಳುತ್ತದೆ. ೧೭ ವರ್ಷದ ಹಿರಿಯ ಮಗ ಈ ಸಲಹೆಯಿಂದ ಎಷ್ಟೊಂದು ಭೀತಿಗೊಂಡನೆಂದರೆ, ಅವನು ಈ ಪ್ರಯೋಗಕ್ಕೆ ಒಳಗಾಗುವುದನ್ನೇ ತಿರಸ್ಕರಿಸಿದ. ಉಳಿದ ಮೂರು ಜನ ಮಕ್ಕಳಲ್ಲಿ ನಡವಳಿಕೆಯಲ್ಲಿನ ಉತ್ತಮ ಪ್ರಗತಿ ಸ್ಪಷ್ಟವಾಗಿ ಕಂಡು ಬಂತು. ತಮಗೆ ಕಷ್ಟವಾಗುತ್ತಿದೆ ಎಂದು ಅವರು ಭಾವಿಸಿದರೂ ಕೂಡ-ಪರಸ್ಪರ ಕಚ್ಚಾಡುವುದಕ್ಕೆ ಪ್ರತಿಯಾಗಿ ಒಬ್ಬರನ್ನೊಬ್ಬರು ಹುಡುಕಿಕೊಂಡು ಹೋಗಿ ಪರಸ್ಪರರ ಸಹವಾಸದಲ್ಲಿ ಖುಷಿಪಡುವುದು ಕಂಡು ಬಂತು. ಅವರ ತಾಯಿ ಕ್ಯಾರೋಲ್ "ನಾವು ಸುಮ್ಮನೆ ಮುಂದೂಡುತ್ತಾ ಬಂದಿದ್ದ ಎಷ್ಟೋ ಕೆಲಸಗಳು ಈಗ ಆಗುತ್ತಿವೆ, ಬೈಕುಗಳು ರಿಪೇರಿಯಾಗಿದೆ. ಪುಸ್ತಕಗಳನ್ನು ಕಪಾಟುಗಳಲ್ಲಿ ಸರಿಯಾಗಿ ಜೋಡಿಸಲಾಗಿದೆ. ಕೋಣೆಗಳು ಸ್ವಚ್ಛಗೊಂಡಿವೆ. ಹ್ಯಾಮ್ಸ್ಟರ್‌ಗಳು ಸ್ವಚ್ಛವಾಗಿವೆ. ತಾನ್ಯಾ ಮತ್ತು ಆ್ಯಪ್ಲೆ ಸ್ಕ್ರಾಬಲ್, ಸೆವೆನ್ಸ್ ಮುಂತಾದ ಆಟಗಳನ್ನು ಒಟ್ಟಿಗೆ ಆಡಲು ತೊಡಗಿದ್ದಾರೆ. ಅವರು ಕಥೆಗಳನ್ನು ಸಹ ಒಟ್ಟಿಗೆ ಓದುತ್ತಾರೆ" ಎಂಬುದಾಗಿ ಹೇಳುತ್ತಾರೆ. ಮನೆಯಲ್ಲಿನ ಶಾಂತಿಯಿಂದ ಡೇವಿಡ್ ಮೇಲೆ ಬಹಳ ಪ್ರಭಾವವುಂಟಾಗಿದೆ. ತಮ್ಮ ಮನರಂಜನೆಯನ್ನು ತಾವೇ ಯೋಜಿಸಬೇಕಾಗಿರುವುದರಿಂದ ಮಕ್ಕಳ ಸಂಭ್ರಮ ಹೇಳತೀರದಾಗಿದೆ. "ನನ್ನನ್ನು ಹೊಡೆದು ಸಾಯಿಸಿಯೇ ಬಿಡುತ್ತಾರೆ ಎಂಬ ಬೀತಿ ಇಲ್ಲದಿದ್ದರೆ ಟೆಲಿವಿಷನ್‌ಗಳನ್ನೆಲ್ಲ ಹೊರಗಡೆ ಎಸೆದು ಬಿಡುತ್ತಿದ್ದೆ!" ಎಂಬುದಾಗಿ ಆತ ಹೇಳುತ್ತಾರೆ.

ಸ್ವಲ್ಪ ಶ್ರಮ ವಹಿಸಿದರೆ ತಮ್ಮ ಅಗತ್ಯಗಳನ್ನು ಸ್ವಪ್ರೇರಣೆಯಿಂದ ಕಡಿಮೆ ಮಾಡಿಕೊಳ್ಳುವಂತೆ ಹಲವಾರು ಜನರ ಮನವೊಲಿಸುವುದು ಸಾಧ್ಯ ಎಂಬುದನ್ನು ಈ ಉದಾಹರಣೆ ಸೂಚಿಸುತ್ತದೆ. ಮೂಲಭೂತ ಬದಲಾವಣೆಯನ್ನು ಕುರಿತು, ತ್ಯಾಗವನ್ನು ಕುರಿತು ಜೀವನವನ್ನು ಸರಳಗೊಳಿಸಿಕೊಳ್ಳುವುದನ್ನು ಕುರಿತು ಮಾತನಾಡುವುದು ಎಂದರೆ ಸೋಲನ್ನು ನಾವೇ ತಂದುಕೊಂಡಂತೆ ಎಂಬುದಾಗಿ ಪಶ್ಚಿಮದ ರಾಜಕಾರಣಿಗಳು ನಂಬುತ್ತಾರೆ. ಆದರೆ ಇದು ತಪ್ಪು ಎಂಬುದು ನನ್ನ ನಂಬಿಕೆ ಎಂಬುದಾಗಿ ಜೆರಿಮಿ ಸೀಬ್ರೂಕ್ ಬರೆಯುತ್ತಾರೆ.

ಅವರು ವಿರಿಸುತ್ತಾರೆ: "ನಮ್ಮ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಹಣ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದ ಘಟಕ ಮಾನವ ಸಂಪನ್ಮೂಲ ಎಂಬುದು ಸತ್ಯ.. ಎಲ್ಲಕ್ಕೂ ಬೆಲೆ ಕಟ್ಟಬಲ್ಲ; ಆದರೆ ಯಾವುದರ ನಿಜವಾದ ಮೌಲ್ಯಗಳನ್ನೂ ಅರಿಯದ ಪಶ್ಚಿಮವು ಈ ಸರಳ ಪಾಠವನ್ನು ಪುನರ್ಮನನ ಮಾಡಿಕೊಳ್ಳಬೇಕಿದೆ. ತಮ್ಮ ಬೆಲೆಕೊಟ್ಟು ಖರೀದಿಸುವ ಅಸಂತೋಷಗಳಿಂದ ದೂರಾಗಲು, ಮಾರಾಟಕ್ಕಿರುವ ಪರಿಹಾರಗಳ ಬಗೆಗಿನ ನಿಷ್ಠೆಯ ಚಟದಿಂದ ಬಿಡುಗಡೆ ಹೊಂದಲು ಪಾಶ್ಚಿಮಾತ್ಯರನ್ನು ಎಚ್ಚರಗೊಳಿಸಿದರೆ ಅವರೆಷ್ಟು ಸ್ವತಂತ್ರರಾಗಬಹುದು ಎಂಬುದನ್ನು

ಕಲ್ಪಿಸಿಕೊಳ್ಳಿ. ಒಮ್ಮೆ ಇದು ಸಾಧ್ಯವಾದರೆ ಈ ಭೂಮಿಯ ಮೇಲಿನ ಬಡಜನರೊಡನೆ ಹಂಚಿಕೊಂಡು ಬಾಳುವ ತಮ್ಮ ಬಯಕೆಯ ವಿಚಾರದಲ್ಲಿ ಅವರು ಎಷ್ಟು ಉದಾರಿಗಳಾಗಬಲ್ಲರು ಎಂಬುದು ಗೊತ್ತಾಗುತ್ತದೆ."

" ಪಶ್ಚಿಮದಲ್ಲಿ ಅಂದದ ಪೊಟ್ಟಣ ಕಟ್ಟಿ ಮಾರುಕಟ್ಟೆಯಲ್ಲಿ ಪುನಃ ನಮಗೇ ಮಾರಲ್ಪಡುತ್ತಿರುವ ಏನೆಲ್ಲವನ್ನು ಮೂಲತಃ ನಾವೇ ಮಾಡಿಯೋ ರೂಪಿಸಿಯೋ ಆವಿಷ್ಕರಿಸಿಯೋ. ಪರಸ್ಪರರಿಗೆ ಉಚಿತವಾಗಿ ಕೊಡಬಲ್ಲವನಾಗಿದ್ದಾನೆ ಎಂಬುದು ಅವರಿಗೆ ಮನವರಿಕೆಯಾಗಲಿದೆ. ಭಾರೀ ಹಣವಿಲ್ಲದಿದ್ದರೆ ನೀವು ಏನಾದರೂ ಮಾಡುವುದು ಎಷ್ಟು ಕಡಿಮೆ ಸಾಧ್ಯ ಎಂಬುದನ್ನು ಕಲಿಯುವುದಕ್ಕೆ ಪ್ರತಿಯಾಗಿ ಅತೀ ಕಡಿಮೆ ಹಣದಿಂದ ಅತಿಹೆಚ್ಚು ಕ್ರಿಯಾಶೀಲರಾಗುವುದು ಹೇಗೆ ಸಾಧ್ಯ ಎಂಬುದನ್ನು ಅವರು ಕಲಿಯುವರು. ಪ್ರಪಂಚದ ಬಡವರು ಇವರಿಗೆ ಕಲಿಸಬಹುದಾದ ಅತ್ಯಂತ ಮಹತ್ವದ ಪಾಠ ಇದು. ನಾವು ಬಡವರಾಗಿರಬೇಕು ಎಂಬುದು ಇದರರ್ಥವಲ್ಲ. ನಮ್ಮ ಅಗತ್ಯಗಳನ್ನು ತೃಪ್ತಿಪಡಿಸಿಕೊಳ್ಳಲು ಮಾರುಕಟ್ಟೆಯ ಮೇಲೆ ಕಡಿಮೆ ಅವಲಂಬಿಸುವುದು ಮತ್ತು ಆ ಮೂಲಕ ದಿನ ನಿತ್ಯವೂ ಯಾರ ಮೂಲಭೂತ ಅಗತ್ಯಗಳೂ ಕೂಡ ಪೂರೈಕೆಯಾಗದೆ ಉಳಿಯುತ್ತಿದೆಯೋ ಅಂಥವರಿಗಾಗಿ ಭೌತಿಕ ಸಂಪನ್ಮೂಲಗಳನ್ನು ಒದಗಿಸುವುದು ಎಂಬುದೇ ಇದರ ಅರ್ಥ. ಹೀಗೆ ಮಾಡುವುದು ಎಂಥ ಜೀವದಾಯಿಯಾದ ಔದಾರ್ಯವಾಗಬಹುದಲ್ಲವೆ ?"

ಮೂಲಭೂತ ಅಗತ್ಯಗಳ ಕಡಿಮೆ ದುಂದುಗಾರಿಕೆಯಿಂದ ತಮ್ಮ ಸಂತೋಷವೂ ಕಡಿಮೆಯಾಗುತ್ತದೆ ಎಂಬ ಹೆದರಿಕೆ ಶ್ರೀಮಂತ ಕುಟುಂಬಗಳಿಗೆ ಇರಬೇಕಾಗಿಲ್ಲ. ಹೆಚ್ಚು ಹೆಚ್ಚು ವಸ್ತುಗಳನ್ನು ಸಂಗ್ರಹಿಸಿಕೊಳ್ಳುವ ಕ್ಷಣಿಕ ಸಂತೋಷಕ್ಕೆ ಪ್ರತಿಯಾಗಿ ಕಾಳಜಿ ತುಂಬಿದ ಗಾಢ ಪ್ರೀತಿಯ ಮನುಷ್ಯ ಸಂಬಂಧವು ಒಡಮೂಡಿ ನಿಜವಾದ ಸಂತೋಷವನ್ನು ಹೆಚ್ಚಿಸಿಕೊಳ್ಳುವ ಅವಕಾಶ ಅವರಿಗೆ ದೊರೆಯುತ್ತದೆ.

ಭೌತಿಕ ವಸ್ತುಗಳ ಸಂಗ್ರಹವನ್ನು ಕಡಿಮೆ ಮಾಡುವುದೆಂದರೆ ಅದು ನಿಗ್ರಹವೆಂದಲ್ಲ. ಪ್ರತಿಯಾಗಿ ವಿಭಿನ್ನ ಆಸಕ್ತಿಯ ಅರ್ಥಪೂರ್ಣ ಜೀವನವೆಂಬುದೇ ಅದರರ್ಥ. ಹೆಚ್ಚಿನ ಭೌತಿಕ ವಸ್ತುಗಳ ಸಂಗ್ರಹದ ದುರಾಸೆಯಿಂದ ದೂರವಾಗುವುದರಿಂದ ನಮಗೆ ಅರ್ಥಪೂರ್ಣ ಪ್ರಯತ್ನಗಳಿಗೆ, ಹಲವಾರು ರೀತಿಯ ಸೃಜನಾತ್ಮಕ ಕೆಲಸಗಳಿಗೆ ಅದಕ್ಕೂ ಹೆಚ್ಚಾಗಿ ನಮ್ಮ ಸುತ್ತಲ ಹತಾಶೆಯನ್ನು ಕಡಿಮೆ ಮಾಡುವ ವಿಶೇಷ ಪ್ರಯತ್ನಗಳಿಂದಾಗಿ ಮನುಷ್ಯ ಸಂಬಂಧಗಳ ಅಭಿವೃದ್ಧಿಗೆ ಹೆಚ್ಚು ಸಮಯ ದೊರೆಯುತ್ತದೆ.

ಎಲ್ಲ ಪ್ರಜೆಗಳ ಮೂಲಭೂತ ಅಗತ್ಯಗಳನ್ನು ಪೂರೈಸುವ ಹಾಗೂ ಅತಿಯಾಗಿ ಸಂಪತ್ತಿನ ಸಂಗ್ರಹ ಮತ್ತು ಅತಿಯಾದ ಬಳಕೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸರ್ಕಾರವು ತನ್ನ ವಿವಿಧ ರೀತಿಯ ಅಧಿಕಾರಗಳನ್ನು ಬಳಸಿ ಈ ಮೌಲ್ಯಗಳ ಪ್ರಸರಣಕ್ಕೆ ಸಹಾಯ ಮಾಡಬೇಕು.

ಪ್ರತಿಯೊಬ್ಬರ ಅಗತ್ಯ ಮತ್ತು ಕೆಲವು ಸಣ್ಣಪುಟ್ಟ ಸೌಕರ್ಯಗಳನ್ನು ಪೂರೈಸುವ ಸಲುವಾಗಿ ಖಾಸಗಿ ಮತ್ತು ಸಾರ್ವಜನಿಕ ವಲಯಗಳನ್ನು ಒಂದು ಸೃಜನಶೀಲ ವಿಧಾನದಲ್ಲಿ ಒಂದುಗೂಡಿಸಬೇಕು. ಸಣ್ಣ ಪ್ರಮಾಣದ ಖಾಸಗಿ ಉದ್ಯಮಿಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಸೃಜನಶೀಲವಾದ ಅವಕಾಶ ಕಲ್ಪಿಸಬೇಕು. ಭಾರೀ ಕೈಗಾರಿಕೆಗಳು ಸಾರ್ವಜನಿಕ ಆರೋಗ್ಯ, ಸಾಗಾಣಿಕೆ, ಸಂವಹನ ಮತ್ತು ಇತರ ಕ್ಷೇತ್ರಗಳಲ್ಲಿ ಸಾಕಷ್ಟು ಸರ್ಕಾರದ ಪಾತ್ರವೂ ಇರಬೇಕು.

ಸಾರ್ವಜನಿಕ ಮತ್ತು ಖಾಸಗಿ ಎರಡೂ ವಲಯಗಳ ಉದ್ದಿಮೆಗಳು ಪರಿಸರ ಸಂರಕ್ಷಣೆ ಮತ್ತು ಬಳಕೆದಾರರ ಹಿತಾಸಕ್ತಿಯಲ್ಲಿ ಕ್ರಿಯಾಶೀಲರಾದ ಸಾರ್ವಜನಿಕ ಹಿತಾಸಕ್ತಿಯ ಗುಂಪುಗಳಿಗೆ ಜವಾಬ್ದಾರರಾಗಿರಬೇಕು. ಅದೂ ಅಲ್ಲದೆ ಈ ಉದ್ದಿಮೆಗಳ ಕೈಗಾರಿಕಾ ನೀತಿ ಕಾರ್ಮಿಕ ಕಲ್ಯಾಣವನ್ನು ಆಧರಿಸಿರಬೇಕು.

ಕೃಷಿ, ಉತ್ಪಾದಕತೆ ಮತ್ತು ಲಭ್ಯತೆಯನ್ನು ಆಧರಿಸಿ ಎರಡರಿಂದ ಹತ್ತು ಎಕರೆಗಳಷ್ಟು ಭೂಮಿ ಸಾಗುವಳಿ ಮಾಡುವ ಸಣ್ಣ ರೈತರ ಕೈಯಲ್ಲಿ




ಇರಬೇಕು. ಅವರು ಸ್ವಪ್ರೇರಣೆಯಿಂದ ಸಹಕಾರಿ ಅಥವಾ ಕೂಡು ವ್ಯವಸ್ಥೆ ಬಯಸಿದಲ್ಲಿ ಅವರು ಬಯಸಿದ ರೀತಿಯಲ್ಲಿ ಇರುವ ಅವಕಾಶವಿರಬೇಕು ಅಥವಾ ತಮ್ಮ ಒಂದು ನೆಲೆಯ ವೈಯಕ್ತಿಕ ಖಾಸಗಿತನವನ್ನು ಉಳಿಸಿಕೊಂಡು ಸಹಕಾರಿ ಅಥವಾ ಕೂಡು ಕೃಷಿ ವ್ಯವಸ್ಥೆಯಲ್ಲಿ ಬೇರೆ ಬೇರೆ ಹಂತಗಳಲ್ಲಿ ಪಾಲ್ಗೊಳ್ಳುವ ಅವಕಾಶವಿರಬೇಕು.

ಇಂಧನದ ಬಳಕೆ, ಪರಿಸರ ಸಂರಕ್ಷಣೆಯ ವಿಧಾನಗಳು ಉತ್ಪಾದನೆಯ ಗುಣಮಟ್ಟ ಮುಂತಾದ ವಿಷಯಗಳಲ್ಲಿ ಕೃಷಿ ಮತ್ತು ಕೈಗಾರಿಕಾ ಘಟಕಗಳ ನಡುವೆ ಸೃಜನಶೀಲ ಪೈಪೋಟಿ ಇರಬೇಕು. ಒಳ್ಳೆಯ ಫಲಿತಾಂಶಗಳನ್ನು ಸೃಷ್ಟಿಸಿದವರಿಗೆ ಉತ್ತೇಜನ ಇರಬೇಕು.

ಬೆಳವಣಿಗೆ ಎಂಬುದು ಆರ್ಥಿಕತೆಯ ಅನಿವಾರ್ಯ ಗುರಿಯಾಗಿರಬಾರದು. ಎಲ್ಲರ ಮೂಲಭೂತ ಅಗತ್ಯಗಳನ್ನು ಪೂರೈಸುವುದು, ಸಾಧ್ಯವಿದ್ದಲ್ಲಿ ಸಣ್ಣಪುಟ್ಟ ಸೌಕರ್ಯಗಳನ್ನು ಒದಗಿಸುವುದು, ಈಗಾಗಲೇ ಉಂಟುಮಾಡಿರುವ ಪರಿಸರ ಹಾನಿಯನ್ನು ಸರಿಪಡಿಸುವುದಕ್ಕೆ ಬೇಕಾದ ಪರಿಕರಗಳನ್ನು ಉತ್ಪಾದಿಸುವುದು ಮಾತ್ರವೇ ಗುರಿಯಾಗಿರಬೇಕು. ಇದಕ್ಕೂ ಹೆಚ್ಚಿನ ಆರ್ಥಿಕ ಚಟುವಟಿಕೆ ಅನಗತ್ಯ ಮಾತ್ರವಲ್ಲ, ಅನಪೇಕ್ಷಣೀಯ ಕೂಡ.

ನಿರ್ದಿಷ್ಟವಾಗಿ ಸಾಗಾಣಿಕೆ ಮತ್ತು ಜಾಹಿರಾತಿಗೆ ಸಂಬಂಧಿಸಿದಂತೆ ಅನಗತ್ಯ ಚಟುವಟಿಕೆಯನ್ನು ತಡೆಯುವುದು ಸಾಧ್ಯವಾಗಬೇಕು. ತಮ್ಮ ಹಲವಾರು ಮೂಲಭೂತ ಅಗತ್ಯಗಳನ್ನು ತಾವೇ ಪೂರೈಸಿಕೊಳ್ಳಬಲ್ಲ ಸ್ವಯಂಪೂರ್ಣ ಹಳ್ಳಿಗಳು ರಾಷ್ಟ್ರದ ಆರ್ಥಿಕತೆಯ ತಳಹದಿಯಾಗಬೇಕು. ಹತ್ತಿರದ ನಗರ ಹಾಗೂ ಪಟ್ಟಣಗಳ ಆಹಾರದ ಅಗತ್ಯದ ಬಹುಪಾಲನ್ನು ಈ ಹಳ್ಳಿಗಳು ಪೂರೈಸುವಂತಿರಬೇಕು. ಹಾಗಾದಾಗ ಮೂಲಭೂತ ಅಗತ್ಯ ವಸ್ತುಗಳ ಸಾಗಾಣಿಕಾ ವೆಚ್ಚದ ಬಹುಪಾಲನ್ನು ಕಡಿಮೆ ಮಾಡಬಹುದು.

ಈಗ ಚಾಲ್ತಿಯಲ್ಲಿರುವ ವಿತರಣಾ ವಿಧಾನವು ಹಣವನ್ನು ಒಬ್ಬರ ಜೇಬಿನಿಂದ ಇನ್ನೊಬ್ಬರ ಜೇಬಿಗೆ ವರ್ಗಾಯಿಸುವುದಕ್ಕಾಗಿ ಗುಮಾಸ್ತರ ಹಾಗೂ ದಲ್ಲಾಳಿಗಳ ಒಂದು ದೊಡ್ಡ ದಂಡನ್ನು, ಸಂಚಾರಿ ಮಾರಾಟಗಾರರನ್ನು, ಅಂಗಡಿಯವರನ್ನು, ಜಾಹಿರಾತುದಾರರನ್ನು ಹೀಗೆ ಇನ್ನು ಯಾರ್‍ಯಾರನ್ನೋ ಬಳಸಿಕೊಳ್ಳುವ ಅಗಾಧವಾದ ವ್ಯರ್ಥ ಖರ್ಚಿನ ವ್ಯವಸ್ಥೆಯಾಗಿದೆ ಎಂಬುದಾಗಿ ವಿಲಿಯಂ ಮಾರಿಸ್ ಬರೆಯುತ್ತಾರೆ. ಈ ವ್ಯರ್ಥವಾದ ಹೊರೆಯನ್ನು ಹಲವರು ಗುರುತಿಸಿದ್ದಾರೆ. ಆದರೆ ಅದನ್ನು ನಿಯಂತ್ರಿಸುವುದು ಮಾತ್ರ ಸಾಧ್ಯವಾಗಿಲ್ಲ. ಆದರೆ ಬಹುಪಾಲು ಉತ್ಪಾದನೆಯು ಮೂಲಭೂತ ಅಗತ್ಯಗಳ ಪೂರೈಕೆಗೆ ಸೀಮಿತಗೊಂಡಿದ್ದಾಗ, ಮೂಲಭೂತ ಅಗತ್ಯ ವಸ್ತುಗಳು ಸ್ಥಳೀಯವಾಗಿ ಉತ್ಪಾದಿಸಲ್ಪಟ್ಟಾಗ ಈ ಉಳಿತಾಯ ಮಾಡುವುದು ನಿಜಕ್ಕೂ ಸಾಧ್ಯ. ಈ ವ್ಯವಸ್ಥೆಯಲ್ಲಿಯೂ ಸಹ ಬೃಹತ್ ಪ್ರಮಾಣದ ಭಾರೀ ಕೈಗಾರಿಕೆಗಳು ದೂರ ದೂರದ ಸ್ಥಳಗಳ ನಡುವೆ ವ್ಯಾಪಾರ ವಹಿವಾಟು ಇರುವುದೇ ಇಲ್ಲವೆಂದಲ್ಲ. ಆದರೆ ಅದು ಬಹಳ ಕಡಿಮೆ ಪ್ರಮಾಣದ್ದಾಗಿರುತ್ತದೆ.

ಬಹುತೇಕ ಸ್ವಾವಲಂಬಿ ಆರ್ಥಿಕತೆಗಳಲ್ಲಿರುವಂತೆ ಉತ್ಪಾದಕರು ಮತ್ತು ಬಳಕೆದಾರರು ಪರಸ್ಪರ ಪರಿಚಯವುಳ್ಳವರಾಗಿದ್ದಾಗ ಬಹಳಷ್ಟು

ಉತ್ಪಾದನೆಗಳಿಗೆ ಪ್ರಚಾರದ ಅಗತ್ಯವೇ ಇರುವುದಿಲ್ಲ. ಹಾಗಾಗಿ ಪ್ರಚಾರ ಮತ್ತು ಮಾರಾಟದ ತಂತ್ರಗಳನ್ನು ಪುನರ್ವ್ಯಾಖ್ಯಾನಿಸುವ ಅಗತ್ಯ ಬಹಳವಾಗಿಯೇ ಇದೆ.

ಉತ್ತಮ ಮಾರಾಟಗಾರಿಕೆ ಎಂದರೆ ಏನು ಎಂಬುದನ್ನು ಪುನರವಲೋಕಿಸುವುದು ಬಹಳ ಮುಖ್ಯ. ಅನುಮಾನಾಸ್ಪದ ಉಪಯುಕ್ತತೆಯ ಉತ್ಪಾದನೆಗಳನ್ನು ಮಾರಾಟ ಮಾಡುವುದನ್ನೂ ಸಹ ಒಳ್ಳೆಯ ಮಾರಾಟಗಾರಿಕೆ ಎಂದು ಪರಿಗಣಿಸುವಂಥ ಸ್ಥಿತಿ ಈಗ ನಿರ್ಮಾಣವಾಗಿದೆ. 'ಎಲ್ಲಿ ನಿಜವಾದ ಅಗತ್ಯವಿದೆಯೋ ಅಲ್ಲಿಗೆ ಉತ್ತಮವಾದ ವಸ್ತುಗಳನ್ನು ತಲುಪಿಸುವುದೇ ನಿಜವಾದ ಮಾರಾಟಗಾರಿಕೆ' ಎಂಬುದಾಗಿ ಮಾರಾಟಗಾರಿಕೆಗೆ ಹೊಸ ವ್ಯಾಖ್ಯಾನ ಮಾಡಬೇಕಾದ ಅಗತ್ಯ ಈಗ ಉಂಟಾಗಿದೆ. ಮಾರಾಟಗಾರಿಕೆಯ ಬಗೆಗಿನ ಇಂದಿನ ವಿಕೃತ ವ್ಯಾಖ್ಯಾನ ಮತ್ತು ಜಾಹೀರಾತು ನಿಜಕ್ಕೂ ಅಗತ್ಯವಿರದ ನಿರುಪಯುಕ್ತ ವಸ್ತುಗಳನ್ನು ಬಳಕೆದಾರರ ಮೇಲೆ ಹೇರುತ್ತಿದೆ. ಇದು ಪರಿಸರಕ್ಕೆ ಕೆಡುಕನ್ನುಂಟು ಮಾಡುತ್ತದೆ. ಹಾಗೆಯೇ ಪ್ರತಿಯೊಬ್ಬರ ಮೂಲಭೂತ ಅಗತ್ಯವನ್ನು ಪೂರೈಸಬೇಕೆಂಬ ಉದ್ದೇಶಕ್ಕೆ ಅಡ್ಡಿಯಾಗುತ್ತದೆ. ನಿಜವಾದ ಅಗತ್ಯಗಳನ್ನು ಪೂರೈಸುವ ವಸ್ತುಗಳ ಬಗೆಗೆ ಓದಲು ಸುಲಭವಾದ, ಕೇಳಲು ಹಿತವಾಗಿರುವ, ನೋಡಲು ಖುಷಿಯಾಗುವ ಖಚಿತವಾದ ಯುಕ್ತವಾದ ಮಾಹಿತಿಯನ್ನು ಒದಗಿಸುವ ನ್ಯಾಯಯುತವಾದ ಹೊಣೆಗಾರಿಕೆ ಜಾಹೀರಾತಿನ ಮೇಲೆ ಇದೆ. ಈ ಎಲ್ಲೆಗಳನ್ನು ಮೀರಿದಾಗ, ನಿರ್ದಿಷ್ಟವಾಗಿ ಹೇಳುವುದಾದರೆ ಕಡಿಮೆ ಉಪಯುಕ್ತತೆಯ ಅಥವಾ ಕೆಡುಕನ್ನೇ ಉಂಟು ಮಾಡುವಂತಹ ವಸ್ತುಗಳನ್ನು ಸಹ ಅಪೇಕ್ಷಣೀಯ ಜೀವನ ವಿಧಾನದ ಭಾಗವೆಂದು ನಂಬಿಸುವುದಕ್ಕಾಗಿ ಜೀವನ ವಿಧಾನದ ಸಂಕೇತ–ರೂಪಕಗಳನ್ನು ಬಳಸಿಕೊಂಡಾಗ ಈ ಜಾಹೀರಾತಿನ ಯಶಸ್ಸೇ ಸಾಮಾಜಿಕ ಬದುಕಿನಲ್ಲಿ ಕೆಡುಕನ್ನುಂಟು ಮಾಡುವಂಥದಾಗಿರುತ್ತದೆ. ಏಕೆಂದರೆ ಇದು ವ್ಯರ್ಥ ಸಮೃದ್ಧಿಯನ್ನು ಉತ್ತೇಜಿಸುತ್ತದೆ.

ಸಾಧ್ಯವಿರುವಷ್ಟು ಮಟ್ಟಿಗೆ, ಉತ್ಪಾದನೆಯ ಪ್ರಮಾಣವನ್ನು ಸಣ್ಣ ಮತ್ತು ಕುಟೀರ ಕೈಗಾರಿಕಗಳ ಉತ್ಪಾದನಾ ಮಟ್ಟವನ್ನು ಪರಿಗಣಿಸಿಯೇ ತೀರ್ಮಾನಿಸಬೇಕು. ನಾನು ಮೊದಲೇ ಸೂಚಿಸಿದಂತೆ ಕೆಲವು ಕ್ಷೇತ್ರಗಳಲ್ಲಿ ಬೃಹತ್ ಪ್ರಮಾಣದ ಉತ್ಪಾದನೆಗೆ ಸಮ್ಮತಿ ಇದ್ದರೂ ಸಹ ನಮ್ಮ ಒಲವು ಸಣ್ಣ ಕೈಗಾರಿಕೆಗಳ ಕಡೆಗೆ ಇರಬೇಕು. ಹಲವು ಮೂಲಭೂತ ಅಗತ್ಯಗಳನ್ನು ಪೂರೈಸುವ ವಿಚಾರದಲ್ಲಿ ಸಣ್ಣ ಪ್ರಮಾಣದ ಉತ್ಪಾದನೆಯು ಹೆಚ್ಚು ವರ್ಣ ವೈವಿಧ್ಯತೆಯನ್ನು, ಹೆಚ್ಚಿನ ಸೃಜನಶೀಲತೆಯನ್ನು, ಕೌಶಲ್ಯಗಳ ಹೆಚ್ಚಿನ ಹೊಂದಾಣಿಕೆಯನ್ನು, ಹೆಚ್ಚಿನ ಉದ್ಯೋಗ ಸೃಷ್ಟಿಯನ್ನು, ನಿರ್ದಿಷ್ಟ ಅಗತ್ಯಗಳನ್ನು ಪೂರೈಸುವುದರಲ್ಲಿ ಹೆಚ್ಚಿನ ಸಾಧ್ಯತೆಯನ್ನು, ಹೆಚ್ಚಿನ ಮಟ್ಟದ ಕಾಯಕ ತೃಪ್ತಿಯನ್ನು, ವ್ಯರ್ಥತೆ ಮತ್ತು ಪಾರಿಸರಿಕ ನಾಶವನ್ನು ಕಡಿಮೆ ಮಾಡುವುದರಲ್ಲಿ ಸಾಮುದಾಯಿಕ ಸಂಬಂಧಗಳನ್ನು ಬಲಗೊಳಿಸುವುದರಲ್ಲಿ, ಮುದುಕರು ಮತ್ತು ಅಶಕ್ತರನ್ನು ಒಳಗೊಂಡಂತೆ ಲಭ್ಯವಿರುವ ಕೌಶಲವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದರಲ್ಲಿ ಹೆಚ್ಚು ಸಮರ್ಥವಾಗಿದೆ ಎಂದು ಹೇಳಬಹುದು. ಅದೇನೇ ಇದ್ದರೂ, ಸಣ್ಣ ಪ್ರಮಾಣದ ಉತ್ಪಾದಕರೂ ಸಹ ಬಳಕೆದಾರರಿಗೆ ಮತ್ತು ಪರಿಸರ ಚಳುವಳಿಗಳಿಗೆ ಜವಾಬ್ದಾರರಾಗಿ ಉಳಿಯಬೇಕು. ಕಾರ್ಮಿಕ ಕಲ್ಯಾಣದ ಕಾನೂನುಗಳಿಗೆ ಬದ್ಧರಾಗಿರಬೇಕು.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಪರ್ಯಾಯ ಆರ್ಥಿಕತೆಯ ನಮ್ಮ ಕಾಣ್ಕೆಯು ಬಹುಪಾಲು ಸ್ವಯಂಪೂರ್ಣ ಹಳ್ಳಿಗಳನ್ನು ಆಧರಿಸಿರುವಂಥದು. ಈ ಹಳ್ಳಿಗಳು ಸಣ್ಣ ರೈತರು ಮತ್ತು ನೆರೆಯ ಸಣ್ಣಪುಟ್ಟ ಊರುಗಳ, ಗ್ರಾಮ–ಪಟ್ಟಣ ಮಿಶ್ರ ಪ್ರದೇಶಗಳ ಕೈಗಾರಿಕೆಗಳಿಂದ ಆಧರಿಸಲ್ಪಟ್ಟ ಕುಶಲ ಕರ್ಮಿಗಳಿರುವ ಪ್ರದೇಶ. ಇಲ್ಲಿ ಪ್ರತಿಯೊಬ್ಬ ಹಳ್ಳಿಗರೂ ಸ್ವಲ್ಪವಾದರೂ ಸಂಪನ್ಮೂಲದ ಆಧಾರವುಳ್ಳವರಾಗಿರುತ್ತಾರೆ. ಮತ್ತು ಬಹಳಮಟ್ಟಿಗೆ ಸಮಾನತೆಯನ್ನು ಹೊಂದಿರುತ್ತಾರೆ. ಬಹುಶಃ ಅತಿ ಕೆಳಗಿನ ಶೇ.೨೦ ಮತ್ತು ಅತ್ಯುನ್ನತ ಶೇ. ೨೦ರಷ್ಟು ಜನರ ನಡುವಿನ ಆದಾಯದ ಅನುಪಾತ ೧:೨ ಕ್ಕಿಂತ ಹೆಚ್ಚಿಗೆ ಇರುವುದಿಲ್ಲ ಅಥವಾ ಅದಕ್ಕಿಂತ ಕಡಿಮೆ ಇರಬಹುದು. ಈ ಪರ್ಯಾಯ ಆರ್ಥಿಕತೆಯಲ್ಲಿ ದೂರದ ಊರುಗಳ ನಡುವಿನ ವ್ಯಾಪಾರ ಮತ್ತು ಭಾರೀ ಕೈಗಾರಿಕೆಗಳೂ ಇರುತ್ತವೆ. ಆದರೆ ಅವುಗಳ ಪ್ರಮಾಣ ಅತ್ಯಂತ ಕಡಿಮೆಯಾಗಿರುತ್ತದೆ. ಕೆಲವು ಸರಳ ಸೌಲಭ್ಯಗಳನ್ನು ಒಳಗೊಂಡಂತೆ ಪ್ರತಿಯೊಬ್ಬರ ಮೂಲಭೂತ ಅಗತ್ಯಗಳನ್ನು ಒದಗಿಸುವುದೇ ಈ ಪರ್ಯಾಯ ಆರ್ಥಿಕತೆಯ ಮೂಲೋದ್ದೇಶವಾಗಿರುತ್ತದೆ. ನಮ್ಮ ಪ್ರಸ್ತುತ ಆರ್ಥಿಕತೆಗೆ ಹೋಲಿಸಿದರೆ ಈ ಪರ್ಯಾಯ ಆರ್ಥಿಕತೆಯು ಹೆಚ್ಚು ಸೃಜನಾತ್ಮಕವಾಗಿರುತ್ತದೆ. ಉದ್ಯೋಗದಲ್ಲಿಯ ತೃಪ್ತಿಯನ್ನು ತಂದುಕೊಡುವುದರಲ್ಲಿ ಹೆಚ್ಚು ಸಮರ್ಥವಾಗಿರುತ್ತದೆ. ಪರಿಸರ ವಿನಾಶವನ್ನು ತಡೆಯಲು ಶಕ್ತವಾಗಿರುತ್ತದೆ. ಜಾಗತಿಕ ಪರಿಸರ ಸಮಿತಿಯು ೧೯೯೧ರಲ್ಲಿ ಹಸಿರು ಮನೆ ಅನಿಲಗಳ ನಿಯಂತ್ರಣದ ವಿಚಾರದಲ್ಲಿ ಸೂಚಿಸಿರುವ ಕಷ್ಟಸಾಧ್ಯ ಗುರಿಯನ್ನು ಸಾಧಿಸಬಲ್ಲ ಸಾಮರ್ಥ್ಯವೂ ಈ ಪರ್ಯಾಯ ಆರ್ಥಿಕತೆಗೆ ಇರುತ್ತದೆ. ಪ್ರತಿಯೊಬ್ಬರ ಮೂಲಭೂತ ಅಗತ್ಯಗಳನ್ನು ಪೂರೈಸಿದರೂ ಸಹ ಈ ಪರ್ಯಾಯ ಆರ್ಥಿಕತೆಗೆ, ಕಠಿಣವೆನಿಸಿರುವ ಪರಿಸರ ನಾಶವನ್ನು ತಡೆಯುವುದು ಸಾಧ್ಯವಾಗುತ್ತದೆ. ಏಕೆಂದರೆ ಇಲ್ಲಿ ಉತ್ಪಾದನಾ ಚಟುವಟಿಕೆ ಕಲ್ಲಿದ್ದಲಿನಂತಹ ಇಂಧನವನ್ನು ಅತಿ ಕನಿಷ್ಠ ಮಟ್ಟದಲ್ಲಿ ಬಳಸುವ ಗ್ರಾಮ ಘಟಕಗಳಿಗೆ ಸೀಮಿತವಾಗಿರುತ್ತದೆ. ವಿಕೇಂದ್ರೀಕರಿಸಲ್ಪಟ್ಟ ಶಕ್ತಿಯ ಮೂಲಗಳ ಬಳಕೆಯ ವ್ಯವಸ್ಥೆಯಿರುತ್ತದೆ.

(ಕನ್ನಡಕ್ಕೆ: **ಎಂ. ರಾಜು**)

(ಕೃಪೆ: **ಜನತಾ,** ಮಾರ್ಚ್ ೧೬, ೨೦೧೮)

---

**೯ನೇ ಪುಟದಿಂದ)**

ಇವೆಲ್ಲವೂ ಅಂಬೇಡ್ಕರ್‌ರವರನ್ನು ಅತಿಯಾಗಿ ಸರಳೀಕರಿಸಿದ ಸಮಸ್ಯೆಗಳಿಂದ ಉಂಟಾಗುವ ಹಲವು ಛಿದ್ರಗೊಂಡ ಚಿತ್ರಗಳು. ಇದರ ಆಳಕ್ಕೆ ಇಳಿದಂತೆಲ್ಲಾ ಇನ್ನೂ ಜಟಿಲ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಈ ನೆಲದಲ್ಲಿ ಜಾತಿ ಜೀವಂತವಾಗಿರುವವರೆಗೂ ಅಂಬೇಡ್ಕರ್ ನಮಗೆ ಬೇಕೇ ಬೇಕು. ಆದರೆ ದಲಿತರು ಭಾವನಾತ್ಮಕವಾಗಿ ಜಪಿಸುವ ಅದೇ ಹಳೆಯ ಅಂಬೇಡ್ಕರ್‌ರವರ ಪುನರಾವತಾರವಾಗಿ ಅಲ್ಲ..... ಅರುಂಧತಿ ರಾಯ್‌ಗೆ ಬೇಕಾಗಿರುವಂತೆ ಇದೀಗ, ತುರ್ತಾಗಿಯಂತೂ ಅಲ್ಲವೇ ಅಲ್ಲ. ಅಂಬೇಡ್ಕರ್‌ರವರ ಕಾಲಕ್ಕಿಂತ ಹೆಚ್ಚು ಜಟಿಲ ಹಾಗೂ ವಿಷಮಯವಾಗಿರುವ ಸಮಕಾಲೀನ ಜಾತೀಯ ಸಮಸ್ಯೆಗಳೊಡನೆ ಸಂಘರ್ಷಿಸಲು ಸೂಕ್ತವಾದ ಅಂಬೇಡ್ಕರ್‌ರವರನ್ನು ನಾವು ರೂಪಿಸಿಕೊಳ್ಳಬೇಕಿದೆ, ಸೃಷ್ಟಿಸಿಕೊಳ್ಳಬೇಕಿದೆ.

(ಕನ್ನಡಕ್ಕೆ: **ಬಿ.ಎಸ್. ದಿವಾಕರ್**)

---

ಪ್ರಿಯ ಓದುಗರೇ,

**ಹೊಸ ಮನುಷ್ಯ' ಪತ್ರಿಕೆಗೆ ಚಂದಾದಾರರಾಗ ಬಯಸುವವರು ಸಂಪಾದಕರು, ಹೊಸ ಮನುಷ್ಯ–ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ(IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಕರೆಂಟ್ ಅಕೌಂಟ್ ಸಂಖ್ಯೆ: 64110358330 ಇಲ್ಲಿಗೆ ಚಂದಾ ಮೊತ್ತವನ್ನು ವರ್ಗಾಯಿಸಿ ಪತ್ರ ಮುಖೇನ ಅಥವಾ ದೂರವಾಣಿ ಸಂದೇಶದ ಮೂಲಕ ತಮ್ಮ ವಿಳಾಸವನ್ನು ತಪ್ಪದೆ ಸಂಪಾದಕರಿಗೆ ತಿಳಿಸಬೇಕು.**

**ಚಂದಾ ವಿವರ, ದೂರವಾಣಿ ಸಂಖ್ಯೆಗಳು, ಈ ಮೇಲ್ ವಿಳಾಸ ಹಾಗೂ ಅಂಚೆ ವಿಳಾಸ ಪತ್ರಿಕೆಯ ಮುಖಪುಟದಲ್ಲಿದೆ.**

**ಪತ್ರಿಕೆಯಲ್ಲಿನ ಲೇಖನಗಳ ಬಗ್ಗೆ ಅಭಿಪ್ರಾಯ/ಪ್ರತಿಕ್ರಿಯೆಗಳನ್ನು ಬರೆಯ ಬಯಸುವವರು, ಅವನ್ನು ಸಂಕ್ಷಿಪ್ತವಾಗಿ ಬರೆದು ಆಯಾ ತಿಂಗಳ ೨೦ರೊಳಗೆ ನಮಗೆ ತಲುಪುವಂತೆ ಕಳಿಸಬೇಕು. ಈ ಮೇಲ್ ಮಾಡುವುದಾದರೆ ಅದು ನುಡಿ/ಬರಹದಲ್ಲಿ ಇರಬೇಕು.–ಸಂ.**

**ಸಾಹಿತ್ಯ-ಸಂಸ್ಕೃತಿ ಇತ್ಯಾದಿ**

# ಎಸ್. ಮಂಜುನಾಥರ ಮೂರು ಪದ್ಯಗಳು



**ಸಾಮಾನ್ಯವಾಗಿ ವಿಶೇಷ ಸಂಚಿಕೆಯ ಹೊರತಾಗಿ ಕವನಗಳನ್ನು ಪ್ರಕಟಿಸದಿರುವ ಪತ್ರಿಕೆ ಈ ಸಂಚಿಕೆಯಲ್ಲಿ ಇಂದಿನ ರಾಜಕೀಯ ಸಂದರ್ಭ ಸೃಷ್ಟಿಸಿರುವ ಕಟು ವಾಸ್ತವದ ಸವಾಲುಗಳಿಗೆ ಸ್ಪಂದಿಸಿರುವ ಕನ್ನಡದ ಪ್ರತಿಭಾಶಾಲಿ ಕವಿಗಳಲ್ಲೊಬ್ಬರಾದ ಎಸ್. ಮಂಜುನಾಥ ಅವರ ಮೂರು ಪದ್ಯಗಳನ್ನು ಒಂದು ಅಪವಾದವೆಂಬಂತೆ ಮಾತ್ರ ಇಲ್ಲಿ ಪ್ರಕಟಿಸುತ್ತಿದೆ. ಹಾಗಾಗಿ, ಪತ್ರಿಕೆ ಆಹ್ವಾನಿಸದ ಹೊರತು ಯಾರೂ ಪದ್ಯಗಳನ್ನು ಕಳಿಸಬಾರದೆಂದು ಕೋರುವೆ-ಸಂ**

## ೧. ಬೊಗಸೆ ಜಲ ಒಂದು ಬೀಜಕ್ಕಾಗಿ

ನಿಂಬೆ! ಸೌತೆ! ಸೊಪ್ಪು! ತೊಂಡೇಕಾಯಿ!

ಗಾರಾದ ನೆಲದಿಂದ ಬಂದಿರುವಿರೇ
ಮುಖ ತೋರಲೆಂಬಂತೆ ಕಡೇ ಬಾರಿ
ಮುನಿದು ಮರಳಿರಲು ಗಂಗವ್ವತಾಯಿ

ಆ ತಾಯಿ ಮುನಿದರೂ ಮುನಿಯಲಾರದೀ ತಾಯಿ
ಬತ್ತಿದೆದೆ ಬಸಿದು
ಉಣಿಸಿದ ಕೂಸುಗಳಂತೆ
ಕಂಡಿರುವಿರೆಲ್ಲ ಕಾಯಿಪಲ್ಲೆಗಳೇ
ಇನ್ನು ಬಿತ್ತಗಳೆಲ್ಲ ಸುರುಟಿಹೋಗುವುವೇ
ಬೊಗಸೆ ಜಲ ಒಂದು ಬೀಜಕ್ಕಾಗಿ ಮನುಕುಲ
ಬೆಂತರ ಅಲೆಯುವುದೆ ಖಂಡಾಂತರ
ಒಂದೇ ಸಮ ಎಲ್ಲವೂ ಮರುಭೂಮಿಯಾಗಿ
ಅಗೋ ಅಲ್ಲಿ ಬೆಟ್ಟ
ನಮ್ಮ ಜೀವದ ಜೀವ ನೋಟು ರಾಶಿ
ಹೊತ್ತಿ ಉರಿದಿದೆ ಧಗಧಗ
ಹೊಗೆ ಸುರುಳಿ ಸುತ್ತಿ

## ೨. ಅತಿ ಶ್ರೀಮಂತನ ಊಟದ ಮೇಜು



ಚಿತ್ರ: ಪಿ. ರವೀಂದ್ರನಾಥ್

ಕಮಲದ ಹೂವಂತೆ ಅರಳಿದೆ!
ನೀಳ ಕೋಮಲ ನಸುಗೆಂಪು
ದಳ ಚಾಚಿದೆ
ಲಕ್ಷ್ಮಿ ಅಲ್ಲೇ ಹುಟ್ಟಿ ಕಂಬವಾಗಿ ನಿಂತು
ಚಿನ್ನದ ನಾಣ್ಯ ಉದುರಿಸುವುದು
ರಂಗಸ್ಥಳ ಅದು
ಬೇಕೆಂದರೆ ಅವಳು ನರ್ತಿಸಲೂ

ಅದರ ಸುತ್ತ ಮರಾಳ
ಅ ಶ್ರೀ ಯವರ ಹೆಂಡತಿ ಮಕ್ಕ
ಮೊಮ್ಮಕ್ಕ ಪಿರ್ಕ
ಅನ್ನ ಬಿಟ್ಟು ಮತ್ತೆಲ್ಲ ಚಿನ್ನ
ತಿನ್ನುವ ಈ ಕೆಲಸ
ಕಳಪೆ ಅಸಹ್ಯ
ಯಾಕೆಂದರೆ ಭಿಕ್ಷುಕ
ನಾಯಿ ಕಾಗೆ ಎಲ್ಲಾ
ತಿನ್ನುವುದು
ಎಲ್ಲಾರು ಮಾಡುವುದ ಅದು ನೆನಪಿಸುವುದು

ಹಾಗಾಗಿ ಅದನ್ನು ಸುಶೀಲ
ಗೌರವಾನ್ವಿತ ಕ್ರಿಯೆಯಾಗಿ ಮಾರ್ಪಡಿಸಲು
ಕವಿ ಗವಯಿ ಕಲಾವಿದರ ಸೇವೆ
ಪಡೆಯಲಾಗಿದೆ

ಅವರು ನಂಬಿದ್ದನ್ನ ನೀವೂ ನಂಬಿದಿರೆ
ಮೇಜಿನ ಸುತ್ತ ನಿಂತು ಬಾಯಿ ಚಪ್ಪರಿಸುತ್ತ
ಉಗುಳು ನುಂಗುವ ಅವಕಾಶವಿದೆ!
ಅಲೆ ಅಲೆಯಾಗಿ ಆಕಾಂಕ್ಷಿಗಳ ಕ್ಯೂ
ಹಬ್ಬಿದೆ

ಅಂಚಿನಲ್ಲೇನದು ಗದ್ದಲ
ಘನತೆಯಿಲ್ಲದ ಜನತೆ!
ಅದರಾಚೆ ಮಾರಾಮಾರಿ
ಒಣ ಮೂಳೆಗಾಗಿ!
ಈಗ ಅ ಶ್ರೀ ಯವರ ಭೋಜನ ಮುಗಿದಿದೆ
ಇನ್ನು ತೆರೆದ ಸ್ಪರ್ಧೆ
ಶೇಷಕ್ಕಾಗಿ

ಸ್ಪರ್ಧಿಸುವುದೆ ಮುಖ್ಯ ಗೆಲುವಲ್ಲ!

## ೩. ಅಧಿಕಾರ

ನಿಯಮ ನಿಜವಾದರೂ
ನಿಯಾಮಕ ಅದನು ಮೀರಬಹುದು
ಹಾಗಾದರೆ ಈ ಬಿಳಿ ದಾಸವಾಳ ಗಿಡದಲ್ಲಿ
ಕೆಂಪು ಹೂ ಬಿಡಿಸಬಲ್ಲನೆ ಅವನು?
ಅವನಿಚ್ಛೆಯಿದ್ದರೆ-ಎಂದರು ಗುರು
ಬಿಳಿ ಹೂ ನಡುವೆಯೊಂದು ಕೆಂಪು ಹೂ ಕಂಗೊಳಿಸಿತ್ತು
ಮರುದಿನ

ದೇವರಿಗೆ ಮತ್ತು ಅವನ ಪ್ರಿಯ ಶಿಷ್ಯರಿಗಷ್ಟೇ
ಮೀಸಲಿದ್ದ ಈ ಅಧಿಕಾರ
ಜನಬೆಂಬಲವಿರುವವರಿಗೆಲ್ಲ ಇದೆ ಈಗ!

ಬಿಳಿಯನ್ನೇ ಕೆಂಪೆನಬಹುದು ನಾಯಕ
ಹೌದಣ್ಣಾ ಎಂದು ತಲೆದೂಗುವರು ಹಿಂಬಾಲಕರು
ಅಲ್ಲವೆಂದವರ ಮೇಲೆ ಕೆಂಡ ಕಾರುವರು
ಸಾಧ್ಯವಾದರೆ ಅವರ ರುಂಡ ಹಾರಿಸುವರು

ಶಾಸನ ಸಭೆಯಲ್ಲಿ ಆ ಠರಾವು ಪಾಸಾಗುವುದು
ಕನ್ನಡ ಮಾತನ್ನೆ ಹಾಗೆ ತಿದ್ದಲಾಗುವುದು

ಕೋರ್ಟು ಕಛೇರಿ ಅದನ್ನೇ ಮಾನ್ಯ ಮಾಡುವುದು
ವಿರೋಧಿಸಿದವರನು ಪೋಲೀಸು ನೋಡಿಕೊಂಬರು
ಹಣ ಹೆಣ್ಣು ಹೆಂಡ ನಾಗರವಿಷ
ಎಲ್ಲ ಬೆರೆತ ಬೆಂಕಿ ನೀರ
ಕುಡಿವವರ ನೋಡಿ ಶಿವನೇ ದಂಗಾದ!

## ಪುಸ್ತಕಾವಲೋಕನ

ಪು: ಸಪ್ತಕ್ರಾಂತಿ, ಕಾಂಚನ ಮುಕ್ತಿ ಇತ್ಯಾದಿ ಲೇ: ರಾಮಮನೋಹರ ಲೋಹಿಯಾ ಕನ್ನಡಕ್ಕೆ: ಹಸನ್ ನಯೀಂ ಸುರಕೋಡ ಪ್ರ: ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ(ರಿ), ಶಿವಮೊಗ್ಗ ಪು: ೨೫೬ ಬೆಲೆ: ರೂ; ೧೮೦/–

### ಜ್ಞಾನಿಯೊಬ್ಬನ ಮಾತುಗಳು



**ಲೋ**ಹಿಯಾ ಅವರ ಬರಹಗಳನ್ನು ವ್ಯವಸ್ಥಿತವಾಗಿ ಓದದಿರುವ ನನಗೆ ಈ ಕೃತಿಯಲ್ಲಿನ ಹತ್ತು ಅಪರೂಪದ ಲೇಖನಗಳನ್ನು ಓದುವುದು ನಿಜವಾಗಿ ಒಂದು ಶೋಧನೆಯ ಅನುಭವವನ್ನು ಕೊಟ್ಟಿತು. ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣವನ್ನು ಮತ್ತು ಅದನ್ನು ಪರೋಕ್ಷವಾಗಿ ಪ್ರಭಾವಿಸಿದ ವಿಶ್ವದ ರಾಜಕಾರಣವನ್ನು ಆತ್ಮೀಯವಾಗಿ ಬಲ್ಲ, ಖಚಿತವಾದ ನಂಬಿಕೆಗಳು ಸೂಕ್ಷ್ಮವಾದ ಚಿಂತನೆಯ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಪ್ರಬುದ್ಧವಾದ ಮನಸ್ಸಿನ ಒಬ್ಬ ಜ್ಞಾನಿಯ ಮಾತುಗಳನ್ನು ಕೇಳುತ್ತಾ ನಮ್ಮ ನೆನ್ನೆ ಮೊನ್ನೆಯ ಚರಿತ್ರೆ ಹಾಗೂ ಇಂದಿನ ಸಂದಿಗ್ಧತೆಗಳನ್ನು ಅರ್ಥಮಾಡಿಕೊಳ್ಳುವ ಅನುಭವ ಇದಾಗಿತ್ತು.

ಈ ಬರಹಗಳಲ್ಲಿ ಲೋಹಿಯಾ ಒಬ್ಬ ಸಿದ್ಧಾಂತಿಯಲ್ಲ; ಅವರ ನಿಷ್ಠುರತೆ ಹಾಗೂ ವ್ಯಗ್ರತೆಗಳ ಪರಿಚಯ ಮಾತ್ರವಿರುವವರಿಗೆ ಈ ಬರಹಗಳಲ್ಲಿ ಎದ್ದು ಕಾಣುವ ತಾಳ್ಮೆ, ಮನುಷ್ಯ ಸ್ವಭಾವದ ದೌರ್ಬಲ್ಯಗಳ ಬಗೆಗೆ ಸಹನೆ ಹಾಗೂ ಅಮೂರ್ತ ಆದರ್ಶಗಳು ಮೂರ್ತ ಕ್ರಿಯೆಯ ಸ್ವರೂಪವನ್ನು ಪಡೆಯುವಾಗ ಅನಿವಾರ್ಯವಾಗಿಯೇ ಉಂಟಾಗುವ ನ್ಯೂನತೆಗಳ ಬಗ್ಗೆ ಇರುವ ತಿಳುವಳಿಕೆ–ಇವುಗಳು ಅಚ್ಚರಿಗೊಳಿಸುತ್ತವೆ. ತಮ್ಮ ಭಾಷಣವನ್ನು ಕೇಳುತ್ತಾ ಆಕಳಿಸುವ, ತೂಕಡಿಸುವ ಯುವ ಕಾರ್ಯಕರ್ತರಿಗೆ ಬಹುಶಃ ಹಸಿವಿನ ಪರಿಣಾಮದಿಂದ ಹೀಗೆ ಆಗಿರಬಹುದು ಎಂದು ಲೋಹಿಯಾ ಅಂದುಕೊಳ್ಳುವುದು ಒಂದು ಲಘು ಉದಾಹರಣೆ. ಯಂತ್ರಗಳನ್ನು, ಯಂತ್ರನಾಗರಿಕತೆಯನ್ನು ಸೈದ್ಧಾಂತಿಕವಾದ ಉಗ್ರನಿಷ್ಠೆಯಿಂದ ತಿರಸ್ಕರಿಸುವವರು, ಈಗಲೂ ತಂತ್ರಜ್ಞಾನವೇ ಇಲ್ಲದಂಥ ಸಮಾಜವೊಂದರ ಕನಸು ಕಾಣುವವರು ಇವರ ಬಗ್ಗೆ ಕೂಡ ತಿರಸ್ಕಾರ, ಕ್ರೋಧಗಳಿಲ್ಲ; ಬದಲಿಗೆ, ಹದವಾದ ವ್ಯಂಗ್ಯ ಮಾತ್ರವಿದೆ. ನಮ್ಮನ್ನು ಆಳುತ್ತಿರುವ ಎರಡನೇ ನಂಬರ್‌ನ ನಕಲಿ ರಾಜರ ಒಂದು rogues gallery ಯನ್ನೇ ಲೋಹಿಯಾ ಇಲ್ಲಿ ಚಿತ್ರಿಸುತ್ತಾರೆ.

ಹೀಗೆಂದ ಮಾತ್ರಕ್ಕೆ ಅವರ ಗಾಢವಾದ ಕಾಳಜಿಗಳು ಈ ಬರಹಗಳಲ್ಲಿ ಇಲ್ಲವೆಂದಲ್ಲ. ನಮ್ಮ ಸನ್ನಿವೇಶದಲ್ಲಿ ಚರ್ಚಿಸಬೇಕಾದ ಎಲ್ಲ ಪ್ರಧಾನ ಪ್ರಶ್ನೆಗಳು ಇಲ್ಲಿವೆ. ಮುಖ್ಯವಾಗಿ ನಮ್ಮ ಆರ್ಥಿಕ ಅಸಮಾನತೆಯ ವಿಪರೀತ ತಾರತಮ್ಯಗಳು, ಎರಡಾಣೆ ಸಂಪಾದನೆಯೂ ಇಲ್ಲದೆ ಕೋಟಿಗಟ್ಟಲೇ ಬಡವರ ವಿರುದ್ಧ ದಿನವಹಿ ಲಕ್ಷಾನುಗಟ್ಟಲೇ ಸಂಪಾದಿಸುವ ಕೆಲವೇ ಜನ ಶ್ರೀಮಂತರು. ಆರ್ಥಿಕತೆಯ ಈ ಅಸಹಜ ತಾರತಮ್ಯವೇ ಸಮಾಜದ ಬಹುಪಾಲು ರೋಗಗಳಿಗೆ ಕಾರಣವೆಂದು ಲೋಹಿಯಾ ವಾದಿಸುತ್ತಾರೆ. (ನಾನು ಈ ಲೇಖನ ಬರೆಯುತ್ತಿರುವಾಗ ಇಂದಿನ ಪತ್ರಿಕೆಗಳ ಮುಖಪುಟದಲ್ಲಿ ಮುಖೇಶ್ ಅಂಬಾನಿ ಪ್ರತಿನಿತ್ಯ ೧೧೪೦ ಕೋಟಿ ರೂಪಾಯಿಯ ವ್ಯವಹಾರ ಮಾಡಿದ್ದಾರೆಂದು ಪ್ರಶಂಸೆಯ ವರದಿಗಳಿವೆ) ಲೋಹಿಯ ಅವರು ಕರಾರುವಾಕ್ಕಾಗಿ ಐವತ್ತು–ಅರವತ್ತರ ದಶಕಗಳಲ್ಲಿಯೇ ವಾದಿಸಿದ ಹಾಗೆ ಈ ತಾರತಮ್ಯಗಳು ಇನ್ನೂ ಹೆಚ್ಚುತ್ತವೆ; ಅಲ್ಲದೆ ಮುಂದುವರೆದ ರಾಷ್ಟ್ರಗಳ ಭೌತಿಕವಾದ ಪ್ರಗತಿ ಹಾಗೂ ಶ್ರೀಮಂತಿಕೆಗಳು ಇತರ ರಾಷ್ಟ್ರಗಳ ಶಿಕ್ಷಿತ ಮುಂಚೂಣಿ ವರ್ಗಗಳಲ್ಲಿ ಭ್ರಮೆಗಳನ್ನು ಹುಟ್ಟಿಸುತ್ತವೆ. ಹಸಿವು ಬಡತನ ಅಸಹಾಯಕತೆಗಳಿಂದ ಬಸವಳಿದು ಹೋದ ಬಡವರಿಗೆ ಕೂಡ ಬೇಕಾಗಿರುವುದು ಸಹಾಯಧನ, ಸುಧಾರಣಾವಾದಿ ರಾಜಕೀಯಗಳೇ ಹೊರತು ಸಂಪೂರ್ಣ ಸಮಾನತೆಯನ್ನು ತರಬಯಸುವ ಉಗ್ರಪಂಥವಲ್ಲ. ಇದರ ಜೊತೆಗೆ ಸಾವಿರಾರು ಉಪಜಾತಿಗಳನ್ನು ಹೊಂದಿದ ನಮ್ಮ ಜಾತಿ ವ್ಯವಸ್ಥೆಯು ಇದ್ದುದರಲ್ಲೇ ಸಂತೃಪ್ತರಾಗಿಬಿಡುವ, ಗುಲಾಮಗಿರಿಯನ್ನು ಒಪ್ಪಿಕೊಂಡು ಬಿಡುವ ಮನಸ್ಥಿತಿಯನ್ನು ನಿರ್ಮಿಸಿಬಿಟ್ಟಿದೆ. ಈ ಸಂಗತಿಗಳನ್ನೆಲ್ಲ ಇಲ್ಲಿ ಲೋಹಿಯಾ ವಿಷಾದದಿಂದ ಗಮನಿಸುತ್ತಾ ಹೋಗುತ್ತಾರೆ.

ಈ ಬರಹಗಳಲ್ಲಿ ಲೋಹಿಯಾ ಮತ್ತೆ ಮತ್ತೆ ಹೇಳುವಂತೆ ಭಾರತದಲ್ಲಿ ಕಳೆದ ೧೫೦೦ ವರ್ಷಗಳಲ್ಲಿ ಒಂದೇ ಒಂದು ಕ್ರಾಂತಿ ನಡೆದಿಲ್ಲ. ಸಾಂಘಿಕವಾದ ಪ್ರತಿಭಟನೆ ನಡೆದಿಲ್ಲ. ನಮ್ಮ ವೈಚಾರಿಕತೆಯು ಅಮೂರ್ತಗಳ ಹಂಬಲದಿಂದಾಗಿ ನಿರ್ವೀರ್ಯವಾಗಿದೆ. ಲೋಹಿಯಾ ಅವರ ಪ್ರಕಾರ ಭಾರತದಲ್ಲಿ ನಡೆದ ಪ್ರಯತ್ನಗಳು ಆಧ್ಯಾತ್ಮಿಕ ಸಮಾನತೆಗಾಗಿಯೇ ಹೊರತು ಸಾಮಾಜಿಕ, ಆರ್ಥಿಕ ಸಮಾನತೆಗಳಿಗಾಗಿ ಅಲ್ಲ. ಮೂರ್ತವಾದ ಕ್ರಿಯೆಯ ಸಂದಿಗ್ಧಗಳು ಹಾಗೂ ಸಂಕೀರ್ಣತೆಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವು ನಮಗಿಲ್ಲದಂತಾಗಿದೆ. ವಿನೋಬಾ ಭಾವೆಯಂಥವರು ಕಾಂಚನ ವಿಮುಕ್ತಿಗಾಗಿ ಬೋಧಿಸುವ ಮಾರ್ಗವು ಮನುಷ್ಯ ಸ್ವಭಾವದ ದೌರ್ಬಲ್ಯಗಳ ಅರಿವೇ ಇಲ್ಲದ ಅವಾಸ್ತವಿಕ ಮಾರ್ಗವಾಗಿದೆ. ಇಂಥ ಹತ್ತು ಹಲವಾರು ನಿರಾಶೆಗಳ ಕಾಲದಲ್ಲಿ ಲೋಹಿಯಾ ಆಶಾವಾದಿಯಾಗಿದ್ದಾರೆ. ಯಾಕೆಂದರೆ ಸಮಾಜವಾದಿ ಮೌಲ್ಯಗಳಿಗಾಗಿ ನಡೆಯುವ ಯಾವ ಹೋರಾಟಕ್ಕೂ ಅಂತಿಮವಾದ ಸೋಲು ಇಲ್ಲ, ಅಂತಿಮವಾದ ಗೆಲುವು ಒಂದು ಆದರ್ಶವಾಗಿಯಂತೂ ಇದ್ದೇ ಇರುತ್ತದೆ.

ಸೈದ್ಧಾಂತಿಕ ರಾಜಕೀಯ ಚಿಂತನೆಯಲ್ಲಿ ಕಂಡುಬರದ ಹಲವಾರು ಸೂಕ್ಷ್ಮತೆಗಳು ಈ ಬರಹಗಳಲ್ಲಿವೆ. ಮುಖ್ಯವಾಗಿ ಮೂರ್ತತೆ, ಅಮೂರ್ತತೆಯ ಪರಿಕಲ್ಪನೆ. ಇದು ಕೇವಲ ಒಂದು ರೂಪಕವಲ್ಲ. ರಾಜಕೀಯ ಸಿದ್ಧಾಂತ ಹಾಗೂ ನೈಜ ಕ್ರಿಯೆಗಳ ಮಧ್ಯದ dialectic ಅನ್ನು ಅರ್ಥ ಮಾಡಿಕೊಳ್ಳಲು ಅವಶ್ಯಕವಾದ ಸೃಜನಶೀಲ ಒಳನೋಟವನ್ನು ಅದು ಕೊಡುತ್ತದೆ. ಭಾರತದ ಸನ್ನಿವೇಶವನ್ನು ಅರ್ಥ ಮಾಡಿಕೊಳ್ಳಲು ಲೋಹಿಯಾ ಅದನ್ನು ಬಳಸಿಕೊಳ್ಳುತ್ತಾರೆ. ಅದೇ ರೀತಿ ಚರಿತ್ರೆಯಲ್ಲಿಯೇ ಅತ್ಯಂತ ನಿರ್ಮಮವಾದ ಹಿಂಸೆಯ ಕಾಲವಾದ ಇಪ್ಪತ್ತನೆಯ ಶತಮಾನದಲ್ಲಿ ನಡೆದ ಪ್ರತಿಭಟನೆಗಳು ಹಾಗೂ ಸಪ್ತಕ್ರಾಂತಿಗಳ ಸಾಧ್ಯತೆಗಳನ್ನು. ಅವರು ನಿಷ್ಠುರವಾಗಿ ಆಧುನಿಕ ಜಗತ್ತಿನ ಹಿಂಸೆ ಹಾಗೂ ಅಸಮಾನತೆಗಳನ್ನು ಪರಿಶೀಲಿಸುತ್ತಲೇ ಅವುಗಳ ವಿರುದ್ಧ ಮಾನವ ಸಮುದಾಯಗಳು ಮಾಡುತ್ತಿರುವ ಪ್ರತಿಭಟನೆಗಳ ಬಗ್ಗೆ ಆಶಾವಾದಿಯಾಗಿದ್ದಾರೆ. ಇದನ್ನೇ ನಾನು ತಾಳ್ಮೆಯೆಂದು ಕರೆದಿರುವುದು.

ಈ ಬರಹಗಳಲ್ಲಿ ತನ್ನ ಜ್ಞಾನದ ಅಧಿಕಾರವನ್ನು ಚಲಾಯಿಸುವ ನಾಯಕನಾಗಲೀ, ತನ್ನ ಸಿದ್ಧಾಂತಗಳ ಅಂತಿಮ ಜಯವನ್ನೇ ಧ್ಯಾನಿಸುವ ಚಿಂತಕನಾಗಲೀ ಇಲ್ಲ, ಒಬ್ಬ ಪ್ರಬುದ್ಧವಾದ ಸಂವಾದಕಾರನಿದ್ದಾನೆ, ಸಹಭಾಗಿಯೊಬ್ಬನಿದ್ದಾನೆ. ಆದ್ದರಿಂದಲೇ ಈ ಬರಹಗಳು ಬಹುಕಾಲದವರೆಗೆ ನಮ್ಮ ಮೇಲೆ ಆಳವಾದ ಪರಿಣಾಮವನ್ನು ಉಂಟುಮಾಡಬಲ್ಲವು.

ನಮ್ಮ ಹೆಮ್ಮೆಯ ಅನುವಾದಕರಾದ ಹಸನ್ ನಯೀಂ ಸುರಕೋಡರ ಅನುವಾದ ಎಂದಿನಂತೆ ಸರಳವಾಗಿದೆ. ಆದರೆ ಕೆಲವು ಭಾಗಗಳಲ್ಲಿ ಅಸ್ಪಷ್ಟತೆ ಇದೆ. ವಾದದ ಲಯ ತಪ್ಪಿದಂತೆ ಅನ್ನಿಸುತ್ತದೆ.

**–ಡಾ. ರಾಜೇಂದ್ರ ಚೆನ್ನಿ**

# ಪತ್ರಿಕೆಯ ಎಲ್ಲ ಓದುಗರಿಗೂ

# ಹಾರ್ದಿಕ ಶುಭಾಶಯಗಳು



**ಗೋಪಾಲಕೃಷ್ಣ ಪಿ**

ಮತ್ತು **ಹೇಮಲತಾ ಬಿ ಕೃಷ್ಣ**

ಸಿವಿಲ್ ಗುತ್ತಿಗೆದಾರರು

ಮೇದರಕೇರಿ, ಗಂಗಾಪರಮೇಶ್ವರಿ ನಗರ

ಸಾಗರ(ಶಿವಮೊಗ್ಗ ಜಿಲ್ಲೆ)

**'ಹೊಸ ಮನುಷ್ಯ'ದ ಓದುಗರಿಗೆ**

**ಹೃತ್ಪೂರ್ವಕ ಶುಭಾಶಯಗಳು**



**–ಎಂ.ಎಸ್. ರುದ್ರೇಶ್ವರ ಸ್ವಾಮಿ**

ಮತ್ತು **ಶ್ರೀಮತಿ ವನಜಾಕ್ಷಿ**

**ತಿಂಗಳ ಸಾಲುಗಳು...**



ನೀವು ನಿಮ್ಮನ್ನು ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಭಾರತೀಯ, ಐರೋಪ್ಯ, ಅಥವಾ ಮತ್ತೆ ಬೇರೆ ಏನೋ ಎಂದು ಗುರುತಿಸಿಕೊಂಡು ವಿಂಗಡಿಸಿಕೊಳ್ಳುವ ಮೂಲಕ ಹಿಂಸಕರಾಗುವಿರಿ. ಹೀಗೆ ಪೂರಾ ಮಾನವತೆಯಿಂದ ಬೇರ್ಪಡಿಸಿಕೊಳ್ಳುವುದರಲ್ಲೇ ಹಿಂಸೆ ಹುಟ್ಟುವುದು.

**–ಜೆ. ಕೃಷ್ಣಮೂರ್ತಿ**

**ಪತ್ರಿಕೆಗೆ ಶುಭ ಕೋರುತ್ತಾ...**

**ಬಿ.ಸುರೇಶ**

**ಡಾ. ವಿಜಯಾ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn., Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15
ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204 (Karnataka)